ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 7 ಶನಿವಾರ 2023

ಸಂಪುಟ: 43 | ಸಂಚಿಕೆ: 261 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹಾವೇರಿಯಲ್ಲಿ ಅಕ್ಷರ ಜಾತ್ರೆಗೆ ಚಾಲನೆ

ನಾಡು–ನುಡಿಯ ವಿಚಾರದಲ್ಲಿ ಯಾವ ರಾಜೀ ಇಲ್ಲ: ಹೆಬ್ಬಾರ್



ಹಾವೇರಿ, ಜ.6–ಏಲಕ್ಕಿ ಕಂಪಿನ ನಗರಿ ಹಾವೇರಿಯಲ್ಲಿ ಶುಕ್ರವಾರ ಬೆಳಗ್ಗೆ 3 ದಿನಗಳ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆರಂಭಗೊಂಡಿದ್ದು, ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿ, ನಿಗದಿತ ಸಮಯಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಿತು. ಹುಬ್ಬಳ್ಳಿಯ ರಾಷ್ಟ್ರೀಯ ಹೆದ್ದಾರಿಯ 130 ಎಕರೆ ವಿಸ್ತೀರ್ಣ ಜಾಗದಲ್ಲಿ 'ಕನಕ–ಶರೀಫ–ಸರ್ವಜ್ಞ ವೇದಿಕೆ' ಮುಂಭಾಗ ಬೆಳಗ್ಗೆ 7 ಗಂಟೆಗೆ ಧ್ವಜಾರೋಹಣ ನೆರವೇರಿತು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಮ್ ಹೆಬ್ಬಾರ್, ಸಾಹಿತ್ಯ ಪರಿಷತ್ತಿನ ಧ್ವಜವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ ಮಹೇಶ್ ಜೋಶಿ, ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಲಿಂಗಯ್ಯ ಬಿ ಹಿರೇಮಠ ನಾಡ ಧ್ವಜದ ಧ್ವಜಾರೋಹಣ ನೆರವೇರಿಸಿದರು.

ವಿವಿಧ ಕಲಾತಂಡಗಳು ಸಾಹಿತ್ಯ ಮೆರವಣಿಗೆಯಲ್ಲಿ ಪಾಲ್ಗೊಂಡು ಮೆರುಗು ನೀಡಿದವು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಶಿವರಾಮ್ ಹೆಬ್ಬಾರ್, ನ ಭೂತೋ, ನ ಭವಿಷ್ಯತಿ ಎನ್ನುವ ರೀತಿಯಲ್ಲಿ ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕನ್ನಡಿಗರು ಮತ್ತು ಸಾಹಿತ್ಯಾಸಕ್ತರ ನೆನಪಿನಲ್ಲಿ ಉಳಿಯುವಂತೆ ಆಯೋಜಿಸಲಾಗಿದೆ. ಕನ್ನಡಿಗರ ಬಗ್ಗೆ, ಭಾಷೆ, ನಾಡು–ನುಡಿಯ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುವವರಿಗೆ ತಕ್ಕ ಉತ್ತರ ನೀಡಲಾಗುವುದು. ನಾಡು ನುಡಿ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ ಎಂದರು. ▶ 6ನೇ ಪುಟಕ್ಕೆ

ಕನ್ನಡಕ್ಕೆ ಆಪತ್ತು ತರುವ ಶಕ್ತಿ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ: ಸಿಎಂ

ಹಾವೇರಿ, ಜ.6– ಆದಿ ಕವಿ ಅಮೋಘವರ್ಷ ನೃಪತುಂಗರಿಂದ ಆರಂಭವಾಗಿ, ರನ್ನ, ಪಂಪರಿಂದ ಹಿಡಿದು, 8 ಜನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಹೊಂದಿರುವ ದೇಶದ ಏಕೈಕ ಭಾಷೆ ನಮ್ಮ ಕನ್ನಡ ಎಂಬುದು ನಮಗೆ ಹೆಮ್ಮೆಯ ವಿಷಯ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಹೇಳಿದ್ದಾರೆ. ಇಂದು ಏಲಕ್ಕಿ ನಾಡು ಹಾವೇರಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ▶ 6ನೇ ಪುಟಕ್ಕೆ

ಅಧ್ಯಕ್ಷನಾಗಿ ಪಕ್ಷ ಸಂಘಟಿಸಿ, ಅಧಿಕಾರಕ್ಕೆ ತಂದು

ಕುರ್ಚಿ ಬಿಡಲು ಸಿದ್ಧನಿಲ್ಲ

● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಖಡಕ್ ನುಡಿ ● ಸಿದ್ದರಾಮಯ್ಯ ಬೆಂಬಲಿಗರ ಅಧಿಕಾರ ಹಂಚಿಕೆ ಸೂತ್ರಕ್ಕೆ ನಕಾರ

ಬೆಂಗಳೂರು, ಜ.6(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದರೆ ಮುಖ್ಯಮಂತ್ರಿ ಸ್ಥಾನ ಹಂಚಿಕೊಳ್ಳಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಿರಾಕರಿಸಿದ್ದಾರೆ.



ಅಧ್ಯಕ್ಷನಾಗಿ ಪಕ್ಷವನ್ನು ಸಂಘಟಿಸಿ, ಅಧಿಕಾರಕ್ಕೆ ತಂದು ಇನ್ನೊಬ್ಬರಿಗೆ ಕುರ್ಚಿ ಬಿಟ್ಟುಕೊಡಲು ನಾನು ಸಿದ್ಧ ಇಲ್ಲ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಬೆಂಬಲಿಗರಿಗೆ ನೇರವಾಗಿ ತಿಳಿಸಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬರುತ್ತದೆ ಎಂಬ ಲೆಕ್ಕಾಚಾರದಲ್ಲಿರುವ ಸಿದ್ದರಾಮಯ್ಯ ಬೆಂಬಲಿಗರು ತಮ್ಮ ನಾಯಕನನ್ನು ಮೊದಲಾವಧಿಗೆ ಮುಖ್ಯಮಂತ್ರಿ ಮಾಡಲು ಲೆಕ್ಕಾಚಾರ ಹಾಕಿದ್ದಾರೆ. ತಲಾ ಎರಡೂವರೆ ವರ್ಷಗಳಂತೆ ಅಧಿಕಾರ ಹಂಚಿಕೊಂಡು, ನೀವು ಮತ್ತು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ ಎಂದಿದ್ದಾರೆ. ಚುನಾವಣೆಗೂ ಮುನ್ನವೇ ಅಧಿಕಾರ ಹಂಚಿಕೆ ನಿರ್ಧಾರವಾಗುವುದು ಸೂಕ್ತ. ನಾವು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂದು ಶಿವಕುಮಾರ್ ಅವರ ಮನವೊಲಿಸುವ ಕೆಲಸ ಮಾಡಿದ್ದರು.

ಸಿದ್ದು ಬೆಂಬಲಿಗರ ಮನವಿಯನ್ನು ನಯವಾಗಿ ತಿರಸ್ಕರಿಸಿದ ಶಿವಕುಮಾರ್ ಪಕ್ಷವನ್ನು ಸಂಘಟಿಸಿ, ಗೆಲುವನ್ನು ಇನ್ನೊಬ್ಬರ ಮಡಿಲಿಗೆ ಹಾಕಲು ಸಿದ್ಧನಿಲ್ಲ. ನಾನು ಹಗಲು ರಾತ್ರಿ ದುಡಿಯುತ್ತಿದ್ದೇನೆ. ನಾವು ಮೊದಲು ಪಕ್ಷವನ್ನು ಅಧಿಕಾರಕ್ಕೆ ತರೋಣ. ವರಿಷ್ಠರು ಮುಂದಿನದನ್ನು ನೋಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ನಾನಂತೂ ಅಧಿಕಾರ ಹಂಚಿಕೆಯ ಸೂತ್ರಕ್ಕೆ ಒಲವು ತೋರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಶಿವಕುಮಾರ್ ಅವರು ಅಧಿಕಾರ ಹಂಚಿಕೆಗೆ ನಿರಾಸಕ್ತಿ ತೋರಿದ ಬೆನ್ನಲ್ಲೇ ತಮ್ಮ ಪಕ್ಷದ ಅಧ್ಯಕ್ಷರ ವಿರುದ್ಧವೇ ತಿರುಗಿಬಿದ್ದಿರುವ ಸಿದ್ದು ಬೆಂಬಲಿಗರು ಪಕ್ಷವನ್ನು ತಮಗಿಷ್ಟ ಬಂದಂತೆ ನಡೆಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸುತ್ತಿದ್ದಾರೆ. ಚುನಾವಣಾ ಪೂರ್ವ ಸಮೀಕ್ಷೆಗಾರರು ನೀಡುವ ಸಲಹೆ–ಸೂಚನೆಗಳನ್ನು ಪಾಲಿಸುತ್ತಿಲ್ಲ. ತಾವು ತಮ್ಮ ಸಹೋದರರು ▶ 6ನೇ ಪುಟಕ್ಕೆ

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಹೂಟಗಳ್ಳಿ ನಗರಸಭೆ, ಬೋಗಾದಿ, ರಮ್ಮನಹಳ್ಳಿ, ಶ್ರೀರಾಮಪುರ, ಕಡಕೊಳ ಪಪಂ ವ್ಯಾಪ್ತಿ ಎಲ್ಲಾ ಆಸ್ತಿಗಳಿಗೆ

ಫೆಬ್ರವರಿಯಿಂದ ಖಾತಾ ನೀಡಿಕೆ

● ಶಾಸಕ ಜಿ.ಟಿ.ದೇವೇಗೌಡ ಘೋಷಣೆ ● ಇದಕ್ಕಾಗಿ 'ಇ–ಆಸ್ತಿ' ತಂತ್ರಾಂಶ ಅಭಿವೃದ್ಧಿ ● ಹಲವು ವರ್ಷದಿಂದ ದಾಖಲೆಗಾಗಿ ಕಾದಿದ್ದವರು ಇನ್ನು ನಿರಾಳ ● ಯಾವುದೇ ಲಂಚ–ರುಷವತ್ತು ಇಲ್ಲದೆ ದಾಖಲೆ ಕಲ್ಪಿಸಲು ಅದಾಲತ್



ಮೈಸೂರು, ಜ.6(ಎಂಟಿವೈ)–ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನೂತನ ನಗರಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯ ಎಲ್ಲಾ ಆಸ್ತಿಗಳಿಗೆ ಫೆಬ್ರವರಿ ಮೊದಲ ವಾರದಿಂದ ಖಾತಾ ನೀಡಲಾಗುವುದು. ಇದಕ್ಕಾಗಿ 'ಇ–ಆಸ್ತಿ' ತಂತ್ರಾಂಶ ರೂಪಿಸಲಾಗಿದೆ ಎಂದು ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೈಸೂರು ಮಹಾನಗರ ಪಾಲಿಕೆ ಗಡಿಗೆ ಹೊಂದಿಕೊಂಡಿರುವ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ 10 ಗ್ರಾಮ ಪಂಚಾಯಿತಿಗಳನ್ನು(ಕೆಲವು ಪೂರ್ಣ ಮತ್ತು ಕೆಲವು ಭಾಗಶಃ) ಮೇಲ್ದರ್ಜೆಗೇರಿಸಿ ಹೂಟಗಳ್ಳಿ ನಗರಸಭೆ, ಬೋಗಾದಿ, ರಮ್ಮನಹಳ್ಳಿ, ಶ್ರೀರಾಂಪುರ ಹಾಗೂ ಕಡಕೊಳ ಪಟ್ಟಣ ಪಂಚಾಯಿತಿ ರಚಿಸಿದ ನಂತರ ಆಸ್ತಿಗಳಿಗೆ ಖಾತೆ ಮಾಡಿಕೊಡುವ ಪ್ರಕ್ರಿಯೆಗೆ ಉಂಟಾಗಿದ್ದ ತೊಡಕು ನಿವಾರಣೆಯಾಗಿದ್ದು, ಫೆಬ್ರವರಿ ಮೊದಲ ವಾರದಿಂದ ಅಧಿಕೃತ ಹಾಗೂ ಅನಧಿಕೃತವೆಂದು ವಿಂಗಡಿಸಿ ಆಸ್ತಿಗಳಿಗೆ ನಮೂನೆ–3(ಖಾತೆ) ನೀಡಲಾಗುವುದು. ಇದರಿಂದ ಸುಮಾರು 103 ಬಡಾವಣೆಯ 54 ಸಾವಿರಕ್ಕಿಂತ ಹೆಚ್ಚು ಆಸ್ತಿ ಮಾಲೀಕರಿಗೆ ಕ್ರಯ, ವಿಕ್ರಯ, ಬ್ಯಾಂಕ್ ಸಾಲಸೌಲಭ್ಯ, ಖಾತಾ ಬದಲಾವಣೆ, ಕಟ್ಟಡ ನಿರ್ಮಾಣದ ನಕ್ಷೆ ಅನುಮೋದನೆ, ಪರವಾನಗಿ ಪಡೆಯಲು ಅನುಕೂಲವಾಗಲಿದೆ ಎಂದರು.

10 ಗ್ರಾಪಂ ಮೇಲ್ದರ್ಜೆಗೆ: ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ 10 ಗ್ರಾಪಂಗಳನ್ನು ▶ 6ನೇ ಪುಟಕ್ಕೆ

ಕೇರಳದಲ್ಲಿ ಹಕ್ಕಿಜ್ವರ: ಗಡಿಯಲ್ಲಿ ಕಟ್ಟೆಚ್ಚರ

● ಕೇರಳದಿಂದ ಕೋಳಿ ಸಾಗಾಣಿಕೆಗೆ ನಿಷೇಧ ● ಗೂಡ್ಸ್ ವಾಹನಗಳಿಗೆ ಸೋಡಿಯಂ ದ್ರಾವಣ ಸಿಂಪಡಣೆ

ಯಳಂದೂರು, ಜ.6–ಚಾಮರಾಜನಗರಕ್ಕೆ ಹೊಂದಿಕೊಂಡಂತಿರುವ ಕೇರಳ ರಾಜ್ಯದಲ್ಲಿ ಹಕ್ಕಿಜ್ವರ ವ್ಯಾಪಕವಾಗಿ ಹರಡುತ್ತಿದ್ದು, ಗಡಿಭಾಗದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಸೋಂಕು ಹರಡಿದ್ದ ಆರು ಸಾವಿರಕ್ಕೂ ಹೆಚ್ಚು ಕೋಳಿಗಳನ್ನು ಈಗಾಗಲೇ ನಾಶಪಡಿಸಲಾಗಿದೆ. ಜೊತೆಗೆ ಕೊಟ್ಟಾಯಂ ಸುತ್ತಮುತ್ತಲಿನಲ್ಲಿ ಕೋಳಿ ಹಾಗೂ ಮೊಟ್ಟೆ ಮಾರಾಟ ನಿಷೇಧಿಸಲಾಗಿದೆ. ಇದೇ ಕಾರಣದಿಂದ ಲಕ್ಷದ್ವೀಪ, ಕೇರಳದಿಂದ ಕೋಳಿ ಹಾಗೂ ಮೊಟ್ಟೆ ಆಮದು ನಿಲ್ಲಿಸಿದೆ. ನೆರೆ ರಾಜ್ಯದ ಈ ಘಟನೆ ಕೇರಳದ ಗಡಿ ಪ್ರದೇಶವನ್ನು ಹಂಚಿಕೊಂಡಿರುವ ಚಾಮರಾಜನಗರ, ಮೈಸೂರು, ಕೊಡಗು ಸೇರಿದಂತೆ ಇತರೆಡೆ ಭೀತಿಯುಂಟು ಮಾಡಿದೆ.

ಇದರಿಂದ ಎಚ್ಚೆತ್ತುಕೊಂಡಿರುವ ಚಾಮರಾಜನಗರ ಜಿಲ್ಲಾಡಳಿತವು ಗುಂಡ್ಲುಪೇಟೆ ತಾಲೂಕಿನ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಪಶು ಇಲಾಖೆ ಮೂಲಕ ಕಟ್ಟುನಿಟ್ಟಿನ ಕ್ರಮ ವಹಿಸಿದೆ. ಕೇರಳದಿಂದ ಕರ್ನಾಟಕಕ್ಕೆ ಆಗಮಿಸುವ ಗೂಡ್ಸ್ ವಾಹನಗಳನ್ನು ಪಶು ಇಲಾಖಾಧಿಕಾರಿಗಳು ತಪಾಸಣೆ ಮಾಡಿ, ರಾಜ್ಯದೊಳಗೆ ಬಿಡುತ್ತಿದ್ದಾರೆ. ಕೇರಳದಿಂದ ರಾಜ್ಯಕ್ಕೆ ಬರುವ ಗೂಡ್ಸ್ ವಾಹನಗಳಿಗೆ ಸೋಡಿಯಂ ದ್ರಾವಣವನ್ನು ಸಿಂಪಡಿಸ



ಲಾಗುತ್ತಿದೆ. ಕೇರಳದಿಂದ ರಾಜ್ಯದೊಳಗೆ ಮುಂದಿನ ಆದೇಶದವರೆಗೆ ಕೋಳಿ ಸಾಗಾಣಿಕೆಯನ್ನು ನಿಷೇಧಿಸಲಾಗಿದೆ. ಚಾಮರಾಜನಗರ ಜಿಲ್ಲಾ ಪಶುಪಾಲನಾ ಇಲಾಖೆಯ ಉಪನಿರ್ದೇಶಕರಾದ ಡಾ.ಶಿವಣ್ಣ ಮಾತನಾಡಿ ಚಾಮರಾಜನಗರ ಜಿಲ್ಲೆಯು ಕೇರಳದೊಂದಿಗೆ ಗಡಿ ಹಂಚಿಕೊಂಡಿದ್ದು, ನೆರೆ ರಾಜ್ಯದಲ್ಲಿ ಹಕ್ಕಿಜ್ವರ ಕಾಣಿಸಿಕೊಂಡಿರುವ ಹಿನ್ನಲೆಯಲ್ಲಿ ಅದು ಜಿಲ್ಲೆಗೆ ಹರಡದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಲಾಗಿದೆ.

ಕೇಂದ್ರದ 'ಸ್ವದೇಶ ದರ್ಶನ' ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮೈಸೂರು ಆಯ್ಕೆ ಹಿನ್ನೆಲೆ


ದಸರಾ ವಸ್ತುಪ್ರದರ್ಶನ ಆವರಣದಲ್ಲಿ ವರ್ಷಪೂರ್ತಿ ಸ್ವದೇಶಿ ವಸ್ತುಗಳ ಮಾರಾಟ

■ ಸಂಸದ ಪ್ರತಾಪ್ ಸಿಂಹ ಮಾಹಿತಿ ■ ಇದೂ ತಮ್ಮ ಅವಿರತ ಪ್ರಯತ್ನದ ಫಲ



ಮೈಸೂರು, ಜ. 6(ಆರ್‌ಕೆ)– ಕೇಂದ್ರ ಸರ್ಕಾರದ 'ಸ್ವದೇಶ ದರ್ಶನ' ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮೈಸೂರು ನಗರ ಆಯ್ಕೆಯಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯವು ಜಾರಿಗೆ ತಂದಿರುವ ಸ್ವದೇಶ ದರ್ಶನ ಮಹತ್ವಾಕಾಂಕ್ಷೆ ಯೋಜನೆ ಅನುಷ್ಠಾನಕ್ಕೆ ಕರ್ನಾಟಕ ರಾಜ್ಯದ ಮೈಸೂರು ಮತ್ತು ಹಂಪಿಯನ್ನು ಆಯ್ಕೆ ಮಾಡಲಾಗಿದ್ದು, ಈ ಬಗ್ಗೆ ಇಷ್ಟರಲ್ಲೇ ಅಧಿಕೃತ ಆದೇಶ ಹೊರ ಬೀಳಲಿದೆ ಎಂದರು.

ಈ ಯೋಜನೆಯಡಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ಅನುದಾನ ಕೋರಿ ಮೈಸೂರು ಸೇರಿದಂತೆ ರಾಜ್ಯದ 5 ನಗರಗಳ ಪ್ರಸ್ತಾವನೆ ಸಲ್ಲಿಸಲಾಗಿತ್ತು. ನಾನು, ಮುಖ್ಯಮಂತ್ರಿಗಳು, ಕೇಂದ್ರ ಪ್ರವಾಸೋದ್ಯಮ ಸಚಿವರನ್ನು ಭೇಟಿ ಮಾಡಿ ಪ್ರವಾಸೋದ್ಯಮಕ್ಕೆ ವಿಫುಲ ಅವಕಾಶವಿರುವ ಸಾಂಸ್ಕೃತಿಕ ನಗರಿಯನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಿದ ಹಿನ್ನೆಲೆಯಲ್ಲಿ ಅವರು ಮೈಸೂರನ್ನು ಆಯ್ಕೆ ಮಾಡಲು ಸಮ್ಮತಿಸಿದರು ಎಂದು ತಿಳಿಸಿದರು. ▶ 6ನೇ ಪುಟಕ್ಕೆ



ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಕಾವೇರಿ ಎಕ್ಸ್‌ಪ್ರೆಸ್ ವೇ ಹೆಸರೇ ಸೂಕ್ತ

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ ಕಾವೇರಿ ಎಕ್ಸ್‌ಪ್ರೆಸ್ ವೇ ಎಂದು ನಾಮಕರಣ ಮಾಡುವುದೇ ಸೂಕ್ತ ಎಂದು ಸಂಸದ ಪ್ರತಾಪ್ ಸಿಂಹ, ತಮ್ಮ ಉದ್ದೇಶಿತ ಪ್ರಸ್ತಾಪವನ್ನು ಪುನರುಚ್ಚರಿಸಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಕೊಡಗಿನಲ್ಲಿ ಉಗಮವಾಗಿ ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಹರಿಯುವ ಕಾವೇರಿ ದಕ್ಷಿಣ ಭಾರತದ ಪವಿತ್ರ ನದಿ. ಆ ನೀರನ್ನು ರಾಜ್ಯದ ಕೊಡಗು, ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಜನರು ಬಳಸುತ್ತಿದ್ದಾರೆ. ರಾಷ್ಟ್ರೀಯ ಹೆದ್ದಾರಿಯೂ ಸಹ ಬೆಂಗಳೂರಿನಿಂದ ಆರಂಭವಾಗಿ ಕೊಡಗು ಜಿಲ್ಲೆಗೂ ಹಾದು ಹೋಗುವುದರಿಂದ ಅದಕ್ಕೆ ಕಾವೇರಿ ಎಕ್ಸ್‌ಪ್ರೆಸ್ ವೇ ಎಂದು ನಾಮಕರಣ ಮಾಡಬೇಕೆಂದು ನಾನು ಮುಖ್ಯಮಂತ್ರಿಗಳು, ▶ 6ನೇ ಪುಟಕ್ಕೆ

ಮೈಸೂರಲ್ಲಿ ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟ; ಎಲ್ಲಾ ವ್ಯವಸ್ಥೆಗಳನ್ನು ಕ್ರೀಡಾಪಟುಗಳಿಗೆ ಕಲ್ಪಿಸಿ



ಮೈಸೂರು, ಜ.6–ರಾಜ್ಯ ಮಟ್ಟದ 2022–23ನೇ ಸಾಲಿನ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಿ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ 2022–23ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2 ವರ್ಷದ ಕೊರೊನಾ ನಂತರ ಮೊದಲ ಬಾರಿಗೆ ಮೈಸೂರಿನಲ್ಲಿ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಸುತ್ತಿದ್ದು, ಎಲ್ಲಾ ಕ್ರೀಡಾಪಟುಗಳ, ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ವ್ಯವಸ್ಥೆಗಳನ್ನು ರೂಪಿಸಿ ಎಂದು ತಿಳಿಸಿದರು. ಪ್ರತಿಯೊಬ್ಬ ಕ್ರೀಡಾಪಟುವಿಗೂ ಉತ್ತಮ ವಸತಿ ಸೌಲಭ್ಯ ಕಲ್ಪಿಸಿ. ಕ್ರೀಡಾಂಗಣಕ್ಕೆ ಶಾಲಾ ಬಸ್ ವ್ಯವಸ್ಥೆ ಮಾಡಬೇಕು. ಒಂದು ಜಿಲ್ಲೆಯ ಮಕ್ಕಳಿಗೆ ಮೂರು ಜನ ಅಧಿಕಾರಿಗಳನ್ನು ನೇಮಿಸಿ ಕ್ರೀಡಾಕೂಟ ಮುಗಿಯುವವರೆಗೆ ಅವರ ಸಂಪೂರ್ಣ ಜವಾಬ್ದಾರಿಯನ್ನು ನೋಡಿಕೊಳ್ಳಬೇಕು. ಹೊರಗಿನಿಂದ ಬರುವ ಕ್ರೀಡಾಪಟುಗಳು ಮೈಸೂರಿನ ಕೆಲವು ಸ್ಥಳಗಳನ್ನು ವೀಕ್ಷಿಸಲು ವ್ಯವಸ್ಥೆ ಮಾಡಿ ಎಂದರು.

ಕ್ರೀಡಾಂಗಣದಲ್ಲಿ ಮೊಬೈಲ್ ಟಾಯ್ಲೆಟ್ಸ್ ವ್ಯವಸ್ಥೆ ಮಾಡಬೇಕು. ಪೊಲೀಸ್ ಸಿಬ್ಬಂದಿ ಸಂಪೂರ್ಣ ಕ್ರೀಡಾಕೂಟದ ಭದ್ರತೆಯನ್ನು ವಹಿಸಬೇಕು. ವೈದ್ಯಕೀಯ ವ್ಯವಸ್ಥೆ ಮುಖ್ಯವಾಗಿದ್ದು ಅದಕ್ಕಾಗಿ ಕ್ರೀಡಾಂಗಣದಲ್ಲಿ ಸದಾ ಸಿದ್ಧವಿರುವಂತೆ ವೈದ್ಯರ ತಂಡವನ್ನು ನೇಮಿಸಿ, ಆಂಬುಲೆನ್ಸ್ ಸೌಲಭ್ಯ ಒದಗಿಸಿ ಎಂದು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ರಾಜೇಂದ್ರ ಅರಸ್ ಮಾತನಾಡಿ, ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ಮಟ್ಟದಲ್ಲಿ ಸ್ಪರ್ಧೆಗಳು ನಡೆಯಲಿದ್ದು, 4608 ಕ್ರೀಡಾಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಪ್ರಾಥಮಿಕ ಶಾಲಾ ಮಕ್ಕಳಿಗೆ 10 ಸ್ಪರ್ಧೆಗಳು ಮತ್ತು ಪ್ರೌಢಶಾಲಾ ಮಕ್ಕಳಿಗೆ 19 ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ ಎಂದರು. ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಪ್ರಸಾದ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಲ್ಲಿ

ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ವಿಟಿಯು ಕುಲಪತಿ ಡಾ.ವಿದ್ಯಾಶಂಕರ್ ಚಾಲನೆ

ಇಂಜಿನಿಯರಿಂಗ್ ಪಠ್ಯ ಪರಿಷ್ಕರಣೆ ಸಂಬಂಧ ಪ್ರತಿಕ್ರಿಯೆ ಆರಂಭ



ಮೈಸೂರು, ಜ.6– ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸುಸ್ಥಿರ ಅಭಿವೃದ್ಧಿಗಾಗಿ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಪರಿವರ್ತನೆ ಕುರಿತಾದ ಹತ್ತನೇ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಕುಲಪತಿ ಡಾ.ಎಸ್.ವಿದ್ಯಾಶಂಕರ್ ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ 2020ಯನ್ನು ದೇಶದಲ್ಲಿಯೇ ಮೊದಲ ಬಾರಿಗೆ ಜಾರಿಗೊಳಿಸಿದ ರಾಜ್ಯ ಕರ್ನಾಟಕ. ವಿಟಿಯು ಅಡಿಯಲ್ಲಿ 127 ಎಂಜಿನಿಯರಿಂಗ್ ಕಾಲೇಜಿನಡಿಯಲ್ಲಿದ್ದು, 30 ಸ್ವಾಯತ್ತ ಕಾಲೇಜುಗಳಿವೆ. 2030ರ ವೇಳೆಗೆ ಎಲ್ಲ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ವಾಯತ್ತಗೊಳಿಸುವ ನಿಟ್ಟಿನಲ್ಲಿ ಎನ್‌ಇಪಿ ಗುರಿ ಹೊಂದಿದೆ. ಆ ಮೂಲಕ ಎಲ್ಲ ತಾಂತ್ರಿಕ ವಿದ್ಯಾಲಯಗಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸ್ವಾವಲಂಬಿಯಾಗಿ ಮಾಡುವ ಉದ್ದೇಶವಿದೆ ಎಂದು ಅವರು ತಿಳಿಸಿದರು.

ಎಂಜಿನಿಯರಿಂಗ್ ಪಠ್ಯಕ್ರಮದಲ್ಲಿ ಬದಲಾವಣೆ ತರುವ ಸಂಬಂಧ ರಾಷ್ಟ್ರೀಯ ಸಾಫ್ಟ್‌ವೇರ್ ಹಾಗೂ ಸೇವಾ ಒಕ್ಕೂಟ (ನಾಸ್ಕಾಂ) ಜೊತೆಗೆ ಮಾತುಕತೆ ನಡೆಸಿದ್ದು, ಮುಂದಿನ ಎರಡು ತಿಂಗಳಲ್ಲಿ ಜಾರಿಗೆ ತರಲಾಗುವುದು. ಎನ್‌ಇಪಿ ಜಾರಿಯಿಂದ ಎಂಜಿನಿಯರಿಂಗ್ ಶಿಕ್ಷಣದಲ್ಲಿ ಅಮೂಲಾಗ್ರ ಬದಲಾವಣೆ ತರಲಾಗಿದೆ ಎಂದು ವಿವರಿಸಿ, ಎಂಜಿನಿಯರಿಂಗ್ ಸೇರಿದಂತೆ ಸಾಂಪ್ರದಾಯಿಕ ಕೋರ್ಸ್‌ಗಳಲ್ಲಿ ಕೌಶಲ ಆಧರಿಸಿ ಶಿಕ್ಷಣಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ವಿವಿಸಿಇಯ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಐಯುಸಿಇಇ ಫೌಂಡೇಶನ್‌ನ ಅಧ್ಯಕ್ಷ ಕೃಷ್ಣ ವೇದುಲಾ ಉಪಸ್ಥಿತರಿದ್ದರು.

ನಾಳೆ ಅಂಧಯುಗ ನಾಟಕ ಪ್ರದರ್ಶನ

ಮೈಸೂರು, ಜ.6– ರಂಗಾಯಣದ ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ಜ.8 ರಂದು ಸಂಜೆ 6.30ಕ್ಕೆ ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ರಂಗಾಯಣದ ಭಾರತೀಯ ರಂಗವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಅಭಿನಯಿಸುವ ಸಿದ್ದಲಿಂಗ ಪಟ್ಟಣಶೆಟ್ಟಿ ಮತ್ತು ತಿಪ್ಪೇಸ್ವಾಮಿ ಅನುವಾದಿಸಿರುವ ಧರ್ಮವೀರ ಭಾರತೀಯವರ ಅಂಧಯುಗ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೈಮಾನಿಕ ಸಮೀಕ್ಷೆ ಮೂಲಕ ಹೆದ್ದಾರಿ ಕಾಮಗಾರಿ ಪರಿಶೀಲನೆ ಅವೈಜ್ಞಾನಿಕ

ಕೇಂದ್ರ ಸಚಿವ ನಿತಿನ್ ಗಡ್ಕರಿ ಹೆದ್ದಾರಿ ಪರಿಶೀಲನಾ ಕ್ರಮ ಕುರಿತು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಟೀಕಾ ಪ್ರಹಾರ



ಮೈಸೂರು,ಜ.6(ಪಿಎಂ)– ಬೆಂಗಳೂರು–ಚೆನ್ನೈ ಮತ್ತು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಗಳ ಕಾಮಗಾರಿಯನ್ನು ವೈಮಾನಿಕ ಸಮೀಕ್ಷೆ ಮೂಲಕ ಪರಿಶೀಲನೆ ನಡೆಸಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಕ್ರಮ ಅವೈಜ್ಞಾನಿಕ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಟೀಕಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಬಳಗದ 2023ರ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆಕಾಶದ ಮೂಲಕ ಹೆದ್ದಾರಿ ಸಮೀಕ್ಷೆ ಕ್ರಮ ಸೂಕ್ತವಲ್ಲ. ಅಲ್ಲಿಂದ ರಸ್ತೆಯ ಗುಣಮಟ್ಟವನ್ನು ಹೇಗೆ ಪರಿಶೀಲನೆ ಮಾಡಲು ಸಾಧ್ಯ. ಇದರೊಂದಿಗೆ ಸಚಿವರು ಹೊಸ ಆಯಾಮ ಸೃಷ್ಟಿಸಿದ್ದಾರೆ. ಸಚಿವರು ರಸ್ತೆ ಮಾರ್ಗವಾಗಿ ಸಾಗುವ ಮೂಲಕ ಜನರ ಅಹವಾಲು ಆಲಿಸಿ, ಎಲ್ಲಿ ಲೋಪದೋಷವಾಗಿದೆ ಎಂಬುದನ್ನು ಖುದ್ದು ವೀಕ್ಷಣೆ ಮಾಡಬೇಕಿತ್ತು. ಆದರೆ, ಇವರಿಗೆ ಇದು ಬೇಕಿಲ್ಲ. ಮೂಲ ಸಮಸ್ಯೆಗಳನ್ನು ಅರಿತುಕೊಳ್ಳುವ ಪ್ರಯತ್ನವನ್ನೇ ಇವರ್‍ಯಾರು ಮಾಡುತ್ತಿಲ್ಲ ಎಂದು ಕುಟುಕಿದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಮಾಲೀಕರಂತೆ ಸಂಸದ ಪ್ರತಾಪ್ ಸಿಂಹ ವರ್ತಿಸುತ್ತಿದ್ದಾರೆ. ಆದರೆ ಅವರ ಕ್ಷೇತ್ರ ವ್ಯಾಪ್ತಿಗೆ ಕೇವಲ 8 ಕಿ.ಮೀ. ಮಾತ್ರ ಬರಲಿದೆ. ಸಂಸದರಾದ ಸುಮಲತಾ ಅಂಬರೀಷ್, ಡಿ.ಕೆ.ಸುರೇಶ್ ಅವರ ಕ್ಷೇತ್ರ ವ್ಯಾಪ್ತಿಗೆ ತಲಾ 57 ಕಿ.ಮೀ. ಬರಲಿದೆ. ಈ ಹೆದ್ದಾರಿಗೆ ಹೆಸರು ನಾಮಕರಣದ ವಿಷಯದಲ್ಲಿ ಸ್ವಂತ ಕಂಪನಿಗೆ ಹೆಸರು ಇಡುವಂತೆ ಸಂಸದ ಪ್ರತಾಪ್ ಸಿಂಹ ವರ್ತಿಸಿದ್ದಾರೆ. ಎಂಎಲ್‌ಸಿ ದಿನೇಶ್ ಗೂಳಿಗೌಡ ಅವರು ಈ ಹೆದ್ದಾರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ಮಾಡಲು ಸಿಎಂಗೆ ಮನವಿ ಸಲ್ಲಿಸಿದ್ದಾರೆ. ಈ ನಿಟ್ಟಿನಲ್ಲಿ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

> “ರಂಗಾಯಣದಲ್ಲಿ ಪ್ರದರ್ಶಿಸಿದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಿದ್ದು, ಇದು ಖಂಡನೀಯ. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪನವರು ರಂಗಾಯಣವನ್ನು ಬಿಜೆಪಿ ಕಾರ್ಯಾಲಯ ಮಾಡಿಕೊಂಡಿದ್ದು, ತಮ್ಮ ಪ್ರಚಾರಕ್ಕಾಗಿ ಈ ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.
> –ಡಾ.ಬಿ.ಜೆ.ವಿಜಯ್‌ಕುಮಾರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷರು.

ನಿರೀಕ್ಷಿತ ಗುರಿಸಾಧನೆಗೆ ವಿದ್ಯಾರ್ಹತೆ ಜೊತೆಗೆ ಕೌಶಲ್ಯ ಅತ್ಯಗತ್ಯ

■ ಎಂಬಿಎ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಿ.ಗೌಡ ಕಿವಿಮಾತು ■ ಕೌಶಲ್ಯ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ





ಮೈಸೂರು, ಜ. 6 (ಆರ್‌ಕೆ)–ಜೀವನದಲ್ಲಿ ಗುರಿ ಸಾಧನೆಗೆ ವಿದ್ಯಾರ್ಹತೆ ಜೊತೆಗೆ ಕೌಶಲ್ಯಾಭಿವೃದ್ಧಿ ಅತ್ಯಗತ್ಯ ಎಂದು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆಎಸ್‌ಡಿಸಿ)ದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಿ.ಗೌಡ, ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ (ಬಿಎಂಎಂಎಸ್) ವತಿಯಿಂದ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಕೌಶಲ್ಯ' ಭಾರತ–ಸವಾಲುಗಳು ಮತ್ತು ಅವಕಾಶಗಳು ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ವಿಜ್ಞಾನ–ತಂತ್ರಜ್ಞಾನ ಅತೀ ವೇಗವಾಗಿ ಬೆಳೆಯುತ್ತಿರುವ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಪದವಿ, ಸ್ನಾತಕೋತ್ತರ ಪದವಿ ಪಡೆದುಕೊಂಡರೆ ಸಾಲದು. ಶೈಕ್ಷಣಿಕ ಜ್ಞಾನದ ಜೊತೆಗೆ ವೃತ್ತಿ ಕೌಶಲ್ಯ, ಭಾಷಾ ಜ್ಞಾನ ಹೊಂದುವುದು ಅತ್ಯವಶ್ಯ ಎಂದರು.

ಇಂದು ಕೈಗಾರಿಕೋದ್ಯಮ, ಐಟಿ–ಬಿಟಿ ಉದ್ಯಮ ಬೃಹದಾಕಾರವಾಗಿ ಬೆಳೆದಿದೆ. ಉದ್ಯೋಗಾವಕಾಶಗಳೂ ವಿಫುಲವಾಗಿದೆ. ಆದರೆ, ತಾಂತ್ರಿಕ ಜ್ಞಾನ, ಕೌಶಲ್ಯ ಇಲ್ಲದಿದ್ದರೆ ಉದ್ಯೋಗ ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ನೀವು ಎಷ್ಟೇ ಉನ್ನತ ಶಿಕ್ಷಣ ಪಡೆದಿದ್ದರೂ, ಕೌಶಲ್ಯ ಇಲ್ಲದಿದ್ದರೆ ಯಾವ ಕಂಪನಿಯೂ ಬರೀ ಶೈಕ್ಷಣಿಕ ವಿದ್ಯಾರ್ಹತೆ ಮೇಲೆ ಉದ್ಯೋಗಾವಕಾಶ ನೀಡುವುದಿಲ್ಲ. ಡೊಮೈನ್ ಮತ್ತು ಸಾಫ್ಟ್‌ಸ್ಕಿಲ್ಸ್ ಹೊಂದಿದರೆ ಮಾತ್ರ ದೇಶದಲ್ಲಷ್ಟೇ ಅಲ್ಲ, ಇಡೀ ವಿಶ್ವದಲ್ಲೇ ಅವಕಾಶ ದೊರೆಯಲಿದೆ ಎಂದರು. ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಪ್ರಮುಖವಾದುದು. ಕೌಶಲ್ಯ ಹೊಂದಿರುವ ಯುವಕರಿಗೆ ವಿದೇಶದಿಂದಲೂ ಭಾರೀ ಬೇಡಿಕೆ ಇದೆ. ಅವರ ಅಗತ್ಯಕ್ಕೆ ತಕ್ಕಂತೆ ತರಬೇತಿ ನೀಡಿ ಕಳುಹಿಸುವುದು, ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡಿ ಯುವಕರನ್ನು ತಯಾರು ಮಾಡಲು ಕರ್ನಾಟಕ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮವು ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದು, ವಿದ್ಯಾರ್ಥಿಗಳೂ ಅದನ್ನು ಬಳಸಿಕೊಳ್ಳಬೇಕೆಂದು ಅವರು ಇದೇ ವೇಳೆ ನುಡಿದರು.

ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ತಮ್ಮ ಶೈಕ್ಷಣಿಕ ಗುಣಮಟ್ಟ, ಸಂಶೋಧನೆಗೆ ಹೆಚ್ಚು ಗಮನ ಹರಿಸುವ ಜೊತೆಗೆ ವಿದ್ಯಾರ್ಥಿಗಳಿಗೆ ಇಂದಿನ ಅಗತ್ಯಕ್ಕೆ ಅನುಗುಣವಾಗಿ ಕೌಶಲ್ಯ ಅಭಿವೃದ್ಧಿ ಬಗ್ಗೆ ತರಬೇತಿ ನೀಡಿ ಉದ್ಯೋಗಕ್ಕೆ ಸಜ್ಜುಗೊಳಿಸುವುದು ಸೂಕ್ತ ಎಂದು ಅಶ್ವಿನ್ ಅಭಿಪ್ರಾಯಪಟ್ಟರು.

ಭಾರತೀಯ ಕೈಗಾರಿಕೆಗಳ ಒಕ್ಕೂಟ (ಸಿಐಐ)ದ ಮೈಸೂರು ವಲಯ ಉಪಾಧ್ಯಕ್ಷ ಸ್ಯಾಮ್ ಚೆರಿಯನ್ ಕೊಂಬುಕಟ್ಟು, ಕೈಗಾರಿಕೆಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೌಶಲ್ಯ ಹೊಂದಿರುವ ಯುವಕರಿಗೆ ಲಭ್ಯವಿರುವ ಉದ್ಯೋಗಾವಕಾಶಗಳ ಕುರಿತಂತೆ ಮಾತನಾಡಿದರು. ಬಿ.ಎನ್.ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ ಅಧ್ಯಕ್ಷ ಪ್ರೊ.ಡಿ.ಆನಂದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದು, ವಿಚಾರ ಸಂಕಿರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ವಿ.ಆರ್. ಶೈಲಜಾ, ವಿಚಾರ ಸಂಕಿರಣದ ಸಂಯೋಜಕಿ ಡಾ. ಎಂ. ಅಮೂಲ್ಯ, ಸಂಘಟನಾ ಸಮಿತಿ ಸದಸ್ಯರಾದ ಪ್ರೊ. ಆಯಿಷಾ ಎಂ. ಷರೀಫ್, ಪ್ರೊ. ಎಸ್.ಜೆ. ಮಂಜುನಾಥ್ ಹಾಗೂ ಪ್ರೊ. ಆರ್. ಮಹೇಶ್ ಪಾಲ್ಗೊಂಡಿದ್ದರು. ನಂತರ ನಡೆದ ಗೋಷ್ಠಿಗಳಲ್ಲಿ ಟ್ರಾನ್ಸ್‌ಫರ್ಮೇಷನ್ ಪ್ರೋಟೋಕಾಲ್ ದಿ ನ್ಯೂ ಮಂತ್ರ ಆಫ್ ದಿ ಸ್ಕಿಲ್ ಡೆವಲಪ್‌ಮೆಂಟ್ ಸೇರಿದಂತೆ ಹಲವು ವಿಷಯಗಳ ಕುರಿತಂತೆ ಸಂಪನ್ಮೂಲ ವ್ಯಕ್ತಿಗಳು ವಿಚಾರ ಮಂಡಿಸಿದರು.

ಮೈಸೂರು ವಿವಿ ಅತಿಥಿ ಉಪನ್ಯಾಸಕರ ಪ್ರತಿಭಟನೆ ಮುಂದುವರಿಕೆ



ಮೈಸೂರು, ಜ5(ಎಸ್‌ಪಿಎನ್)– ಅತಿಥಿ ಉಪನ್ಯಾಸಕರಿಗೆ ಈ ಹಿಂದೆ ನೀಡುತ್ತಿದ್ದ ಪರಿಷ್ಕೃತ ವೇತನ (32 ಸಾವಿರ ರೂ.) ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ವಿವಿ ಅತಿಥಿ ಉಪನ್ಯಾಸಕರ ಬಳಗದ ವತಿಯಿಂದ ಮಾನಸ ಗಂಗೋತ್ರಿ ಪ್ರವೇಶ ದ್ವಾರದ ಮುಂಭಾಗ ನಡೆಸುತ್ತಿರುವ ಪ್ರತಿಭಟನೆ 3ನೇ ದಿನವೂ ಮುಂದುವರೆದಿದೆ.

ವಿಧಾನ ಪರಿಷತ್ ಸದಸ್ಯರಾದ ಎ.ಎಚ್. ವಿಶ್ವನಾಥ್, ಡಾ.ತಿಮ್ಮಯ್ಯ, ಮರಿತಿಬ್ಬೇಗೌಡ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಹಾಗೂ ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್, ಆಮ್ ಆದ್ಮಿ ಪಾರ್ಟಿ ಜಿಲ್ಲಾ ಘಟಕದ ಮಹಿಳಾ ಮುಖಂಡರಾದ ಮಾಳವಿಕ ಗುಬ್ಬಿವಾಣಿ, ಬಿಎಸ್ಪಿ ಮುಖಂಡ ಪುರುಷೋತ್ತಮ್ ಸೇರಿದಂತೆ ಇನ್ನಿತರರು ಇಂದು ಪ್ರತಿಭಟನೆಯಲ್ಲಿ ಪಾಲ್ಗೊಂಡು ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಇದಕ್ಕೂ ಮೊದಲು ಅತಿಥಿ ಉಪನ್ಯಾಸಕರ ಬಳಗದ ವತಿಯಿಂದ ಡಾ.ಚಂದ್ರಶೇಖರ್, ಡಾ.ಗಿರೀಶ್, ಡಾ.ವಿಜಯ್, ಡಾ.ರೇಖಾ ಶ್ರೀನಿವಾಸ್, ಡಾ.ಸೌಜನ್ಯ, ಡಾ.ಚೈತ್ರ ಸೇರಿದಂತೆ ನೂರಾರು ಉಪನ್ಯಾಸಕರು ಮಾನಸ ಗಂಗೋತ್ರಿ ಪ್ರವೇಶ ದ್ವಾರವನ್ನು 9.30 ರಿಂದ 11 ಗಂಟೆಯವರೆಗೆ ಬಂದ್ ಮಾಡಿ, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ಹೊರಹಾಕಿದರಲ್ಲದೆ, 22.8.2022ರಂದು ಮೈಸೂರು ವಿವಿ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಅತಿಥಿ ಉಪನ್ಯಾಸಕರ ಪರಿಷ್ಕೃತ ವೇತನ ಜಾರಿಯಾಗಬೇಕು. ತಾತ್ಕಾಲಿಕ 'ಸಹಾಯಕ ಪ್ರಾಧ್ಯಾಪಕ' ಎಂಬ ಪದನಾಮ ಸೃಜಿಸಿ 50 ಸಾವಿರ ರೂ. ವೇತನ ನೀಡಬೇಕು. ಪ್ರತಿ ತಿಂಗಳು 5 ನೇ ತಾರೀಖಿನೊಳಗೆ ವೇತನ ನೀಡಬೇಕು. ಮಹಿಳಾ ಅತಿಥಿ ಉಪನ್ಯಾಸಕರಿಗೆ ಹೆರಿಗೆ ಭತ್ಯೆ ನೀಡಬೇಕು ಎಂದು ಒತ್ತಾಯಿಸಿದರು.

ಮೈಸೂರು ವಿವಿ ವ್ಯಾಪ್ತಿಯ ಮಹಾರಾಜ, ಯುವ ರಾಜ, ಸಂಜೆ ಕಾಲೇಜು, ಹಾಸನ, ಮಂಡ್ಯ ಹಾಗೂ ಚಾಮರಾಜನಗರದಲ್ಲಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರಿಗೆ ಹಳೆಯ ವೇತನ (28 ಸಾವಿರ) ನೀಡುವ ನಿರ್ಧಾರದಿಂದ ಅನ್ಯಾಯವಾಗುತ್ತದೆ. ಹಾಗಾಗಿ ಈ ಹಿಂದೆ ತೆಗೆದುಕೊಂಡಿರುವ ನಿರ್ಧಾರದಂತೆ ಪರಿಷ್ಕೃತ ವೇತನ ನೀಡಲೇ ಬೇಕು ಎಂದು ಒತ್ತಾಯಿಸಿದರು.

ಮೈಸೂರು ವಿವಿ ಕುಲಸಚಿವೆ ಶೈಲಜಾ, ಕುಲಸಚಿವ (ಪರೀಕ್ಷಾಂಗ) ಜ್ಞಾನಪ್ರಕಾಶ್ ಹಾಗೂ ಲೆಕ್ಕಪರಿಶೋಧನಾಧಿಕಾರಿ ಸೇರಿದಂತೆ ಇತರೆ ಅಧಿಕಾರಿಗಳು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಅತಿಥಿ ಉಪನ್ಯಾಸಕರ ಮನವೊಲಿಕೆ ಯತ್ನ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ವೇಳೆ ಮಧ್ಯ ಪ್ರವೇಶಿಸಿದ ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್, ವಿವಿ ಅಧಿಕಾರಿಗಳು ಅತಿಥಿ ಉಪನ್ಯಾಸಕರ ಪರವಾಗಿ ಸರ್ಕಾರದ ಮಟ್ಟದಲ್ಲಿ ಧ್ವನಿಯಾಗಬೇಕು. ನೀವೇ ಸರ್ಕಾರದ ಪರವಾಗಿ ಮಾತನಾಡಿದರೆ, ಸರ್ಕಾರವೂ ಅತಿಥಿ ಉಪನ್ಯಾಸಕರ ಬೇಡಿಕೆಗಳಿಗೆ ವಿರುದ್ಧವಾಗಿಯೇ ಮಾತನಾಡುತ್ತದೆ. ಹಾಗಾಗಿ ಮೈಸೂರು ವಿವಿ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಿ, 2022ರ ಪರಿಷ್ಕೃತ ವೇತನ 32 ಸಾವಿರ ರೂ. ನೀಡಲು ಅನುದಾನ ಬಿಡುಗಡೆಗೊಳಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತನ್ನಿ ಎಂದು ಸಲಹೆ ನೀಡಿದರು.


ಇದಕ್ಕೆ ಪ್ರತಿಕ್ರಿಯೆ ನೀಡಿದ ವಿವಿ ಅಧಿಕಾರಿಗಳು, ಮೈಸೂರು ವಿವಿ ಕುಲಪತಿಗಳು ಪ್ರವಾಸದಲ್ಲಿದ್ದಾರೆ. ಅವರು ಮೈಸೂರಿಗೆ ಆಗಮಿಸಿದ ತಕ್ಷಣ, ಅವರ ಜೊತೆ ಚರ್ಚಿಸಿ ನಂತರ ತೀರ್ಮಾನಿಸುತ್ತೇವೆ. ಅವರ ಜೊತೆ ಚರ್ಚಿಸದೇ ಯಾವುದೇ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿಸಿದರು. ಇದರಿಂದ ಕುಪಿತಗೊಂಡ ಅತಿಥಿ ಉಪನ್ಯಾಸಕರು, ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ಪರಿಸ್ಥಿತಿ ಕೈ ಮೀರುವುದನ್ನು ಅರಿತ ವಿವಿ ಅಧಿಕಾರಿಗಳು ಸ್ಥಳದಿಂದ ಕಾಲ್ಕಿತ್ತರು.

ನಂತರ ಸ್ಥಳಕ್ಕೆ ಆಗಮಿಸಿದ ಶಾಸಕ ಡಾ.ಯತೀಂದ್ರ, ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅವರು ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ, ಗಡಿ ನಿರ್ಣಯ

ಮೈಸೂರು,ಜ.6– ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ರಾಜ್ಯದ ಎಲ್ಲಾ ಜಿಲ್ಲೆಯ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ, ಗಡಿ ನಿರ್ಣಯಿಸಲಾಗಿದೆ. ಈ ವಿವರಗಳನ್ನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ವೆಬ್‌ಸೈಟ್‌ನಲ್ಲಿ https://rdpr.karnataka.gov.in/rdc/public ಮತ್ತು ಜ.2ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ https://erajyapatra.karnataka.gov.in ಪ್ರಕಟಿಸಲಾಗಿದೆ. ಸಾರ್ವಜನಿಕ ಅಭಿಪ್ರಾಯ ಅಥವಾ ಆಕ್ಷೇಪಣೆಗಳನ್ನು ಜ.16 ರೊಳಗೆ ಆನ್ ಲೈನ್ ಮುಖಾಂತರ ಆಯೋಗದ ವೆಬ್ ಸೈಟ್‌ನಲ್ಲಿ ಮತ್ತು ಖುದ್ದಾಗಿ ಅಥವಾ ಅಂಚೆಯ ಮೂಲಕ ಬೆಂಗಳೂರಿನ ಆಯೋಗದ ಕಛೇರಿಯಲ್ಲಿ ಮಾತ್ರ ಸಲ್ಲಿಸಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.1.2023 ಶನಿವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಐಯ್ಯಪ್ಪ ಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಲಕ್ಷಾರ್ಚನೆ, 108 ಕಳಸಗಳ ವಾರ್ಷಿಕ ಕುಂಭಾಭಿಷೇಕ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನಂ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ :** ಕರ್ಮ ನೈಪುಣಮ್–2023, ಮೇಹ ನಿಶ್ಚಯವ್, ಉದ್ಘಾಟನೆ ಡಾ.ಅನಿಲ್‌ಕುಮಾರ್, ಗೌರವ ಅತಿಥಿಗಳು: ಆಯುಷ್ ಜಂಟಿ ನಿರ್ದೇಶಕ ಡಾ.ಎನ್. ಅಂಜನೇಯ ಮೂರ್ತಿ, ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ಡಾ. ಮಧುಸೂದನ್, ಡಾ.ಲಕ್ಷ್ಮೀ ನಾರಾಯಣ ಶೆಣೈ, ಸ್ಥಳ: ಸೆಮಿನಾರ್ ಹಾಲ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಇಂಗ್ಲಿಷ್ ಮಾಧ್ಯಮ ಶಾಲೆ:** ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ: ಸಾರ್ವಜನಿಕ ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕ ರಾಮಚಂದ್ರರಾಜೇ ಅರಸ್, ಮುಖ್ಯ ಅತಿಥಿಗಳು: ನಿರ್ದೇಶಕ ಬಿ.ಎ. ರಾಜಶೇಖರ, ಬಿಇಒ ಆರ್. ರಾಮಾರಾಧ್ಯ ಅವರಿಂದ ಜ್ಞಾನ ಸೌರಭ ವಿಶೇಷ ಸಂಚಿಕೆ ಬಿಡುಗಡೆ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 9.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ :** ಹದಿಹರೆಯದ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯ ಕುರಿತು ಕಾರ್ಯಾಗಾರ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಮುಖ್ಯ ಅತಿಥಿಗಳು : ಡಯಟ್ ಪ್ರಿನ್ಸಿಪಾಲ್ ಸಿ.ಆರ್. ನಾಗರಾಜಯ್ಯ, ವಿಶೇಷ ಆಹ್ವಾನಿತರು : ಡಾ. ಶಿವಾನಂದ ಮನೋಹರ್, ಡಾ. ಮಹದೇಶ್ವರ ಪ್ರಸಾದ್, ಡಾ. ಸಿ. ಮಂಜುನಾಥ, ಶ್ರೀಮತಿ ಪುಷ್ಪ ಗುರುರಾಜ್, ಡಾ. ವಿಮಲಾ ರಾಧಾಕೃಷ್ಣನ್, ಶ್ರೀಮತಿ ರಜನಿ ಸ್ವಾಮಿ, ಸುಮನಾ ನಟೇಶ್, ಶ್ರೀಮತಿ ಆಶಾ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಶಾಲಾ ವಿದ್ಯಾರ್ಥಿಗಳಿಂದ ಭಾಷಣ ಸ್ಪರ್ಧೆ, ಉದ್ಘಾಟನೆ : ಪತ್ರಕರ್ತ ಶಿವಮೂರ್ತಿ ಜುಪ್ತಿಮಠ, ಡಾ. ಟಿ. ಶ್ರೀನಿವಾಸ್ ಅವರಿಂದ ಹದ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ ಕುರಿತು ಉಪನ್ಯಾಸ, ಬಹುಮಾನ ವಿತರಣೆ : ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ.ಸಿ. ದೇವರಾಜ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಅರ್ಚಕರು, ಆಗಮಿಕರು ಮತ್ತು ಜ್ಯೋತಿಷಿಗಳ ಸಂಸ್ಥೆ ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್:** ರಾಜ್ಯಮಟ್ಟದ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಶ್ರೀ ಪುಟ್ಟರಾಜ ಗವಾಯಿ ಕ್ರೀಡಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು :** ಗುಬ್ಬಿ ವೀರಣ್ಣ ಪೀಠದ ವತಿಯಿಂದ 'ಸ್ಟೇಜ್ ಕೆಮಿಸ್ಟ್ರಿ : ನ್ಯೂರೋ ಸೈಕಿಯಾಟ್ರಿಕ್ ಡಿಸಾರ್ಡರ್ಸ್ ಆನ್ ಸ್ಟೇಜ್' ನಾಟಕ ಪ್ರದರ್ಶನ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ : ಮೈಸೂರು ವಿವಿ ಲಲಿತ ಕಲಾ ಕಾಲೇಜು ಪ್ರಾಂಶುಪಾಲ ಪ್ರೊ. ಅನಿಟ ವಿಮ್ಲ ಬ್ರ್ಯಾಗ್ಸ್, ಉಪಸ್ಥಿತರು : ಗುಬ್ಬಿ ವೀರಣ್ಣ ಪೀಠ ವಿಷಯ ತಜ್ಞ ಹೆಚ್.ಎಸ್. ಉಮೇಶ್, ಸ್ಥಳ: ಲಲಿತ ಕಲಾ ರಂಗಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಋಷಿ ಮನೀಷಿಗಳು– ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ, ಲೇಖನ–ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಬಿ.ಆರ್. ಗೀತಾ, 10.00 ಎನ್. ಭಾರತಿ – ವೀಣಾವಾದನ. **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದಸಂಗೀತ–ಮಾದಶೆಟ್ಟಿ ಮತ್ತು ತಂಡ, 1.20 ಭಾವಗೀತೆ–ಸ್ಟ್ಯಾನ್ಲೀ ಪಾರ್ಕರ್, 3.30ಮಕ್ಕಳ ಮಂಟಪ–ಸೈಂಟ್ ಜೋಸೆಫ್ ಸೆಂಟ್ರಲ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 4.00 ನಾಟಕ, 6.50 ಕೃಷಿರಂಗ “ತೋರಣ ಹೂರಣ”, ಪ್ರಸ್ತುತಿ– ಎಸ್.ಸುಬ್ರಹ್ಮಣ್ಯ, 8.00 ಯುವವಾಣಿ, 9.15 ಸಾಂಬಾರು ಪದಾರ್ಥಗಳ ಉದ್ಯಮ–ಸಾಧ್ಯತೆ–ಸವಾಲುಗಳು –ಮಾತನಾಡುತ್ತಾರೆ ಚೈತ್ರಾ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ತಿರುವಯ್ಯಾರಿನಲ್ಲಿ ನಡೆದ ಸಂತ ತ್ಯಾಗರಾಜ 176ನೇ ಆರಾಧನಾ ಮಹೋತ್ಸವದ ನೇರ ಕಾರ್ಯಕ್ರಮ

■ **ಜೆಎಸ್‌ಎಸ್ ಅಕಾಡೆಮಿ ಮತ್ತು ಸಂಶೋಧನಾ ಅಕಾಡೆಮಿ:** ಆರೋಗ್ಯಕರ ಮನಸ್ಸು –ಸಂತಸದ ಜೀವನ ವಿಷಯ ಕುರಿತು ಐಪಿಎಸ್ ಸ್ಥಾಪಕ ದಿನಾಚರಣೆ,ಅಧ್ಯಕ್ಷತೆ: ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿ ಅಧ್ಯಕ್ಷ ಡಾ.ಎನ್.ಎನ್.ರಾಜು, ಉದ್ಘಾಟನೆ : ಕರ್ನಾಟಕ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಮುಖ್ಯ ಅತಿಥಿಗಳು: ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಿನ್ಸಿಪಾಲ್ ಡಾ.ಬಸವನಗೌಡಪ್ಪ ಸ್ಥಳ: ಹೋಟೆಲ್ ಸಂದೇಶ್ ದಿ ಪ್ರಿನ್ಸ್, ಮಧ್ಯಾಹ್ನ 2ಕ್ಕೆ.

■ **ಮೈಸೂರು ವಿವಿ ಬಿ.ಎನ್. ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸಸ್ :** ಸ್ಕಿಲ್ ಇಂಡಿಯಾ– ಸವಾಲುಗಳು ಮತ್ತು ಅವಕಾಶಗಳು ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಗೌರವ ಅತಿಥಿಗಳು : ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಕೆ. ನಾರಾಯಣಮೂರ್ತಿ, ಅಧ್ಯಕ್ಷತೆ: ಪ್ರೊ. ಐಷಾ ಎಂ. ಶರೀಫ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ನಾಗರಿಕ ವೇದಿಕೆ, ಪೂರ್ಣಪ್ರಜ್ಞಾ ವಿದ್ಯಾಕೇಂದ್ರ** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ: ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಅಧ್ಯಕ್ಷತೆ: ನಾಗರಿಕ ವೇದಿಕೆ ಅಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಚಲನಚಿತ್ರ ನಟ ಪವನ್‌ತೇಜ್, ಅಂತಾರಾಷ್ಟ್ರೀಯ ಕ್ರೀಡಾಪಟು ಎಂ.ಡಿ. ನಾಗೇಂದ್ರ, ಸ್ಥಳ: ಗಾನಭಾರತಿ ಬಯಲು ರಂಗಮಂದಿರ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ರೋಟರಿ ವೆಸ್ಟ್ ಸ್ಕೂಲ್:** ಕಲಾವೈಭವ, ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ.ದೇವೇಗೌಡ, ಗೌರವ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ. ಹೇಮಂತಕುಮಾರ್, ಅಧ್ಯಕ್ಷತೆ: ರೋಟರಿ ವೆಸ್ಟ್ ಅಸೋಸಿಯೇಷನ್ ಅಧ್ಯಕ್ಷ ಡಾ.ಬಿ.ಚಂದ್ರ, ಸ್ಥಳ:ಕಲಾಮಂದಿರ, ಸಂಜೆ 4.30ಕ್ಕೆ

* **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಹಿಮಾಲಯ ಪ್ರತಿಷ್ಠಾನ:** ಯೋಗ ಭೀಷ್ಮ ಬಿ.ಕೆ.ಎಸ್.ಅಯ್ಯಂಗಾರ್ ಜೀವನ ಸಾಧನೆ ಕುರಿತು ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಅವರಿಂದ ಪ್ರವಚನ, ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಅಧ್ಯಕ್ಷತೆ: ಪರಮಹಂಸ ಯೋಗ ಮಹಾವಿದ್ಯಾಲಯ ಅಧ್ಯಕ್ಷ ಶಿವಪ್ರಕಾಶ್ ಗುರೂಜಿ, ಮುಖ್ಯ ಅತಿಥಿಗಳು:ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಯೋಗಾಚಾರ್ಯ ಎಸ್.ವಿ.ವೆಂಕಟೇಶಯ್ಯ, ಆಧ್ಯಾತ್ಮಿಕ ಚಿಂತಕ ವಿ.ಮುರಳಿ, ಸಂತೋಷ್ ಕುಮಾರ್‌ಗೌಡ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5.30ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ.ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 6 ಗಂಟೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಮಹಾಮೇದಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆಆರ್‌ಎಸ್:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ. ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಶ್ರೀ ಆಂಡಾಳ್ ಮಂದಿರಂ:** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಆಂಡಾಳ್ ಮಂದಿರಂ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಏನ್ರೀ, ಆಫೀಸ್‌ನಿಂದ ಇಷ್ಟು ಬೇಗ ಮನೆಗೆ ಬಂದು ಬಿಟ್ರಿ?

ಗಂಡ : ಬಾಸ್ ಸಿಟ್ಟಿನಿಂದ ನರಕಕ್ಕೆ ಹೋಗು.. ಅಂದ್ರು... ಬಂದು ಬಿಟ್ಟೆ.

ಮೈಸೂರು ಮಿತ್ರ

ಶನಿವಾರ, 7 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವಿಜಯವು ಮುಖ್ಯವಾದರೂ ಅದನ್ನು ಪಡೆಯುವ ಮಾರ್ಗವೂ ಅಷ್ಟೇ ಮುಖ್ಯವಾದದ್ದು. – ಜವಹರಲಾಲ್ ನೆಹರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಕ್ಷ ಪಾಂಡವರಲ್ಲಿ, ಊಟ ಕೌರವರಲ್ಲಿ

ನಿಮ್ಮ ಪತ್ರಗಳು

ಬದುಕಿನ ಪರಮ ಸತ್ಯಗಳಿಗೆ ಭಾಷ್ಯ ಬರೆದ ಶ್ರೀ ಸಿದ್ದೇಶ್ವರ ಸ್ವಾಮೀಜಿ

ಮಾನ್ಯರೆ,



ಸರ್ವಶ್ರೇಷ್ಠ ಸಂತ, ಮಾನವತಾವಾದಿ, ನಡೆದಾಡುವ ದೇವರು, ಎಂದೆಲ್ಲಾ ಭಕ್ತಾದಿಗಳಿಂದ ಹಾಗೂ ಜನ ಸಾಮಾನ್ಯರಿಂದ ಪ್ರೀತಿ ಹಾಗೂ ಗೌರವಗಳಿಂದ ಕರೆಯಲ್ಪಡುತ್ತಿದ್ದ ವಿಜಯಪುರದ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರಸ್ವಾಮಿಯವರ ನಿಧನ ಇಡೀ ಮಾನವ ಕೋಟಿಗೆ ಉಂಟಾದ ತೀವ್ರ ನಷ್ಟವೆಂದು ಹೇಳಬಹುದು. 82 ವರ್ಷಗಳ ಸಾರ್ಥಕ ಹಾಗೂ ಅರ್ಥಪೂರ್ಣ ಬದುಕನ್ನು ಸಾಗಿಸಿ ಅನಂತದಲ್ಲಿ ಲೀನವಾಗಿರುವ ಈ ವಿಭೂತಿ ಪುರುಷರ ಬಗ್ಗೆ ಬರೆಯಲು ಯಾವ ಪದಗಳೂ ಉಳಿದಿಲ್ಲವೆನಿಸುತ್ತದೆ. ಏಕೆಂದರೆ ಕಳೆದ 3–4 ದಿನಗಳಿಂದಲೂ ನಾಡಿನ ಬಹುತೇಕ ಪತ್ರಿಕೆಗಳು ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಈ ಮಹಾ ಮಹಿಮನನ್ನು ಕುರಿತು ಎಲ್ಲಾ ಶ್ರೇಷ್ಠ ಪದಗಳ ಬಳಕೆಯಾಗಿ, ಬರೆಯಲು ನನಗೇನೂ ಉಳಿದಿಲ್ಲವೆನಿಸಿದರೂ ಸಹ, ಈ ಮಹಾಮಹಿಮನ ಬಗ್ಗೆ ನಾಲ್ಕು ಸಾಲುಗಳನ್ನಾದರೂ ಬರೆಯಲೇಬೇಕು ಅನ್ನಿಸಿ ಈ ಪತ್ರ ಬರೆಯುತ್ತಿದ್ದೇನೆ.

ಇತ್ತೀಚಿನ ವರ್ಷಗಳಲ್ಲಿ ಅನೇಕ ಸ್ವಾಮೀಜಿಗಳು ವೈಭವಯುತ ಅಥವಾ ಐಶಾರಾಮಿ ಜೀವನ ಶೈಲಿಗೆ ಒಗ್ಗಿ ಹೋಗಿರುವುದನ್ನು ನಾವು ಕಂಡಿದ್ದೇವೆ ಮತ್ತು ಕೇಳಿದ್ದೇವೆ. ಕಾವಿ ಧರಿಸಿ ಕೆಲವು ಸ್ವಾಮಿಗಳು ನಡೆಸುತ್ತಿದ್ದ ಹಾಗೂ ಈಗಲೂ ನಡೆಸುತ್ತಿರುವ ನೀಚ ಕೆಲಸಗಳ ಬಗ್ಗೆ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಸ್ವಾಮೀಜಿ ಎಂಬ ಪದಕ್ಕೆ ನಿಜವಾದ ಅರ್ಥವಾಗಬಲ್ಲ ಕೆಲವೇ ಸ್ವಾಮೀಜಿಗಳ ಪೈಕಿ ಈಗ ನಿಧನರಾಗಿ ಅನಂತದಲ್ಲಿ ಲೀನರಾಗಿರುವ ಶ್ರೀ ಸಿದ್ದೇಶ್ವರ ಸ್ವಾಮಿಯವರ ಹೆಸರು ಮೊದಲಾಗುತ್ತದೆ ಎಂದು ಖಂಡಿತಾ ಹೇಳಬಹುದು. ಅವರ ಜೀವನ ವಿಧಾನದ ಬಗ್ಗೆ ಹಾಗೂ ಅವರು ನೀಡುತ್ತಿದ್ದ ಆಧ್ಯಾತ್ಮಿಕ ಪ್ರವಚನಗಳ ಬಗ್ಗೆ ಈಗಾಗಲೇ ಪುಟಗಟ್ಟಲೇ ಪ್ರಕಟವಾಗಿದೆ. ಜನ ಸಾಮಾನ್ಯರ ಬದುಕಿಗೆ ತುಂಬಾ ಹತ್ತಿರವಾಗಿದ್ದ ಅವರ ಧಾರ್ಮಿಕ ಪ್ರವಚನಗಳು ನಮ್ಮ ಪಾಲಿಗೆ ದಾರಿದೀಪ ಇದ್ದ ಹಾಗಿದೆ. ಅತ್ಯಂತ ಸರಳರಾಗಿದ್ದ ಶ್ರೀ ಸಿದ್ದೇಶ್ವರ ಸ್ವಾಮಿಗಳು ತಮ್ಮ 19ನೇ ವಯಸ್ಸಿನಲ್ಲೇ ಸನ್ಯಾಸತ್ವ ಸ್ವೀಕರಿಸಿ, ಅಂದಿನಿಂದ ತಮ್ಮ ಅಂತ್ಯ ಕಾಲದವರೆಗೆ ಅತ್ಯಂತ ಶ್ರೇಷ್ಠವಾದ ಹಾಗೂ ಋಜು ಮಾರ್ಗದಲ್ಲಿ ನಡೆದು ಲಕ್ಷಾಂತರ ಮಂದಿ ಭಕ್ತರ ಆಶಾ ದೀಪವಾಗಿದ್ದರು. ಸಿದ್ದೇಶ್ವರ ಸ್ವಾಮೀಜಿಗಳಂತಹ ಮಹಾಶ್ರೇಷ್ಠರಿಗೆ ಖಂಡಿತಾ ಸಾವೆಂಬುದು ಇರದು. ಅವರು ಭೌತಿಕವಾಗಿ ನಮ್ಮೊಡನೇ ಇರದೇ ಹೋದರೂ ಸಹ, ಅವರು ಹೊತ್ತಿಸಿದ ಧರ್ಮ ಜ್ಯೋತಿ ನಿರಂತರವಾಗಿ ಬೆಳಗುತ್ತಿರುತ್ತದೆ.

ಯಾವುದೇ ಪ್ರಚಾರಕ್ಕೆ ಹಂಬಲಿಸದ ಈ ಮಹಾ ಮಹಿಮ ಕೇಂದ್ರ ಸರ್ಕಾರ ನೀಡಲು ಬಯಸಿದ್ದ ಪದ್ಮಶ್ರೀ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಅತ್ಯಂತ ವಿನೀತಭಾವದಿಂದ ಸ್ವೀಕರಿಸಲು ನಿರಾಕರಿಸಿದ್ದು ಅವರ ಅತಿದೊಡ್ಡ ಗುಣ ಎಂದು ಹೇಳಬಹುದು. ಜೇಬುಗಳೇ ಇಲ್ಲದ ಬಿಳಿಯ ಜುಬ್ಬಾವನ್ನು ಧರಿಸುತ್ತಿದ್ದ ಈ ಕರ್ಮಯೋಗಿಗೆ "ತಾನು, ತನ್ನದು" ಎಂಬ ಯಾವ ವ್ಯಾಮೋಹವೂ ಇರಲಿಲ್ಲ. ಕಾಮ, ಲೋಭ, ಮದ, ಮೋಹ, ಮಾತ್ಸರ್ಯ ಮುಂತಾದ ಅರಿಷಡ್ವರ್ಗಗಳನ್ನು ಜಯಿಸಿದ್ದ ಮಹಾಸ್ವಾಮಿಗಳು ದಿನೇ ದಿನೇ ದೇವರಿಗೆ ತುಂಬಾ ಹತ್ತಿರವಾಗುತ್ತಿದ್ದರು.

ಅವರ ಅಂತಿಮ ಅಭಿವಂದನ ಪತ್ರದಲ್ಲಿ ನಮೂದಿಸಿರುವ ಕೆಲವು ವಾಕ್ಯಗಳು ನಮ್ಮೆಲ್ಲರ ಕಣ್ಣನ್ನು ತೆರೆಸುವಂತಿದೆ ಹಾಗೂ ಜೀವನದ ಪರಮ ಸತ್ಯಗಳಿಗೆ ಹಿಡಿದ ಕನ್ನಡಿಯಾಗಿದೆ.

1. ಸತ್ಯವೂ ಇಲ್ಲ ಅಸತ್ಯವೂ ಇಲ್ಲ
2. ಸಹಜವೂ ಇಲ್ಲ ಅಸಹಜವೂ ಇಲ್ಲ
3. ನಾನೂ ಇಲ್ಲ, ನೀನೂ ಇಲ್ಲ
4. ಇಲ್ಲ ಇಲ್ಲ ಎಂಬುದು ತಾನಿಲ್ಲ.

ಈ ಮೇಲ್ಕಂಡ ವಾಕ್ಯಗಳ ಪೈಕಿ ನಾನು ಇಲ್ಲ ನೀನೂ ಇಲ್ಲ ಎಂಬುದು ನಮ್ಮ ಬದುಕು ಎಷ್ಟೊಂದು ನಶ್ವರ ಅಥವಾ ಅಶಾಶ್ವತ ಎಂಬುದನ್ನು ಪ್ರತಿಬಿಂಭಿಸಿ, ನಾವೆಲ್ಲರೂ ಯಾವುದೋ ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದೇವೇನೋ ಅನ್ನುವಂತೆ ಮಾಡುತ್ತವೆ ಇಂತಹ ವಿಶ್ವ ಮಾನವ, ಸರ್ವಶ್ರೇಷ್ಠ ಸದ್ಗುರು ಶ್ರೀ ಸಿದ್ದೇಶ್ವರ ಸ್ವಾಮಿಗಳ ಆತ್ಮಕ್ಕೆ ಗೌರವಪೂರ್ಣ ಪ್ರಣಾಮಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಬಾಗಿರುವ ವಿದ್ಯುತ್ ಕಂಬ ಬದಲಾವಣೆ ಮಾಡಿ



ಮಾನ್ಯರೇ,

ಮೈಸೂರಿನ ಗಾಂಧಿನಗರದ ಆದಿಜಾಂಬವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿರುವ (ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆ) ವಿದ್ಯುತ್ ಕಂಬವು ಹಲವಾರು ವರ್ಷಗಳಿಂದ ಬಾಗಿದ್ದು, ಯಾವುದೇ ಕ್ಷಣದಲ್ಲೂ ಬೀಳುವ ಸ್ಥಿತಿಯಲ್ಲಿದೆ. ಇದನ್ನು ತಡೆಯಲು ಶಾಲೆಯ ಕಾಂಪೌಂಡ್‌ನಲ್ಲಿರುವ ಕಬ್ಬಿಣದ ಸಲಾಕೆಗೆ ಎಳೆದು ಕಟ್ಟಲಾಗಿದೆ. ಈ ಕಬ್ಬಿಣದ ಸಲಾಕೆಯು ತುಕ್ಕು ಹಿಡಿದಿದ್ದು ಜೊತೆಗೆ ಬಳ್ಳಿಯು ವಿದ್ಯುತ್ ತಂತಿಗಳ ಮೇಲೂ ಹಬ್ಬಿದೆ. ವಿದ್ಯುತ್ ಕಂಬವು ಬಿದ್ದರೆ ತುಂಬಾ ಹಾನಿ ಉಂಟಾಗುವ ಅಪಾಯವಿದೆ. ಜೊತೆಗೆ ಈ ರಸ್ತೆಯಲ್ಲಿ ಜನರು ಮತ್ತು ವಾಹನ ಸಂಚಾರವು ಸದಾ ಅಧಿಕವಾಗಿರುತ್ತದೆ. ಅಲ್ಲದೇ ಶಾಲಾ ಮಕ್ಕಳು ಇದೇ ರಸ್ತೆಯಲ್ಲಿ ಶಾಲೆಗೆ ಹೋಗುವುದು ಮತ್ತು ಬರುವುದರಿಂದ ಮುಂದೆ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಸಂಬಂಧಪಟ್ಟವರು ಕೂಡಲೇ ಈ ವಿದ್ಯುತ್ ಕಂಬವನ್ನು ಬದಲಾವಣೆ ಮಾಡಬೇಕಾಗಿ ತಮ್ಮಲ್ಲಿ ಕಳಕಳಿಯ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಮಹದೇವಪುರ ಮುಖ್ಯ ರಸ್ತೆ, ಮೈಸೂರು.

ಮುಡಾದಲ್ಲಿ ಲಂಚದ ಹಾವಳಿ...!

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಲಂಚದ ಹಾವಳಿ ವಿಪರೀತವಾಗಿದೆ. ಒಂದು ಮನೆಯ ಸಿಆರ್ ನೀಡಲು ಒಂದು ಲಕ್ಷ ರೂ. ಲಂಚ ಕೇಳುತ್ತಾರೆ. ಪ್ರಭಾವ ಬಳಸಿದರೆ ಈ ಹಣದಲ್ಲಿ ಇಳಿಕೆಯಾಗುತ್ತದೆ ಹಾಗೂ ಹಣ ನೀಡಿದವರಿಗೆ ಕೇವಲ ಹತ್ತೇ ದಿನದಲ್ಲಿ ಸಿ.ಆರ್ ನೀಡಲಾಗುತ್ತದೆ. ಸಾಮಾನ್ಯರಿಗೂ ಹೀಗೇ ಕೆಲಸ ಮಾಡಿಕೊಡುತ್ತಾರಾ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ?

ಈ ಪ್ರಕರಣ ಬೇರೆ ಯಾರದ್ದೂ ಅಲ್ಲ. ನಗರದ ನ್ಯಾಯಾಂಗ ಬಡಾವಣೆಯಲ್ಲಿ ನನ್ನ ಮಗಳು ಕಟ್ಟಿರುವ ಮನೆಯ ಸಿ.ಆರ್ ನೀಡಲು ಅರ್ಜಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೀಡಿದಾಗ ಅಲ್ಲಿನ ಸಿಬ್ಬಂದಿ ಸಿಆರ್ ನೀಡಲು ಐದು ಜನಕ್ಕೆ ತಲಾ ಇಪ್ಪತ್ತು ಸಾವಿರದಂತೆ ಒಟ್ಟು ಒಂದು ಲಕ್ಷ ನೀಡಬೇಕೆಂದು ಕೇಳಿದರು. ನಂತರ, ಪ್ರಭಾವ ಬಳಸಿದಾಗ ಮೂವತ್ತೈದು ಸಾವಿರ ರೂ. ಪಡೆದಿದ್ದಾರೆ. ನನ್ನ ಮಗಳಿಗೆ ಜನವರಿ 2 ರಂದು ರೂ.35 ಸಾವಿರ ಪಡೆದು ಸಿ.ಆರ್. ನೀಡಿದ್ದಾರೆ. ಪ್ರಭಾವ ಬಳಸಿದ ಕಾರಣ ಕೇಳಿದ ಒಂದು ಲಕ್ಷ ರೂ. ಲಂಚದ ಹಣ 35 ಸಾವಿರಕ್ಕೆ ಇಳಿದಿದೆ. ಇಂತಹ ಲಂಚಬಾಕ ಪ್ರಾಧಿಕಾರ ಬೇಕೇ ನಮಗೆ?

–ಕೊ.ಸು.ನರಸಿಂಹಮೂರ್ತಿ ಚಾಮರಾಜಪುರಂ, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಮತ್ತೆ ಪ್ರಬಲ ಸೇನಾ ಶಕ್ತಿಯಾಗಲಿದೆ ಜಪಾನ್

ಜಗತ್ತಿನಲ್ಲಿ ಜಪಾನ್ ಒಂದು ಬಲಿಷ್ಠ ಆರ್ಥಿಕ ಶಕ್ತಿಯಾಗಿದೆ. ಆದರೆ ಆಶ್ಚರ್ಯವೆಂದರೆ ಜಪಾನ್‌ಗೆ ತನ್ನದೇ ಆದ ಸಶಸ್ತ್ರ ಸೇನಾ ಬಲವಿಲ್ಲ. 1945ರಲ್ಲಿ 2ನೇ ಮಹಾಯುದ್ಧ ಮುಕ್ತಾಯವಾದ ನಂತರ ಜಪಾನ್ ಸ್ವಇಚ್ಛೆಯಿಂದ ಸೇನಾ ಬಲ ಹೊಂದುವುದನ್ನು ನಿರಾಕರಿಸಿತು. ಈ ಉದ್ದೇಶಕ್ಕಾಗಿ ಅಂದಿನ ಜಪಾನ್ ಪ್ರಧಾನಿ ಕಿಜಿರೋ ಶಿಡೆಹಾರ ಅಪೇಕ್ಷೆಯಂತೆ ದೇಶದ ಸಂಸತ್ತು 'ಡಯೆಟ್' ದಿನಾಂಕ 3.11.1946 ರಂದು ಸಂವಿಧಾನದಲ್ಲಿ 9ನೇ ವಿಧಿಯನ್ನು ಸೇರ್ಪಡೆಗೊಳಿಸಿತು.

ಈ ವಿಧಿಯ ಮೊದಲ ಪ್ಯಾರಾದಲ್ಲಿ 'ಜಗತ್ತಿನಲ್ಲಿ ಕಾನೂನು ಮತ್ತು ಶಿಸ್ತಿನ ಆಧಾರದಲ್ಲಿ ಶಾಂತಿ ನೆಲೆಸಬೇಕೆಂಬ ಪ್ರಾಮಾಣಿಕ ಹಂಬಲದಿಂದ ಜಪಾನಿನ ಜನತೆ ಅಂತರಾಷ್ಟ್ರೀಯ ವಿವಾದಗಳನ್ನು ಪರಿಹರಿಸಲು ಯುದ್ಧವು ದೇಶದ ಸಾರ್ವಭೌಮ ಹಕ್ಕು ಹಾಗೂ ಬೆದರಿಸುವುದು ಅಥವಾ ಸೇನಾ ಬಲ ಪ್ರಯೋಗಿಸುವುದನ್ನು ಶಾಶ್ವತವಾಗಿ ತಿರಸ್ಕರಿಸುತ್ತದೆ.'

ಪ್ಯಾರಾ ಎರಡರಲ್ಲಿ 'ಮೇಲಿನ ವಾಕ್ಯಗಳಲ್ಲಿರುವ ಉದ್ದೇಶ ಸಾಧನೆಗೆ ನೆಲ, ಜಲ ಹಾಗೂ ವಾಯು ಸೇನೆ ಮತ್ತು ಇತರೇ ಯುದ್ಧ ಮಾದರಿಗಳನ್ನು ಅವಲಂಬಿಸದಿರುವುದು ಹಾಗೂ ದೇಶದ ಯುದ್ಧ ಸಾರುವ ಹಕ್ಕನ್ನು ಮಾನ್ಯ ಮಾಡದಿರುವುದು. ಈ ವಿಧಿ ಸೇರ್ಪಡೆಗೆ ಆರಂಭದಲ್ಲಿ ಅಮೇರಿಕವು ಒತ್ತಡ ಹೇರಿತ್ತು ಎನ್ನಲಾಗಿದೆ. ಆದರೆ ಚೀನಾದಲ್ಲಿ ಕಮ್ಯೂನಿಸ್ಟ್ ಕ್ರಾಂತಿ ಯಶಸ್ವಿಯಾದ ನಂತರ ಅಮೇರಿಕವು ಈ ವಿಧಿಯ ರದ್ಧತಿ ಬಗ್ಗೆ ಯೋಚನೆ ಪ್ರಾರಂಭಿಸಿತು. 1950ರಲ್ಲಿ ಕೊರಿಯನ್ ಯುದ್ಧಾನಂತರ ಮತ್ತೆ ಅಮೇರಿಕದ ಒತ್ತಡದಿಂದ ಜಪಾನ್ ಪ್ರಧಾನಿ ಸಿಗೇರು ಯೋಷಿದಾರವರು 9ನೇ ವಿಧಿಗೆ ತಂದ ತಿದ್ದುಪಡಿ ಜಪಾನ್‌ಗೆ ಪೂರ್ಣ ಪ್ರಮಾಣದ ಸಶಸ್ತ್ರ ಸೇನಾಬಲ ರಚಿಸಲು ಅವಕಾಶ ಕಲ್ಪಿಸಿತು. ಆದರೆ ಆಗ ಸಂವಿಧಾನದ 9ನೇ ವಿಧಿ ರದ್ಧತಿಗೆ ಜಪಾನ್ ಜನತೆ ವಿರೋಧ ವ್ಯಕ್ತಪಡಿಸಿದ್ದು ಗಮನಾರ್ಹವಾಗಿತ್ತು.

ಬದಲಾದ ಜಪಾನ್ ನಿಲುವು

ಉತ್ತರ ಕೊರಿಯಾದ ಐಲು ದೊರೆ ಕಿಂ ಜಾಂಗ್ ಉನ್‌ರ ಕ್ಷಿಪಣಿ ಕಾರ್ಯಕ್ರಮ ಜಪಾನ್‌ನ ಚಿಂತನೆಗಳನ್ನು ಬದಲಾಯಿಸಿತು. ಜಪಾನ್ ಸಂಪೂರ್ಣ ಸಶಸ್ತ್ರ ಸೇನಾ ಬಲ ರೂಪಿಸಲು ಪ್ರಾರಂಭಿಸಿತು. 2021ರಲ್ಲಿ ಜಪಾನ್ ತನ್ನ ಮಿಲಿಟರಿ ಉದ್ದೇಶಗಳಿಗಾಗಿ ಬಜೆಟ್‌ನಲ್ಲಿ 7 ಬಿಲಿಯನ್ ಡಾಲರ್ (ಬಜೆಟ್‌ನ ಶೇ.7.3) ತೆಗೆದಿರಿಸುವುದರೊಂದಿಗೆ



ಒಟ್ಟು 54.1 ಬಿಲಿಯನ್ ಡಾಲರ್ ವ್ಯಯಿಸಿತು. 1972 ರ ನಂತರ ಇದು ವಾರ್ಷಿಕ ಅತೀ ದೊಡ್ಡ ಮೊತ್ತವಾಗಿದೆ. ಜಪಾನ್‌ನ ರಕ್ಷಣಾ ಮಂತ್ರಿ ಯಸುಕಾಜು ಹಮಡಾರವರು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನೀಡಿದ ಹೇಳಿಕೆಯಲ್ಲಿ ಜಪಾನ್ ದೇಶವನ್ನು ಯಾವುದೇ ಸಂಭಾವ್ಯ ಅಪಾಯದಿಂದ ರಕ್ಷಿಸಲು ದೇಶದ ರಕ್ಷಣಾ ಸಾಮರ್ಥ್ಯವನ್ನು ಅಮೂಲಾಗ್ರ ಸದೃಢಗೊಳಿಸಲಾಗುವುದು. ಈ ಉದ್ದೇಶಕ್ಕಾಗಿ ಯುದ್ಧ ವಿಮಾನ, ಯುದ್ಧ ನೌಕೆಗಳೊಂದಿಗೆ ಇತರ ಎಲ್ಲಾ ರೀತಿಯ ಶಸ್ತ್ರಾಸ್ತ್ರಗಳನ್ನು ಪಡೆಯಲಾಗುವುದು ಎಂದು ತಿಳಿಸಿದರು. ಪ್ರಸ್ತುತ ವರ್ಷದಿಂದ 2024ರ ಅವಧಿಯಲ್ಲಿ ಜಪಾನ್ ಬಜೆಟ್‌ನಲ್ಲಿ ಶೇ.11ರಷ್ಟು ಮಿಲಿಟರಿ ಉದ್ದೇಶಕ್ಕಾಗಿ ಪ್ರತ್ಯೇಕಿಸಲಾಗುವುದೆಂದು ಸೂಚಿಸಿದೆ.

ಪ್ರಸ್ತುತ ಮುಂದುವರಿದ ರಷ್ಯಾ–ಉಕ್ರೇನ್ ಯುದ್ಧ. ಇದು ಚೀನಾಕ್ಕೆ ತೈವಾನ್ ಮೇಲೆ ಧಾಳಿ ಎಸಗಲು ಪ್ರಚೋದಿಸಬಹುದು. ಅದೇ ರೀತಿ ತನ್ನ ಸಾರ್ವಭೌಮತ್ವದಲ್ಲಿರುವ ಸೆನ್‌ಶೊಕು ದ್ವೀಪದ ಮೇಲೂ ಚೀನಾ ದಾಳಿ ಮಾಡಬಹುದು. ಹಾಗೂ ಚೀನಾ–ಜಪಾನ್ ನಡುವಿನ ಫೆಸಿಫಿಕ್ ಸಾಗರದಲ್ಲಿ ಚೀನಾ ಹಿಡಿತ ಸ್ಥಾಪಿಸಿದಲ್ಲಿ ಮಧ್ಯಪ್ರಾಚ್ಯದಿಂದ ತೈಲ ಆಮದಿಗೂ ಸಮಸ್ಯೆಯಾಗಬಹುದು ಎಂಬ ಆತಂಕ ಜಪಾನಿನ ಪ್ರಧಾನಿ ಫ್ಯುಮಿಯೋ ಕಿಷಿದಾ ಸರಕಾರಕ್ಕೆ ಚಿಂತೆಯುಂಟು ಮಾಡಿದೆ.

ಜಪಾನ್ ಬಿಡುಗಡೆ ಮಾಡಿರುವ ನೂತನ ರಾಷ್ಟ್ರೀಯ ಭದ್ರತಾ ಪತ್ರದಲ್ಲಿ ರಷ್ಯಾದ ಉಕ್ರೇನ್ ಮೇಲಿನ ಆಕ್ರಮಣವು ಅಂತರರಾಷ್ಟ್ರೀಯ ನೀತಿ–ನಿಯಮ–ಕಾನೂನುಗಳ ನೇರ ಉಲ್ಲಂಘನೆಯಾಗಿದ್ದು ಜಾಗತಿಕ ನ್ಯಾಯಿಕ ವ್ಯವಸ್ಥೆಗೆ ಅಪಾಯಕಾರಿಯಾಗಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ಚೀನಾದಿಂದ ಬೃಹತ್ ಸವಾಲುಗಳನ್ನು ಎದುರಿಸಬೇಕಾಗಬಹುದು. ಚೀನಾದಿಂದ ಸಂಭಾವ್ಯ ಅಪಾಯ ಎದುರಿಸಲು ಜಪಾನ್ ಸರಕಾರವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಪಾಯಗಳನ್ನು ನಿವಾರಿಸಲು ಅಮೇರಿಕ ಮತ್ತು ಸಮಾನ ಮನಸ್ಕ ದೇಶಗಳೊಂದಿಗೆ ಸನ್ನದ್ಧತೆ ಮತ್ತು ಸಮನ್ವಯತೆ ಸಾಧಿಸಲಿದೆ ಎಂದು ತಿಳಿಸಿದೆ.

ನೆರೆ ಹೊರೆಯ ದೇಶಗಳ ಪ್ರತಿಕ್ರಿಯೆ

ಜಪಾನ್ ಮತ್ತು ದಕ್ಷಿಣ ಕೊರಿಯಾ ಮಧ್ಯೆ ಸಮಾನ ಅಂತರದಲ್ಲಿರುವ ವಿವಾದಿತ ತಾಕೆಶಿಮಾ (ಡೊಕ್ಡೊ–ಕೊರಿಯಾ ಹೆಸರು) ದ್ವೀಪ ತನಗೆ ಸೇರಿದ್ದೆಂದು ರಾಷ್ಟ್ರೀಯ ಭದ್ರತಾ ಪತ್ರದಲ್ಲಿ ಜಪಾನ್ ಪ್ರತಿಪಾದಿಸಿದ್ದನ್ನು ದಕ್ಷಿಣ ಕೊರಿಯಾ ಬಲವಾಗಿ ಖಂಡಿಸಿದೆ. ಆದರೆ ಜಪಾನ್ ಬಲಿಷ್ಠ ಸೇನಾ ಪಡೆ ರಚಿಸುವುದರ ಕುರಿತು ಎಚ್ಚರಿಕೆಯಿಂದ ಪ್ರತಿಕ್ರಿಯಿಸಿದೆ. ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವ ಪಾರ್ಕ್ ಜಿನ್‌ರವರು ಜಪಾನ್ ತತ್‌ಕ್ಷಣದಿಂದ ಪತ್ರದಲ್ಲಿರುವ ದ್ವೀಪದ ಹೆಸರನ್ನು ತೆಗೆದು ಹಾಕಬೇಕೆಂದು ಆಗ್ರಹಿಸಿದ್ದಾರೆ. ಪಾರ್ಕ್‌ಜಿನ್ ತಮ್ಮ ಹೇಳಿಕೆಯಲ್ಲಿ ಜಪಾನ್‌ನ ಈ ನಡೆ ಭವಿಷ್ಯಾಧಾರಿತ ಬಾಂಧವ್ಯ ಬೆಳೆಸಲು ಸಹಕಾರಿಯಲ್ಲ ಹಾಗೂ ಜಪಾನ್‌ನ ನೂತನ ಭದ್ರತಾ ನೀತಿಯು ಪಾರದರ್ಶಕ ಹಾಗೂ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಪೂರಕವಾಗಿರಲಿ ಎಂದು ಅಪೇಕ್ಷೆ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಕೊರಿಯಾ ಅಧ್ಯಕ್ಷ ಯೊನ್ ಸುಖ್– ಯೊಲ್‌ರವರು ಟೋಕಿಯೋದೊಂದಿಗೆ ಸಂಬಂಧ ಸುಧಾರಿಸುವ ಯತ್ನದಲ್ಲಿದ್ದಾರೆ. ನವೆಂಬರ್‌ನಲ್ಲಿ ನಡೆದ ಒಂದು ಸಂದರ್ಶನದಲ್ಲಿ ಯೊಲ್‌ರವರು ಜಪಾನ್ ಮಿಲಿಟರಿ ಯೋಜನೆಗೆ ಭಾರೀ ಪ್ರಮಾಣದಲ್ಲಿ ಖರ್ಚು ಮಾಡುತ್ತಿರುವುದನ್ನು, ಉತ್ತರ ಕೊರಿಯಾದ ಖಂಡಾಂತರ ಕ್ಷಿಪಣಿ ಕಾರ್ಯಕ್ರಮದ ಬೆದರಿಕೆಯ ಹಿನ್ನೆಲೆಯಲ್ಲಿ ಎಂದು ಪರಿಗಣಿಸಬೇಕು ಎನ್ನುತ್ತಾರೆ.

ಚೀನಿ ಪ್ರತಿಕ್ರಿಯೆ

ಜಪಾನ್‌ನ ಮಿಲಿಟರಿ ಕಾರ್ಯಕ್ರಮವನ್ನು ಚೀನಾ ಟೀಕಿಸುತ್ತಾ, ಚೀನಾದಿಂದ ತನಗೆ ಅಪಾಯವಿದೆ ಎಂಬ ಸುಳ್ಳನ್ನು ಸೃಷ್ಟಿಸಿ ಜಪಾನ್ ಸೇನಾ ಪಡೆಗಳನ್ನು ರಚಿಸುತ್ತಿರುವ ಯೋಜನೆ ವಿಫಲಗೊಳ್ಳಲಿದೆ ಎಂದು ಹೇಳಿಕೆ ನೀಡಿದೆ. ಚೀನಿ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್‌ಬೀನ್ ಜಪಾನ್‌ನ ನೂತನ ರಕ್ಷಣಾ ನೀತಿ ವಾಸ್ತವವನ್ನು ನಿರ್ಲಕ್ಷಿಸುತ್ತಿದೆ. ಜಪಾನ್‌ನೊಂದಿಗೆ ಉತ್ತಮ ಬಾಂಧವ್ಯ ಸ್ಥಾಪಿಸಲು ಚೀನಾ ತೋರುತ್ತಿರುವ ಬದ್ಧತೆಯಿಂದ ಲಕ್ಷ್ಯವನ್ನು ಬೇರೆಡೆ ಸೆಳೆದು, ಚೀನಾದ ರಕ್ಷಣಾ ಸಿದ್ಧತೆ ಹಾಗೂ ಸಾಮಾನ್ಯ ಸೇನಾ ಚಟುವಟಿಕೆಗಳ ಬಗ್ಗೆ ಆಧಾರವಿಲ್ಲದೇ ಆರೋಪಿಸಿ ಚೀನಾವನ್ನು ಅಪಮಾನಿಸುತ್ತಿದೆ ಎಂದು ದೂರಿದರು. ಜಪಾನ್‌ನ ಮಿಲಿಟರೀಕರಣ ಕಾರ್ಯಕ್ರಮವನ್ನು ಚೀನಾ ದೃಢವಾಗಿ ವಿರೋಧಿಸುತ್ತದೆ.

ಅಮೇರಿಕದ ಪ್ರಶಂಸೆ

ಅಮೇರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜ್ಯಾಕ್ ಸುಲ್ಲಿವಾನ್‌ರವರು ಜಪಾನ್‌ನ ನೂತನ ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣಾ ನೀತಿಗೆ ಅಮೇರಿಕದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದ್ದಾರೆ. ಅಂತರರಾಷ್ಟ್ರೀಯ ಶಾಂತಿ, ಪರಮಾಣು ಪ್ರಸರಣ ತಡೆ ಹಾಗೂ ಉಕ್ರೇನ್‌ಗೆ ಬೆಂಬಲ ನೀಡಿದ್ದಕ್ಕೆ ಜಪಾನ್ ಪ್ರಧಾನಿ ಫ್ಯುಮಿಯೋ ಕಿಷಿದಾರನ್ನು ಅಭಿನಂದಿಸುತ್ತೇನೆ ಎಂದು ಸುಲ್ಲಿವಾನ್ ಹೇಳಿದ್ದಾರೆ. ಚೀನಾದ ಹಿನ್ನೆಲೆಯಲ್ಲಿ ಜಪಾನ್‌ನ ನಿರ್ಣಯಗಳನ್ನು ಅಮೇರಿಕಾ ಸ್ವಾಗತಿಸಿದೆ.

ಸೇನಾ ವೆಚ್ಚ ಮೂರನೇ ಸ್ಥಾನಕ್ಕೆ ಜಪಾನ್

ಜಪಾನ್ ಹಿಂದಿನ ಆಡಳಿತಗಾರರು ಕಲ್ಪಿಸಲಾಗದ ವೇಗದಲ್ಲಿ ಮಿಲಿಟರೀಕರಣಗೊಳ್ಳುತ್ತಿದೆ. ಕಳೆದ ಡಿಸೆಂಬರ್‌ನಲ್ಲಿ ಜಪಾನಿನ ಸ್ವರಕ್ಷಣಾ ಪಡೆ ಅಮೇರಿಕದ ಸೇನೆಯೊಂದಿಗೆ Resolute Dragon 2022 ಹೆಸರಲ್ಲಿ ಸಾಗರದಲ್ಲಿ ಸಮರಾಭ್ಯಾಸ ನಡೆಸಿದೆ. ಪ್ರಸ್ತುತ ದೇಶವು ತನ್ನದೇ ಆದ ಸುಸಜ್ಜಿತ ಸೇನೆ ಹೊಂದಬೇಕೆಂದು ಶೇ.70ರಷ್ಟು ಜಪಾನೀಯರು ಸಮೀಕ್ಷೆಯಲ್ಲಿ ಬೆಂಬಲಿಸಿದ್ದಾರೆ. ಮುಂದಿನ ಐದು ವರ್ಷಗಳಿಗೆ ಕಿಷಿದಾರವರು ದೇಶದ ಜಿಡಿಪಿಯ ಶೇ.2ರಷ್ಟು ಸೇನೆಗಾಗಿ ವ್ಯಯಿಸಲಿದ್ದಾರೆ. ಸರಕಾರದ ಒಟ್ಟು ವ್ಯಯದಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಸೇನೆಗೆ ತೆಗೆದಿರಿಸಲಾಗುವುದು. ಪ್ರಸ್ತುತ ಯಾರೂ ಊಹಿಸಲಾಗದ, ಹಿಂದೆ ಯೋಚಿಸಲಾಗದಷ್ಟು ಅಂದರೆ ಜಪಾನ್ ಸರಕಾರವು ಚೀನಾದೊಂದಿಗೆ ಯುದ್ಧ ಸಂಭವಿಸಿದಲ್ಲಿ ಪ್ರಬಲವಾಗಿ ಪ್ರತಿರೋಧಿಸಲು ಅವಶ್ಯಕವಾದ ಕ್ಷಿಪಣಿ ಹಾಗೂ ಇನ್ನಿತರ ಶಸ್ತ್ರಾಸ್ತ್ರಗಳಿಗಾಗಿ 320 ಬಿಲಿಯನ್ ಡಾಲರ್‌ನಷ್ಟು ಖರ್ಚು ಮಾಡಲಿದೆ. ಇದರಿಂದ ರಕ್ಷಣಾ ವೆಚ್ಚದಲ್ಲಿ ಅಮೇರಿಕ ಹಾಗೂ ಚೀನಾ ನಂತರದ ಮೂರನೇ ಸ್ಥಾನಕ್ಕೇರಲಿದೆ ಜಪಾನ್. ಮುಂದಿನ ಕೆಲವೇ ತಿಂಗಳಲ್ಲಿ ಜಪಾನ್ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಹಾಗೂ ಪರಿಣಿತ ಯೋಧರಿಂದ ಕೂಡಿದ ಪ್ರಬಲ ಮಿಲಿಟರಿ ಶಕ್ತಿಯಾಗಲಿದೆ. ಜಪಾನ್ ಪ್ರಬಲ ಸೇನಾ ಶಕ್ತಿಯಾದಲ್ಲಿ ಚೀನಾವನ್ನು ಕಟ್ಟಿ ಹಾಕಲು ಭಾರತಕ್ಕೂ ಅನುಕೂಲವಾಗಲಿದೆ. ಅಮೇರಿಕದ ಶಸ್ತ್ರಾಸ್ತ್ರ ಕಂಪನಿಗಳಿಗೂ ಜಪಾನ್ ನಿಲುವಿನಿಂದ ಭಾರೀ ಪ್ರಮಾಣದ ಲಾಭವಾಗಲಿದೆ.

ಹೋಮ, ಹವನ ಮಾಡುವುದು ಲೋಕ ಕಲ್ಯಾಣ, ಸಮಾಜದ ಒಳಿತಿಗಾಗಿಯೇ

● ಬ್ರಾಹ್ಮಣ ಮಹಾಸಭಾದ ಡಿ.ಟಿ.ಪ್ರಕಾಶ್ ● ಶ್ರೀ ಕೃಷ್ಣಧಾಮದಲ್ಲಿ ಮಹಾಭಾರತ ವಿರಾಟ ಪರ್ವ ಪ್ರವಚನ



ಮೈಸೂರು, ಜ.5(ಎಸ್‌ಪಿಎನ್)– ಸಮಾಜದಲ್ಲಿ ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡುವ ಗುಣ ಹಾಗೂ ಪ್ರತಿಯೊಬ್ಬರನ್ನು ಸಮಾನ ದೃಷ್ಟಿಕೋನದಿಂದ ಕಾಣುವ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮೈಸೂರು ನಗರ ಮತ್ತು ಗ್ರಾಮಾಂತರ ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿಪ್ರಾಯಪಟ್ಟರು. ಮೈಸೂರು ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ ಹಾಗೂ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಸಹಯೋಗದೊಂದಿಗೆ ನಡೆದ ಮಹಾಭಾರತ ವಿರಾಟ ಪರ್ವ ಪ್ರವಚನದ ಕಾರ್ಯಕ್ರಮದ ಸಮಾರೋಪದಲ್ಲಿ ಪಾಲ್ಗೊಂಡು ಅವರು, ಮಾತನಾಡಿದರು. ನಾವು ಲೋಕ ಕಲ್ಯಾಣಕ್ಕಾಗಿ ಹೋಮ, ಹವನ ಹಮ್ಮಿಕೊಳ್ಳುತ್ತೇವೆ. ಸಮಾಜದ ಮನಃಶಾಂತಿಗಾಗಿ ದೇವರ ಪೂಜೆ ಮಾಡುತ್ತೇವೆ. ಹಾಗಾಗಿ ಆಧ್ಯಾತ್ಮಿಕವಾಗಿ ಯಾವುದೇ ಸೇವೆ ಕೈಗೊಂಡರೂ ಸಮಾಜದ ಒಳತಿಗಾಗಿ ಹಮ್ಮಿಕೊಳ್ಳಬೇಕು ಹಾಗೂ ಸಮಾಜದಲ್ಲಿನ ಕಡು ಬಡವರಿಗೆ ಸಹಾಯ ಹಸ್ತ ಚಾಚುವ ಮೂಲಕ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸಬೇಕು ಎಂದು ಕಿವಿ ಮಾತು ಹೇಳಿದರು.

ಭಗವದ್ಗೀತೆಯಲ್ಲೂ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಬೇಕೆಂಬುದೇ ಶ್ರೀ ಕೃಷ್ಣ ಪರಮಾತ್ಮನ ಅನಿಸಿಕೆಯಾಗಿದೆ. ಅದರಂತೆ ಪ್ರತಿಯೊಬ್ಬರು ನಡೆದುಕೊಂಡು ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಗೂ ಸಮಾನತೆ ತರಲು ಮುಂದಾಗಬೇಕು ಎಂದು ತಿಳಿಸಿದರು.

ಕೃಷ್ಣ ಮಿತ್ರ ಮಂಡಳಿಯ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ ಮಾತನಾಡಿ, ಶ್ರೀ ಕೃಷ್ಣನ ಪೂಜೆ ಎಂದರೆ ಕೇವಲ ಪೂಜೆ, ಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ಮಾತ್ರವೇ ಅಲ್ಲ. ನಾವು ಮಾಡುವ ಎಲ್ಲ ಕೆಲಸವನ್ನೂ ನಿಷ್ಠೆಯಿಂದ, ನಿಸ್ವಾರ್ಥದಿಂದ, ಪ್ರಾಮಾಣಿಕವಾಗಿ ಮಾಡಿದರೆ ಅದೂ ಕೃಷ್ಣನಿಗೆ ಅರ್ಪಣೆಯಾಗುತ್ತದೆ. ಅದರಿಂದಲೂ ಸಿದ್ಧಿ ದೊರಕುತ್ತದೆ ಎಂದು ಹೇಳಿದರು.

ಈ ವೇಳೆ ಉಡುಪಿಯ ಶ್ರೀ ಪಾಲಿಮಾರು ಮಠದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರನ್ನು ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದರು ಅಭಿನಂದಿಸಿದರು. ನಂತರ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು 'ಮಹಾಭಾರತದ ವಿರಾಟ ಪರ್ವ' ಪ್ರವಚನ ನೀಡಿದರು. ಮೇಲುಕೋಟೆಯ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಹಿರಿಯ ವಿಪ್ರ ಮುಖಂಡ ಕೆ. ರಘುರಾಂ ವಾಜಪೇಯಿ, ಶ್ರೀ ಕೃಷ್ಣ ಮಿತ್ರ ಮಂಡಳಿ ಉಪಾಧ್ಯಕ್ಷ ಪುಟ್ಟಣ್ಣ ಭಟ್, ಕೃಷ್ಣದಾಸ ಪುರಾಣಿಕ, ರವಿಶಾಸ್ತ್ರಿ, ನಗರಪಾಲಿಕೆ ಸದಸ್ಯ ಮಾ.ವಿ ರಾಮಪ್ರಸಾದ್, ಕುಡಕೋಳ ಜಗದೀಶ್, ಯುವ ಮುಖಂಡರಾದ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿಜ್ಞೇಶ್ವರ ಭಟ್, ಎಸ್.ಬಿ. ವಾಸುದೇವಮೂರ್ತಿ, ನಾಗಶ್ರೀ, ಸುಚೀಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೇಂದ್ರ, ರಾಜ್ಯ ಬಿಜೆಪಿ ಸರ್ಕಾರಗಳಿಂದ ಎಸ್ಸಿ ಸಮುದಾಯದಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ

- ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ಅಭಿಮತ
- ನಿಜವಾಗಿ ಕಾಂಗ್ರೆಸ್‌ನಿಂದ ಎಸ್ಸಿ ಸಮುದಾಯಕ್ಕೆ ಭಾರೀ ಅನ್ಯಾಯವಾಗಿದೆ
- ಪರಿಶಿಷ್ಟ ಸಮುದಾಯಕ್ಕೆ ಮೀಸಲಾತಿ, ಅನುದಾನ ಈಗ ಹೆಚ್ಚಳವಾಗಿದೆ

ಮೈಸೂರು, ಜ.6(ಎಸ್‌ಬಿಡಿ)– ಕೇಂದ್ರ ಹಾಗೂ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಎಸ್ಸಿ ಸಮುದಾಯದವರಲ್ಲಿ ಆತ್ಮವಿಶ್ವಾಸ, ಭರವಸೆ ಮೂಡಿಸುವುದರೊಂದಿಗೆ ಅವರನ್ನು ಅಭಿವೃದ್ಧಿ ಪಥದಲ್ಲಿ ಕರೆದೊಯ್ಯುವ ಕಾರ್ಯವಾಗಿದೆ ಎಂದು ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್ ಸಿಂಗ್ ಆರ್ಯ ತಿಳಿಸಿದರು.

ಮೈಸೂರಿನ ನಡೆಯುತ್ತಿರುವ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಂಬಂಧ ಮಾಹಿತಿ ನೀಡಲೆಂದು ಇಲ್ಲಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಎಸ್ಸಿ ಸಮುದಾಯದವರ ಅಭಿವೃದ್ಧಿಗಾಗಿ ಕೇಂದ್ರ ಬಜೆಟ್‌ನಲ್ಲಿ 11 ಸಾವಿರ ಕೋಟಿ ರೂ. ಮೀಸಲಿಡಲಾಗಿತ್ತು. ಆದರೆ ನರೇಂದ್ರ ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಅನುದಾನವನ್ನು 59 ಸಾವಿರ ಕೋಟಿ ರೂ.ಗೆ ಏರಿಕೆ ಮಾಡಿದೆ ಎಂದರು.

ಪರಿಶಿಷ್ಟ ಜಾತಿ ಸಮುದಾಯಕ್ಕೆ ನೀಡುವ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಿದ್ದು ಮಾತ್ರವಲ್ಲದೆ ಗರೀಬಿ ಹಟಾವ್ (ಬಡವರ ಕಲ್ಯಾಣ) ಯೋಜನೆಯ ಶೇ.35ರಷ್ಟು ಸೌಲಭ್ಯವನ್ನು ಎಸ್ಸಿ ಸಮುದಾಯಕ್ಕೆ ಕಲ್ಪಿಸಿದ್ದಾರೆ. ಯುಪಿಎ ಸರ್ಕಾರದಲ್ಲಿ ಪರಿಶಿಷ್ಟ ಜಾತಿಯ ನಾಲ್ವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿತ್ತು. ಆದರೆ ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ 12 ಮಂದಿ ಇದ್ದಾರೆ. ಈ ಮೂಲಕ ಸಮುದಾಯಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಅಷ್ಟೇ ಅಲ್ಲದೆ 4 ರಾಜ್ಯಗಳಿಗೆ ಈ ಸಮುದಾಯದವರನ್ನೇ ರಾಜ್ಯಪಾಲರನ್ನಾಗಿ ನೇಮಿಸಲಾಗಿದೆ. ಹೀಗೆ ಅಭಿವೃದ್ಧಿ ಜೊತೆಗೆ ಸಮುದಾಯದಲ್ಲಿ ಭರವಸೆ, ಆತ್ಮವಿಶ್ವಾಸ ಹೆಚ್ಚಿಸುವ ಕಾರ್ಯವಾಗಿದೆ ಎಂದು ತಿಳಿಸಿದರು.

ಬಿಜೆಪಿ ದಲಿತರ ಹಾಗೂ ಸಂವಿಧಾನ ವಿರೋಧಿ, ಸಂವಿಧಾನ ಬದಲಿಸಲು ಯತ್ನಿಸಿದ್ದಾರೆ ಎಂದೆಲ್ಲಾ ಕಾಂಗ್ರೆಸ್ ಆರೋಪ ಮಾಡುತ್ತದೆ. ಆದರೆ ಹೀಗೆಲ್ಲಾ ನಡೆದುಕೊಂಡಿರುವುದು ಕಾಂಗ್ರೆಸ್. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ನಡೆಸಿಕೊಂಡ ರೀತಿ ಎಲ್ಲರಿಗೂ ತಿಳಿದಿದೆ. ಆದರೆ ಡಾ.ಬಿ.ಆರ್. ಅಂಬೇಡ್ಕರ್ ಅವರು ರಾಜ್ಯದಲ್ಲಿ ಭೇಟಿ ನೀಡಿದ್ದ 10 ಸ್ಥಳಗಳಲ್ಲಿ ಸ್ಮಾರಕ ನಿರ್ಮಾಣಕ್ಕೆ 20 ಕೋಟಿ ರೂ. ನೀಡಿದೆ. ಕಾಂಗ್ರೆಸ್ ಸರ್ಕಾರವಿದ್ದಾಗ ಈ ಆಲೋಚನೆಯೂ ಇರಲಿಲ್ಲ. ಇತ್ತೀಚೆಗಷ್ಟೇ ಎಸ್ಸಿ–ಎಸ್ಟಿ ಮೀಸಲಾತಿ ಪ್ರಮಾಣವನ್ನೂ ಹೆಚ್ಚಿಸಲಾಗಿದೆ. ಹಾಗಾಗಿ ಕರ್ನಾಟಕ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇವೆ ಎಂದರು.



ಸಮಾಲೋಚನೆ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಪ್ರಯುಕ್ತ ಮೋರ್ಚಾ ಪದಾಧಿಕಾರಿಗಳು ತಂಡವಾಗಿ ಜಿಲ್ಲೆಯ ಆಯ್ದ 40 ದಲಿತ ಕೇರಿಗಳಿಗೆ ಭೇಟಿ ನೀಡಿ, ಅಲ್ಲಿನ ನಿವಾಸಿಗಳೊಂದಿಗೆ ಸಮಾಲೋಚಿಸಲಾಯಿತು. ನಾವೂ ಕೂಡ ಮೈಸೂರಿನ ಅಶೋಕಪುರಂಗೆ ಭೇಟಿ ನೀಡಿ ಮುಖಂಡರೊಂದಿಗೆ ಮಾತುಕತೆ ನಡೆಸುವ ಸಂದರ್ಭ ಅವರು ಕಾಂಗ್ರೆಸ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ನಿಜವಾದ ದಲಿತ ವಿರೋಧಿ, ಸಂವಿಧಾನ ವಿರೋಧಿ ಹಾಗೂ ಅಂಬೇಡ್ಕರ್ ವಿರೋಧಿಗಳು ಕಾಂಗ್ರೆಸ್‌ನವರು' ಎಂದರು. ಕಾಂಗ್ರೆಸ್ ಸರ್ಕಾರ ನಿರೀಕ್ಷಿತ ರೀತಿಯಲ್ಲಿ ನೆರವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಆ ವೇಳೆ ಬಿಜೆಪಿ ಸರ್ಕಾರ ನೀಡಿದ ಕೊಡುಗೆ, ಕಾರ್ಯಕ್ರಮಗಳ ಬಗ್ಗೆ ತಿಳಿಸಿಕೊಡುವ ಪ್ರಯತ್ನದೊಂದಿಗೆ ಅಲ್ಲಿನ ಸಮಸ್ಯೆಗಳ ಪರಿಹರಿಸುವ ಭರವಸೆ ನೀಡಿದೆವು ಎಂದು ತಿಳಿಸಿದರು.

ಇಂದು ಸಿಎಂ ಚಾಲನೆ

ತಾಯಿ ಚಾಮುಂಡೇಶ್ವರಿ ನೆಲೆಸಿರುವ ಪವಿತ್ರ ಸ್ಥಳ, ಒಡೆಯರ್ ಜನ್ಮಭೂಮಿ, ಸರ್.ಎಂ.ವಿಶ್ವೇಶ್ವರಯ್ಯನವರ ಕರ್ಮಭೂಮಿ ಮೈಸೂರಿನಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ನಡೆಯುತ್ತಿದೆ. ಲಲಿತ ಮಹಲ್‌ನಲ್ಲಿ ಏರ್ಪಡಿಸಿರುವ ಕಾರ್ಯಕಾರಿಣಿಯನ್ನು ನಾಳೆ(ಜ.7) ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್, ಸಚಿವರಾದ ಗೋವಿಂದ ಕಾರಜೋಳ, ಪ್ರಭು ಚೌಹಾಣ್ ಸೇರಿದಂತೆ ಹಲವು ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಜ.8ರಂದು ಮಧ್ಯಾಹ್ನ 1ಕ್ಕೆ ಸಮಾರೋಪಗೊಳ್ಳಲಿದ್ದು, ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಪಾಲ್ಗೊಳ್ಳಲಿದ್ದಾರೆ ಎಂದು ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ ತಿಳಿಸಿದರು.

ಯಾವುದೇ ಗಿಮಿಕ್ ಇಲ್ಲ: ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲುಎಸ್) ಶೇ.10 ಮೀಸಲಾತಿಯನ್ನು ವಿಭಜಿಸಿರುವುದರಲ್ಲಿ ಅಥವಾ ಇತರೆ ವರ್ಗದ ಮೀಸಲಾತಿ ಹೆಚ್ಚಿಸಿರುವುದರಲ್ಲಿ ಯಾವುದೇ ರಾಜಕೀಯ ಗಿಮಿಕ್ ಇಲ್ಲ. ಪ್ರತಿಯೊಂದು ಸಮುದಾಯಗಳಿಗೂ ಬಿಜೆಪಿ ನ್ಯಾಯ ಒದಗಿಸಿದೆ. ಎಸ್‌ಸಿ ಮತ್ತು ಎಸ್ಟಿ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಿಸಿರುವುದು ಕಳೆದ ನವೆಂಬರ್ 1 ರಿಂದಲೇ ಜಾರಿಯಾಗಿದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿ ವೇತನ ತಡೆ ಹಿಡಿದಿಲ್ಲ. ಮೆರಿಟ್ ಆಧಾರದ ಮೇಲೆ ಸೀಟು ಪಡೆದಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆ. ಆದರೆ ಹಣ ನೀಡಿ ಸೀಟು ಪಡೆದಿರುವವರೂ ವಿದ್ಯಾರ್ಥಿ ವೇತನಕ್ಕೆ ಸಲ್ಲಿಸಿರುವ ಅರ್ಜಿ ತಡೆ ಹಿಡಿಯಲಾಗಿದೆ. ಒಂದು ವೇಳೆ ಅರ್ಹರಿಗೆ ವಿದ್ಯಾರ್ಥಿ ವೇತನ ಮಂಜೂರಾಗದೇ ಇರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಕೂಡಲೇ ಸರಿಪಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಂಭುನಾಥ್ ತೂಂಡ್ಯ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ರಾಜ್ಯಸಭಾ ಮಾಜಿ ಸದಸ್ಯ ಬಿ.ಕೆ.ಶ್ರೀನಿವಾಸ್, ಕೊಳ್ಳೇಗಾಲದ ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಕಾಂಪೋಸ್ಟ್ ಗೊಬ್ಬರ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಜಿಲ್ಲಾ ಸಹ ವಕ್ತಾರ ಕೆ.ವಸಂತ್ ಕುಮಾರ್, ನಗರ ಜಿಲ್ಲಾ ಮಾಧ್ಯಮ ಸಂಚಾಲಕ ಮಹೇಶ್ ರಾಜೆ ಅರಸ್, ಸಹ ವಕ್ತಾರ ಕೇಬಲ್ ಮಹೇಶ್ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಇಂದೇ ಸಂಪರ್ಕಿಸಿ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್ ಮುಂತಾದ ಕೈಗಾರಿಕ ಪ್ರದೇಶಗಳಲ್ಲಿರುವ ಕಂಪನಿ, ಆಫೀಸ್ & ಶೋರೂಂಗಳಿಗೆ ಕೆಲಸ ಮಾಡಲು 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Quality, Billing, Cashier, Telephone attender, Receptionist, Data Entry ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 38000 (ESI+PF+OT) ಸೇರಿ. ಸಂಪರ್ಕಿಸಿ:
9353753194 / 7676939277

ಬಯೋಟೆಕ್ ಕೆಮಿಕಲ್ಸ್‌ರವರಿಂದ
ನಿಮ್ಮ ಮನೆಯ ಆರ್.ಸಿ.ಸಿ ಬಿರುಕು ಬಿಟ್ಟಿದೆಯೇ?, ಗೋಡೆಗಳು ಬಿರುಕು ಬಿಟ್ಟಿದೆಯೇ?, ಬಾತ್ ರೂಂ, ಟಾಯಲೆಟ್‌ಗಳಿಂದ ವಸ್ತ್ರ ಬರುತ್ತಿದ್ದರೆ. ಟ್ಯಾಂಕ್ & ಸಂಪುಗಳಲ್ಲಿ ನೀರು ನಿಲ್ಲದಿದ್ದರೆ. ಗ್ಯಾರಂಟಿಯೊಂದಿಗೆ ಸರಿಪಡಿಸಿಕೊಡುತ್ತೇವೆ. ಕೂಡಲೇ ಸಂಪರ್ಕಿಸಿ:
9739333346

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: 8th, SSLC, ITI (Fitter), Turner, Welder, Any Trade) (AAL)
7090309148 / 9035885330
7019380847

ಬೇಕಾಗಿದ್ದಾರೆ
* ವೈಟರ್ಸ್ * ಕ್ಲೀನರ್ಸ್
* ನಾರ್ತ್ ಇಂಡಿಯನ್ ಕುಕ್
ಮೈಸೂರಿನ ಪ್ರತಿಷ್ಠಿತ ರೆಸ್ಟೋರೆಂಟ್‌ಗೆ ಬೇಕಾಗಿದ್ದಾರೆ
Mob: 7019883387

ಮನೆ ಮಾರಾಟಕ್ಕಿದೆ
ಪೂರ್ವ ದಿಕ್ಕು, ವಾಸ್ತುಪ್ರಕಾರ ನಿರ್ಮಿಸಿರುವ 35X15 ಅಳತೆಯ 3 ಅಂತಸ್ತಿನ ಮನೆ ನಿರ್ಮಿಸಿ 2 ವರ್ಷವಾಗಿದೆ ತಿಂಗಳಿಗೆ 24 ಸಾವಿರ ಬಾಡಿಗೆ ಬರುತ್ತದೆ ಸ್ಥಳ: NIE ಕಾಲೇಜ್ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು. ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ ಕೊಳ್ಳುವವರು ಮಾತ್ರ ಸಂಪರ್ಕಿಸಿ:
9900299714

S.K.CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ Engineering Plan ವಾಸ್ತು ಪ್ರಕಾರ 3D Elevation ಸಹಿತ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದಲ್ಲಿ Construction ಮಾಡಿ ಕೊಡುತ್ತೇವೆ.
9620528490

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
8/2:– ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್, ಅಯೋಧ್ಯೆ.
11/2:– ಪುರಿ ಜಗನ್ನಾಥ್, ಕೊಣಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್, ಚಂದ್ರಭಾಗ್ ಬೀಚ್.
21/2:– ದೆಹಲಿ, ವೈಷ್ಣೋದೇವಿ, ಶಕ್ತಿ ಪೀಠ ಇತ್ಯಾದಿ.
29/1:– ಗುಜರಾತ್, ಮ.ಪ್ರ 4 ಜ್ಯೋತಿರ್ಲಿಂಗ ನಾಗನಾಥ್, ಸೋಮನಾಥ್, ಮಹಾಕಾಳೇಶ್ವರ್, ಓಂಕಾಳೇಶ್ವರ್
28/1:– ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782
9964527782

ನೇರ ಸಂದರ್ಶನ
ಆಫೀಸ್ ಅಸಿಸ್ಟೆಂಟ್ (Female / Male) (Any Degree (B.Com / PUC/ Tally) MS. Office / Excel, Nudi, Work Experience (2 to 5 years) Age 20 to 30 Years, ವಿಜಯನಗರ, ಹೆಬ್ಬಾಳು, ಮೇಟಗಳ್ಳಿ ಹತ್ತಿರದವರಿಗೆ ಆದ್ಯತೆ.
9036745292 / 9972837203
(Call 10 am to 6 pm)

ಚಾರ್ಧಾಮ್ ಯಾತ್ರೆ
28/04/2023. ರಿಂದ ವಿಮಾನದಲ್ಲಿ 12 ದಿನಗಳ ಪ್ರವಾಸ ಸ್ಥಳಗಳು ; ದೆಹಲಿ, ಹರಿದ್ವಾರ, ಋಷಿಕೇಶ ಯಮುನೋತ್ರಿ, ಗಂಗೋತ್ರಿ, ಉತ್ತರಕಾಶಿ, ರುದ್ರಪ್ರಯಾಗ, ಗೌರಿಕುಂಡ, ಕೇದಾರನಾಥ ಬದರಿನಾಥ, ಇತ್ಯಾದಿ, ಊಟ, ಕೊಠಡಿ, ವಿಮಾನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್ ಗೆ 44000/–, ಕರ್ನಾಟಕ ಸರ್ಕಾರದಿಂದ ಚಾರ್ಧಾಮ್ ಯಾತ್ರೆಗೆ 20000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್, ನಜರ್ ಬಾದ್, ಮೈಸೂರು
9342118682 / 9449128682

ಮನೆ ಭೋಗ್ಯಕ್ಕಿದೆ
ಕನಕದಾಸನಗರ, #86 "ಎ" ಬ್ಲಾಕ್, 3ನೇ ಹಂತ, 3ನೇ ತಿರುವು, ಮೈಸೂರು. ನಂದಿ ಸರ್ಕಲ್ ಹತ್ತಿರ, 3 ಬೆಡ್ ರೂಂ ಸೌಲಭ್ಯದ ಮನೆ (ಕಾರ್ನರ್ ಇಂಡಿಪೆಂಡೆಂಟ್)
9611881603

ಸೈಟ್ ಫಾರ್ ಸೇಲ್
ಜ್ಞಾನಭಾರತಿ ಲೇಔಟ್, 2ನೇ ಸ್ಟೇಜ್, ದಡದಹಳ್ಳಿ, ಜೆ.ಪಿ. ನಗರ ರಿಂಗ್ ರೋಡ್ ನಿಂದ 5 ಕಿ.ಮೀ. ದೂರ, 30x40, ಮುಡಾ ಖಾತೆ. ಬೆಲೆ: 24 ಲಕ್ಷ.
Mob: 9342123373

ಸೈಟ್ ಮಾರಾಟಕ್ಕಿದೆ
20x30, N/F
ಸೈಟ್, ವಿಜಯನಗರ, 4ನೇ ಹಂತ, 2ನೇ ಘಟ್ಟ, ಮೈಸೂರು.
9448468034

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಬೇಕಾಗಿದ್ದಾರೆ. ಹುಡುಗಿಯರಿಗೆ ಮಾತ್ರ
7899754149

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಮ್ಯಾನೇಜರ್ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ.
7899754149

ಬೇಕಾಗಿದ್ದಾರೆ
ನಮ್ಮ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ.
H.B.R. Enterprises
2884, Mahaveer Nagar, Behind Sangam Takies, Mysore-1
9845112221 / 9916492993

ಬೇಕಾಗಿದ್ದಾರೆ
ಶ್ರೀ ಶ್ರೀ ಶ್ರೀ ವಿರಾಂಜನೇಯ ಗೋಲ್ಡ್ ಕಂಪನಿ ನಮ್ಮ ಗೋಲ್ಡ್ ಕಂಪನಿಯಲ್ಲಿ (ಟೆಲಿ ಕಾಲರ್ಸ್) ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ಇನ್ಸೆಂಟಿವ್
8861732326
8277512141
ಕುವೆಂಪುನಗರ ಡಿಪೋ ಹತ್ತಿರ ಮೈಸೂರು ಹಳೆ ಪೋಸ್ಟ್ ಆಫೀಸ್

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸ್ಟೋರ್ ಕೀಪರ್ ಹಾಗೂ ಅಕೌಂಟೆಂಟ್ ಮತ್ತು ಮ್ಯಾನೇಜರ್ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ. ವಯಸ್ಸು 45 ರ ಒಳಗಿರಬೇಕು. ಉತ್ತಮವಾದ ಸಂಬಳ ದೊರಕುತ್ತದೆ. ವಿಳಾಸ: ಶ್ರೀ ರಾಯಲ್ ವಾರಿಯರ್ ಬೇಕರಿ ಮತ್ತು ಫುಡ್ಸ್, #668, ಜೆಎಫ್, ಜೆ ಸಿ ಎಸ್ ಟಿ 2ನೇ ಸ್ಟೇಜ್, ಎಂ ಬ್ಲಾಕ್, ಕುವೆಂಪುನಗರ, ನೃಪತುಂಗ ರಸ್ತೆ, ಮೈಸೂರು – 570023. ದೂರವಾಣಿ ಸಂಖ್ಯೆ.
9019876412 / 8431458760

ಕಳೆದಿದೆ
ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, 3ನೇ ಹಂತ, 2ನೇ ಫೇಸ್, ಓವೈಹೆಚ್‌ಎಸ್ ಇಡಬ್ಲ್ಯೂಎಸ್ ಮಾದರಿ ಮನೆ ನಂ. 30, ಈ ಸ್ವತ್ತು ದಿನಾಂಕ 21–10–2015 ರಂದು ಶ್ರೀಮತಿ ವಿಶಾಲಾಕ್ಷಿ ರವರಿಂದ ಶ್ರೀ ಕಿಶೋರ್ ಉ॥ ಕೆ.ಎಂ. ನಾಗರೇಶಿ ಮತ್ತು ಶ್ರೀಮತಿ ನೀಲವ್ವ ರವರಿಗೆ ಕ್ರಯವಾಗಿದ್ದು, ಸದರಿ ಸ್ವತ್ತಿನ ಮೂಲ ಮಾಲೀಕರಾದ ಶ್ರೀಮತಿ ಹೆಚ್.ಆರ್. ಮನೋನ್ಮಣಿ ರವರ ಹೆಸರಿನಲ್ಲಿರುವ ಮುಡಾ ಖಾತಾ ಪತ್ರವು ದಿನಾಂಕ 02–01–2023ರಂದು ಕಳೆದಿದ್ದು, ಸಿಕ್ಕಿದವರು ಸಂಪರ್ಕಿಸಿ:
Rajalakshmi: 78291 68846

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

SITES FOR SALE
30x40 Sites,
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road
8660105902

ಹೊಸ ಮನೆ ಮಾರಾಟಕ್ಕಿದೆ ಹಾಗೂ ಸೈಟುಗಳು ದೊರೆಯುತ್ತವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ನಿವೃತ್ತರಿಗೆ ವಿಶೇಷ ಉದ್ಯೋಗ ಅವಕಾಶ
ಕೇಂದ್ರ, ರಾಜ್ಯ, ಬ್ಯಾಂಕಿಂಗ್, ಖಾಸಗಿ ಕ್ಷೇತ್ರದ ನಿವೃತ್ತರು Housewives ಹಾಗೂ ಬಿಸಿನೆಸ್ ವಲಯದವರಿಗೆ ಪ್ರಖ್ಯಾತ ಬ್ಯಾಂಕಿಂಗ್ ಸಮೂಹದಿಂದ ಸುವರ್ಣ ಅವಕಾಶ Free Seminar 09-01-23 ಸೋಮವಾರ 11am Hotel ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ, ಮೈಸೂರು.
9845458130 / 7349052084
9880115979 / 9845244373

ಮಂಡಿ ನೋವು
ಮಂಡಿನೋವು ಸೊಂಟನೋವು ಮತ್ತು ಬೆನ್ನು ನೋವು ಎಷ್ಟೇ ಹಳೆಯದಾದರೂ ಹಾಗೂ ಎಷ್ಟೇ ಜಾಸ್ತಿಇರಲಿ 100% ಆಯುರ್ವೇದ ಚಿಕಿತ್ಸೆಗಾಗಿ ಸಂಪರ್ಕಿಸಿ. ಯಾವುದೇ ಅಡ್ಡಪರಿಣಾಮ ಇರುವುದಿಲ್ಲ.
6361740552

INVITATION
JOB OPPORTUNITY MEET
Exclusive for any Sales & Financial Experience Retired, Govt./Pvt./VRS/ Ex-Bankers / Teachers / Housewives Invites you to start your job and make the most out your skills also gives you & opportunity to earn salary, PF, ESI & Incentives. For Regestration & Venue details Call us.
8792182784 / 9845799898

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

JOB VACANCY
(Company appointment) Not Security Agency Security Guards, Supervisors, Security Officers, Place : Mysore, Nanjangud, Gundalpet, HD Kote, Hunsur, K R Nagar, Periyapatna, Madikari, Salary : 16k to 25 k, 26 days, PF ESI, Date: 5th & 6th Jan, 2023. Place of Interview- Siddappa Square, Vani Vilas, Double Road, N R Mohalla, Lakshmipuram, Mysuru, Karnataka - 570004.
9986483251 / 8618291971
9880934349

LAYOUT MARKETING
We are one of pioneer in marketing, having experience of selling morethan 1 k plots in mysore & Bang. Feel free 2 Call us if ur in need
9606697999

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000/-
Ph.9380142144
ಶಿವರಾಂಪೇಟೆ, ಮೈಸೂರು

ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಮಗು ಬಾಣಂತಿ ಹಾರೈಕೆ ಮಾಡುವವರು ಅಡುಗೆ & ಮನೆ ಕೆಲಸ ಮಾಡುವವರು ಅನುಭವ ಇರುವ ಇಲ್ಲದೆ ಇರುವ ಹುಡುಗ, ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 15,000 ರಿಂದ 23,000, SSLC ಪಾಸ್ ಅಥವಾ ಫೇಲ್ ಸಂಪರ್ಕಿಸಿ:
8123630683

SITE FOR SALE
30x40 MUDA North Facing Site for Sale in Annpoorneshwari Layout, T Narasipura Road, Near Police Layout. Contact:
9686895205

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

AMAZE


SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ರೈಲಿನಲ್ಲಿ ಕಾಶಿ ಯಾತ್ರೆ
10/04/2023. ರಿಂದ ರೈಲಿನಲ್ಲಿ 13 ದಿನಗಳ ಪ್ರವಾಸ. ಸ್ಥಳಗಳು ; ದೆಹಲಿ, ಆಗ್ರಾ ಮಥುರಾ ಬೃಂದಾವನ, ಕಾಶಿ, ಸಾರನಾಥ್, ಅಯೋಧ್ಯಾ, ಅಲಹಾಬಾದ್, ಸೀತಮಡಿ, ಗಯಾ, ಬುದ್ದಗಯಾ, ಇತ್ಯಾದಿ. ಊಟ, ಕೊಠಡಿ, ರೈಲು, ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟ್‌ಗೆ 17000/–, ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ 5000 ರೂ ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ ಅಂಡ್ ಟ್ರಾವೆಲ್ಸ್, ನಜರ್ ಬಾದ್, ಮೈಸೂರು.
9342118682 / 9449128682

SITE FOR SALE
40x60
Site for Sale Suvarna Layout Bogadi Gaddige Road,(Near Rainbow School)
9880273834

ಮನೆ ಭೋಗ್ಯಕ್ಕಿದೆ
ವಿಜಯನಗರದ 2ನೇ ಹಂತ, ಮೈಸೂರು ವಿಜಯನಗರ ಪೋಲಿಸ್ ಸ್ಟೇಶನ್ ಹಿಂಭಾಗ 60x40 ಬೆಡ್ ರೂಂ, ಸೌಲಭ್ಯತೆ :– Car Parking ವ್ಯವಸ್ಥೆ ಇರುತ್ತದೆ.
6363013421
9483507250

WANTED
HOUSE KEEPING
ROYAL LOOK SALON
PROFESSIONAL UNISEX
LADIES ONLY
#468/A, Vinaya Marga, Opp. Jain Temple, Siddartha Layout, Nazarbad Mohalla, Myscre - 570011
M : 89712 32898

AFFIDAVIT
I, Soumya Raman Bharadwaj, residing at Door No. 5728, 22nd Main, Park View, Vijayanagar 2nd Stage, Mysuru-570 017, I declare that my name is Soumya Raman and the same name is mentioned in all my educational documents and property documents. But my name is mentioned as Soumya Raman Bharadwaj in my Aadhar Card, Pan Card and all other documents. I state and declare in front of Notary S.N. Hemalatha, that my name is Soumya Raman and the name Soumya Raman Bharadwaj is one and the same.
Sd/- Soumya Raman Bharadwaj

AFFIDAVIT
I, Balasubramanyam Bharadwaj, residing at Door No. 5728, 22nd Main, Park View, Vijayanagar 2nd Stage, Mysuru-570 017, declare that my name is Kolar Balasubramanyam and the same name is mentioned in all my educational documents and property documents. But my name is mentioned as Balasubramanyam Bharadwaj in my Aadhar Card, Pan Card and all other documents. I state and declare in front of Notary S.N. Hemalatha, that my name is Kolar Balasubramanyam and the name Balasubramanyam Bharadwaj is one and the same.
Sd/- Balasubramanyam Bharadwaj

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586, 6360884930

ಬೇಕಾಗಿದ್ದಾರೆ
ಪ್ರಸಿದ್ಧ ಹೋಟೆಲ್‌ಗೆ ರಿಸೆಪ್ಷನಿಸ್ಟ್ – (ಹುಡುಗಿ) ಹಾಗೂ ರೂಂ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ:
9945779995
9611456773

ಬೇಕಾಗಿದ್ದಾರೆ
ಮೈಸೂರು – ಕೊಡಗು – ಮಂಗಳೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ದೃಢಕಾಯ ಯುವಕರು, ಡ್ರೈವರುಗಳು ಬೇಕಾಗಿದ್ದಾರೆ. 1) ಡೆಲಿವರಿ ಬಾಯ್ 10,000, 2) ಹೆವಿ ಡ್ರೈವರ್ 18,000, 3) ಟೆಂಪೋ ಡ್ರೈವರ್ 16,000. ಸಂಪರ್ಕಿಸಿ:
9740408488

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು 12 hr & 24 hrs ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ, ವಸತಿ ಉಚಿತದೊಂದಿಗೆ ಸಂಬಳ 13000 – 23000 ರವರೆಗೆ. ಆಧಾರ್ ಕಾರ್ಡ್ & ಫೋಟೋ ಕಡ್ಡಾಯ. ಯಾವುದೇ ಶುಲ್ಕ ಇರುವುದಿಲ್ಲ (ಸರ್ಕಾರಿ ನೋಂದಾಯಿತ ಸಂಸ್ಥೆ).
9743135666, 7483960098

ಸುವರ್ಣ ಯಾತ್ರ
ಗುಜರಾತ್ ಪ್ರವಾಸ 8 ದಿನಗಳು 30–01–2023. ಪುರಿ ಜಗನ್ನಾಥ ಪ್ರವಾಸ 4 ದಿನಗಳು 18–01–2023. ಕಾಶಿ ಪ್ರವಾಸ: 7 ದಿನಗಳು 24–2–2023. ರಾಜಸ್ಥಾನ ಪ್ರವಾಸ 9 ದಿನಗಳು 20–02–2023. ನೇಪಾಳ, ಮುಕ್ತಿನಾಥ ಪ್ರವಾಸ 7–3–2023, 9 ದಿನಗಳು.
9008381022, 9019462508

ಬೇಕಾಗಿದ್ದಾರೆ
ಮಡಿಕೇರಿ ಬಳಿ 'ಎಸ್ಟೇಟ್ ಹೋಂ ಸ್ಟೇ' ಅಲ್ಲಿ ಕೆಲಸ ಮಾಡಲು ದಂಪತಿಗಳಿಗೆ ಅವಕಾಶವಿದೆ. ಸಂಬಳ, ಊಟ ಮತ್ತು ವಾಸಕ್ಕೆ ವ್ಯವಸ್ಥೆ ಇದೆ. ಸಂಪರ್ಕಿಸಿ:
9844563757, 7975959269

ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿಯಲ್ಲಿ ತೋಟಗಳು ಮತ್ತು ಜಮೀನುಗಳು ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ:
9945661696, 8618848886

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
30x40, N/F, Hebbal 1st Stage, Near more, Mysore.
30x40 S/F Bhoomika Layout, Ilwala, Mysore
9342114717

ಸೈಟ್ ಕಂ ಕನ್‌ಸ್ಟ್ರಕ್ಷನ್
ಮೈಸೂರಿನಲ್ಲಿ 30x40, 30x50, 30x60, 40x60 Site ನಲ್ಲಿ ಸೈಟ್ ಕಂ ಕನ್‌ಸ್ಟ್ರಕ್ಷನ್ ಪ್ಯಾಕೇಜ್‌ನಲ್ಲಿ ನಿಮ್ಮ Plan ನಂತೆ ಮನೆ ಕಟ್ಟಿಕೊಡಲಾಗುವುದು.
9886191069
9242170927

PART TIME WORK WORK FROM HOME
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ / JOB. ತಿಂಗಳಿಗೆ ಸಂಬಳ 12,000 ದಿಂದ 18,000 ದವರೆಗೂ ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
ಸಂಪರ್ಕಿಸಿ:
9148733213

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ವಾಟರ್ ಲೆವೆಲ್ ಕಂಟ್ರೋಲ್‌ಗಾಗಿ


ಸಂಪರ್ಕಿಸಿ:
Mob: 8880558064

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

SITE FOR SALE
30x40, North West corner Site, Nithyananda Sagar, Phase 1, Huyilalu, Near St. Joseph's School. (Muda Approved Layout)
9743532664

ANNOUNCEMENT
I RAMESH SIDDEGOWDA Son of SIDDEGOWDA Aged 53 years, residing at No. 130 Milk Dairy Road, Koorgalli, Mysuru - 570018. do hereby State on before Notary S.N.HEMALATHA, Mysuru. Vide Affidavit Dated : 19-08-2022 that in my Bank records Name is Mentioned as RAMESHA. S, in my Pan card, Adhaar card and Daughter Birth Certificate and Educational Documents Name is mentioned as RAMESH.S, Ramesha.S and RAMESH SIDDEGOWDA are Names refers to me Only.

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಬೇಕಾಗಿದ್ದಾರೆ
ಪ್ರತಿಷ್ಠಿತ ಸಂಸ್ಥೆಯೊಂದಕ್ಕೆ ವಿವಿಧ ಹುದ್ದೆಗಳಿಗೆ ಯುವತಿಯರು / ಯುವಕರು ಬೇಕಾಗಿದ್ದಾರೆ. ಸಂಬಳ: 10,000/– ರಿಂದ 15,000/–.
8951446896
9108989418

ಆಯುರ್ವೇದ ಔಷಧ
ಮಂಡಿ ನೋವು, ಹಳೆಯ ಚಿಕನ್ ಗುನ್ಯಾ ನೋವು, ಜಾಯಿಂಟ್, ಬೆನ್ನು, ಕುತ್ತಿಗೆ, ಭುಜಗಳು ಎಲ್ಲಾ ರೀತಿಯ ಹಳೆಯ ನೋವುಗಳು ಇದ್ದರೂ ಶಾಶ್ವತ ಪರಿಹಾರಕ್ಕಾಗಿ ನಾವು ಕೊಡುವ ಆಯುರ್ವೇದ ಔಷಧಕ್ಕಾಗಿ ಸಂಪರ್ಕಿಸಿ
8904081333

ತಕ್ಷಣ ಬೇಕಾಗಿದ್ದಾರೆ
ತಾಂಡ್ಯ ಮತ್ತು ಹಿಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ:– 10,000/- (8 Hours), ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9886423504
Company : Victory Services

MUDA APPROVED SITES
30x40 @ Vinayaka Green City, Near Vijayanagar, 4th Stage.
40x60 @ KRS Road, Opp. Wipro
7026901111

WANTED
1. Driver for Tata Ace
2. Helper and Delivery Boys for Nestle and MTR Distributor (Attractive Salary with ESI and EPF)
99458 10626
98455 44545
#17/2, 1st Floor, 5th Main, 8th Cross, Saraswathipuram, Mysore

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ತಾಂಡ್ಯ ಇಂಡಸ್ಟ್ರಿಯಲ್, ಟಿವಿಎಸ್ ಫ್ಯಾಕ್ಟರಿಂಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ:– 15,000/- (26 days), ವಯೋಮಿತಿ 50 ವರ್ಷದ ಒಳಗೆ, ESI ಮತ್ತು PF ಊಟ, ತಿಂಡಿ ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819
9538567819

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ಮೈಸೂರಿನಲ್ಲಿ 40 ವರ್ಷ ವಯೋಮಿತಿ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9844264134
9844736136

ಬೇಕಾಗಿದ್ದಾರೆ
ಬೆಸ್ಟ್ ಮೈಸೂರ್ಸ್ ಸ್ಪೇರ್ಸ್ ಪೈಪ್ಸ್, ಡ್ರಿಪ್ ಇಗೇಷನ್ ಫ್ಯಾಕ್ಟರಿಯಲ್ಲಿ ಮಾರ್ಕೆಟಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು : 30 ವರ್ಷದ ಒಳಗೆ ಅನುಭವವುಳ್ಳವರಿಗೆ ಆದ್ಯತೆ. ಡ್ರಿಪ್ ಪೈಪ್ ಅನ್ನು ನಮ್ಮಲ್ಲಿ ಉತ್ಪಾದಿಸಲಾಗುವುದು ಹಾಗೂ ಹೋಲ್‌ಸೇಲ್ ಬೆಲೆಗೆ ದೊರೆಯುತ್ತದೆ.
7022032670

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಅನಿಮಲ್ ಫೀಡ್ ಕಂಪನಿಗೆ ಪೌಡರಿಂಗ್ ಪ್ಯಾಕಿಂಗ್ ಮತ್ತು ಲೋಡಿಂಗ್ ಕೆಲಸಕ್ಕೆ 18 ರಿಂದ 45 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ಆಧಾರ್‌ಕಾರ್ಡ್ ಜೆರಾಕ್ಸ್ ಪ್ರತಿ ಜತೆಗೆ ಸಂಪರ್ಕಿಸಿ:– ಸಾಯಿ ಕೃಪ ಎಂಟರ್ ಪ್ರೈಸಸ್, ಸಂಬಳ: 14,0000/– (8 ಗಂಟೆ ಕೆಲಸಕ್ಕೆ)
ರತ್ನಯ್ಯ : 990088932
ಬೋರೇಗೌಡ : 8050905152
Interview ಸ್ಥಳ: CIEPT ಕಾಲೇಜು ಹತ್ತಿರ, ಬೆಳಿಗ್ಗೆ – 10 ರಿಂದ ಮಧ್ಯಾಹ್ನ 12.30 ರವರೆಗೆ

SITE FOR SALE
(Along with House) Address:- 126/1, #1777, Janatha Nagar, 5th Cross, Bogadi, Mysore. Dimension: 25 (North to South) 35 (East to West)
9620329023
9448790240

FOR SALE
1) 30x40 30x50 sites in defence apartment near kote road
2) 2 Acr land tvs factory near. 1 acr harohalli H.D. Kote road
3) Semi-Commercial 40x45 s/w c RK Nagar I blk
4) 40x60 KC Layout
5) 30x40 12 lakhs near Elwala
6) 40x60 Jaipura HD Kote Road
PRAKRUTHI PROPERTIES
90359 90359 / 95386 90359

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓ.ಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 12 hours duty ನಾಡನಹಳ್ಳಿ ಸುತ್ತಮುತ್ತ ಟಿ.ನರಸೀಪುರ ರೋಡ್. ಸಂಪರ್ಕಿಸಿ:
7996176555
Call : 9.30am to 6 p.m

PLOTS FOR SALE
SRI SAI LAKE VIEW
30x40, 30x50
Near Kesare Village, 500 Mtrs to Ring Road.
8660352905

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಹುಣಸೂರು ಪಟ್ಟಣ, ಕೆ.ಆರ್.ನಗರ ರಸ್ತೆ, ಕಲ್ಕುಣಿಕೆ ಮನೆ ನಂ.2132/1, ಇಲ್ಲಿ ವಾಸವಾಗಿರುವ ಬಾಲಕೃಷ್ಣ ರವರ ಧರ್ಮಪತ್ನಿ, ಸುಮಾರು 31 ವರ್ಷ ವಯಸ್ಸುಳ್ಳ ಶ್ರೀಮತಿ ವನೀತ ಕೆ. ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ಆದಾಗಿ ನನ್ನ ಮಗಳಾದ ಕುಮಾರಿ. ಕೀರ್ತನ ಹೆಚ್.ಟಿ ಹುಣಸೂರಿನ ರೋಟರಿ ಶಾಲೆ, ಇಲ್ಲಿ 4ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ನನ್ನ ಮಗಳ ಶಾಲಾ ದಾಖಲಾತಿಯಲ್ಲಿ, ತಂದೆಯ ಹೆಸರು ಬಾಲಕೃಷ್ಣ ಎಂಬುದರ ಬದಲಾಗಿ ರಮೇಶ.ಹೆಚ್.ಪಿ ಎಂದು ತಪ್ಪಾಗಿ ನಮೂದಾಗಿದ್ದು, ಸದರಿ ಶಾಲಾ ದಾಖಲೆಗಳಲ್ಲಿ ನನ್ನ ಮಗಳ ತಂದೆಯ ಹೆಸರನ್ನು ರಮೇಶ ಹೆಚ್.ಪಿ ಎಂಬುದರ ಬದಲಾಗಿ ಬಾಲಕೃಷ್ಣ ಎಂದು ತಿದ್ದುಪಡಿ ಮಾಡಬೇಕೆಂದು ಈ ಪ್ರಮಾಣ ಪತ್ರವನ್ನು ಪ್ರಮಾಣೀಕರಿಸುತ್ತಿದ್ದೇನೆ. ಸಹಿ/– ವನೀತ.ಕೆ

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಸಿಎಂರನ್ನು ನಾಯಿಗೆ ಹೋಲಿಸಿ, ಸಿದ್ದು ಸನಾತನ ಧರ್ಮಕ್ಕೆ ಅಪಮಾನ ಮಾಡಿದ್ದಾರೆ: ಉಮೇಶ್

ಮಂಡ್ಯ, ಜ.6– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಿಗೆ ಹೋಲಿಸುವ ಮೂಲಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸನಾತನ ಧರ್ಮಕ್ಕೆ ಅಪಮಾನ ಮಾಡಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಕಿಡಿಕಾರಿದರು.



ಸುದ್ದಿಗಾರರ ಜೊತೆ ಮಾತನಾಡಿದ ಅವರು, ನಾಯಿ ಮಂಡ್ಯ ಜಿಲ್ಲೆಯ ಸನಾತನ ಮಠವಾದ ಆದಿಚುಂಚನಗಿರಿ ಮಠದ ಚಿಹ್ನೆಯಾಗಿದೆ. ಮುಖ್ಯಮಂತ್ರಿಯಾಗಿ, ವಿಪಕ್ಷ ನಾಯಕರಾಗಿ 13 ಬಾರಿ ಬಜೆಟ್ ಮಂಡಿಸಿರುವ ಕೀರ್ತಿ ಹೊಂದಿರುವ ಸಿದ್ದು, ಸಾಮಾನ್ಯ ವ್ಯಕ್ತಿಯಂತೆ ಟೀಕೆ ಮಾಡುವುದು ಸರಿಯಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು. ಸಿದ್ದರಾಮಯ್ಯ ಈ ಕೂಡಲೇ ಕ್ಷಮೆಯಾಚಿಸಬೇಕೆಂದರು.

ಇನ್ನು, ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಯುಪಿ ಸಿಎಂ ಯೋಗಿ ಆದಿತ್ಯನಾಥ್ ಬಗ್ಗೆ ಹಗುರವಾಗಿ ಮಾತನಾಡಿದ್ದು, ಲವ್ ಜಿಹಾದ್ ವಿಚಾರ ಪ್ರಸ್ತಾಪಿಸುವಾಗ ಯುಪಿ ಸಿಎಂ ಲವ್ ಮಾಡಿದ್ದರೆ ಗೊತ್ತಾಗುತ್ತಿತ್ತು ಎಂದು ಕೀಳಾಗಿ ಮಾತನಾಡಿದ್ದು, ಯೋಗಿ ಆದಿತ್ಯ ನಾಥ್ ಓರ್ವ ನಾಥ ಪರಂಪರೆಯಿಂದ ಬಂದಂತಹ ಸನ್ಯಾಸಿ. ಅವರನ್ನು ಹಗುರವಾಗಿ ಟೀಕಿಸಿರುವ ಹಿರಿಯ ಮುಖಂಡ ಇಬ್ರಾಹಿಂ ಕ್ಷಮೆ ಕೇಳದಿದ್ದರೆ ಹೋರಾಟ ನಡೆಸುವ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಅಶೋಕ್ ಜಯರಾಂ, ವಿವೇಕ್, ವಸಂತ್, ನಾಗಾನಂದ್, ಸಿ.ಟಿ.ಮಂಜುನಾಥ್ ಇದ್ದರು.

ಕಟ್ಟಡ, ಕಚೇರಿ ನಿರ್ಮಿಸಲು ಪರವಾನಗಿ ನೀಡುವಾಗ ಕನ್ನಡ ಬಳಕೆ ನಿಯಮ ಕಡ್ಡಾಯವಾಗಲಿ



ಮಂಡ್ಯ,ಜ.6– ಕಟ್ಟಡ, ಕಚೇರಿ ಕಟ್ಟಲು ಪರವಾನಗಿ ನೀಡುವಾಗ ಕನ್ನಡ ಬಳಸುವಂತೆ ನಿಯಮಾವಳಿ ರೂಪಿಸಬೇಕು ಎಂದು ಸದಸ್ಯರು ಆಗ್ರಹಿಸಿದರು.

ನಗರದ ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರು, ರೈಲು ನಿಲ್ದಾಣ, ಬ್ಯಾಂಕ್ ಚಲನ್, ಅಂಗಡಿ, ಕಚೇರಿ, ಮಳಿಗೆಗಳಲ್ಲಿ ಕನ್ನಡದ ನಾಮ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವಂತೆ ಸೂಚಿಸಬೇಕು ಎಂಬ ಸದಸ್ಯರ ಮಾತಿಗೆ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಮನೆ, ಕಟ್ಟಡ ಕಟ್ಟಲು, ಲೇಔಟ್ ಮಾಡಲು ಪರವಾನಗಿ ನೀಡಲು ದಾಖಲೆ ಸಮೇತ ವರದಿ ಕಳುಹಿಸಿದರೂ ಸಮರ್ಪಕ ಉತ್ತರ ನೀಡದೆ ಪರಿಶೀಲಿಸಿ ಎಂದು ಪತ್ರ ಹಾಕಿ ವಾಪಸ್ ಕಳುಹಿಸುವ ಮೂಡಾದಿಂದ ನಗರದಲ್ಲಿ ಮನೆ ಕಟ್ಟಲು ತೊಂದರೆಯಾಗುತ್ತಿದೆ ಎಂದು ಸದಸ್ಯರು ಕಿಡಿಕಾರಿದರು.

ಅನುಮೋದನೆಯಾಗಿರುವ ಲೇ ಔಟ್‌ನ ದಾಖಲೆ ಸಮೇತ ವರದಿ ಸಲ್ಲಿಸಿದರೂ ಅದನ್ನು ಕೊಡಬೇಕೋ ಅಥವಾ ಬೇಡವೇ ಎಂಬುದರ ಬಗ್ಗೆ ಸಮರ್ಪಕ ಉತ್ತರ ನೀಡದೆ ವಾಪಸ್ ಕಳುಹಿಸುತ್ತೀರಾ?. ಇದರಿಂದ ಸಾರ್ವಜನಿಕರಿಗೆ ಪರವಾನಗಿ ಹಾಗೂ ಖಾತೆ ಮಾಡಿಕೊಡಲು ಸಾಧ್ಯವಾಗುತ್ತಿಲ್ಲ ಎಂದು ಆಯುಕ್ತ ಮಂಜುನಾಥ್ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೂಡಾ ಅಧಿಕಾರಿ ದಾಕ್ಷಾಯಿಣಿ, ನೀವು ಕಳುಹಿಸುವ ದಾಖಲಾತಿಗಳಿಗೆ ಅನುಮೋದನೆ ನೀಡಬೇಕಾದರೂ ಜಿಲ್ಲಾಧಿಕಾರಿಗಳಿಂದ ದಾಖಲೆಗಳು ಬಂದ ತಕ್ಷಣ ನಾವು ಮತ್ತೊಮ್ಮೆ ಪರಿಶೀಲಿಸುತ್ತೇವೆ. ಸರ್ಕಾರದ ನಿಯಮ ಹಾಗೂ ಕಾನೂನು ಪ್ರಕಾರವೇ ಕ್ರಮ ವಹಿಸಲಾಗುತ್ತಿದೆ. ಯಾವುದೇ ವಿಳಂಬ ಮಾಡುತ್ತಿಲ್ಲ ಎಂದರು.

ಇದಕ್ಕೆ ಕಿಡಿಕಾರಿದ ಸದಸ್ಯ ನಾಗೇಶ್, ಮುಂದಿನ ಸಭೆಗೆ ನಿಮ್ಮ ಆಯುಕ್ತರೇ ಬಂದು ಉತ್ತರ ನೀಡಬೇಕು. ಇದರ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರಿಗೆ ಮನವಿ ಮಾಡಿದರು. ಮುಂದಿನ ಸಭೆಗೆ ಮೂಡಾ ಆಯುಕ್ತರನ್ನು ಕರೆಸುವಂತೆ ಅಧ್ಯಕ್ಷ ಎಚ್.ಎಸ್.ಮಂಜು ಸೂಚನೆ ನೀಡಿದರು.

ಶಾಸಕ ಎಂ.ಶ್ರೀನಿವಾಸ್, ಅಧ್ಯಕ್ಷ ಎಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತಿಮಾ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಪುಟ್ಟಸ್ವಾಮಿ, ಆಯುಕ್ತ ಮಂಜುನಾಥ್ ಇದ್ದರು.

ಅಕ್ರಮ ಗಣಿಗಾರಿಕೆ ಪತ್ತೆಗೆ ಡ್ರೋಣ್ ಸರ್ವೆ ಮಾಡಿಸಿ

ದಿಶಾ ಸಭೆಯಲ್ಲಿ ಸಂಸದೆ ಸುಮಲತಾ ಸೂಚನೆ

ಮಂಡ್ಯ, ಜ.6– ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ವ್ಯಾಪ್ತಿ ಕೆಆರ್‌ಎಸ್ ಸಮೀಪದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಪತ್ತೆಗೆ ಡ್ರೋಣ್ ಸರ್ವೆ ಮಾಡಿಸಿ, ಮ್ಯಾಪಿಂಗ್ ಮಾಡುವಂತೆ ಸಂಸದೆ ಸುಮಲತಾ ಅಂಬರೀಶ್ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೆಆರ್‌ಎಸ್ ಸುತ್ತಮುತ್ತ ಗಣಿಗಾರಿಕೆ, ಹೆಚ್ಚಾಗಿ ನಡೆಯುತ್ತಿದೆ. ಇಲ್ಲಿ ಸಕ್ರಮಕ್ಕಿಂತ ಅಕ್ರಮವಾಗಿ ನಡೆಯುತ್ತಿರುವ ಚಟುವಟಿಕೆಗಳೇ ಹೆಚ್ಚಾಗಿವೆ. ಇದನ್ನು ತಡೆಯಲು ಏಕೆ ಮುಂದಾಗಿಲ್ಲ ಎಂದು ಗಣಿ ಮತ್ತು ಭೂವಿಜ್ಞಾನ ಅಧಿಕಾರಿ ಪದ್ಮಜಾ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪದ್ಮಜಾ ಅವರು, ಅಕ್ರಮ ಗಣಿಗಾರಿಕೆಗೆ ನಾವು ಎಲ್ಲಿಯೂ ಎಡೆಮಾಡಿಕೊಟ್ಟಿಲ್ಲ. ಎಲ್ಲ ಚೆಕ್‌ಪೋಸ್ಟ್‌ಗಳಲ್ಲೂ ಎರವಲು ಸಿಬ್ಬಂದಿ ನೇಮಕ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದೇವೆ. ಶ್ರೀರಂಗಪಟ್ಟಣ, ಕೆಆರ್‌ಎಸ್ ಹಾಗೂ ಮಹದೇವಪುರ ಚೆಕ್‌ಪೋಸ್ಟ್‌ಗಳಲ್ಲಿ ಸಿ.ಸಿ.ಕ್ಯಾಮೆರಾ ಸೇರಿದಂತೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಅಕ್ರಮ ಸಾಗಾಣಿಕೆಗೆ ಕಡಿವಾಣ ಹಾಕಲಾಗಿದೆ ಎಂದರು.

ಸಿಬ್ಬಂದಿ ಕೊರತೆ ನಡುವೆ ಅಕ್ರಮ ಸಾಗಾಣಿಕೆದಾರರನ್ನು ಪತ್ತೆ ಹಚ್ಚಿ 21 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಅವರು ಜಾಮೀನು ಪಡೆದುಕೊಂಡಿದ್ದಾರೆ. 10 ಮೆಟ್ರಿಕ್ ಟನ್‌ಗಿಂತಲೂ ಹೆಚ್ಚಿನ ಭಾರ ಸಾಗಿಸುವ ಟಿಪ್ಪರ್‌ಗಳಿಗೆ ಸ್ಥಳದಲ್ಲೇ ದಂಡ ವಿಧಿಸಲಾಗುತ್ತಿದೆ. ಈವರೆಗೆ ಸುಮಾರು 19 ಲಕ್ಷ ರೂ. ದಂಡ ಸಂಗ್ರಹಿಸಲಾಗಿದ್ದು, ಚಾಲ್ತಿ ಕಲ್ಲು ಗಣಿ ಗುತ್ತಿಗೆದಾರರಿಂದ 23 ಕೋಟಿ ರೂ, ಹಾಗೂ ಅವಧಿ ಮುಗಿದ ಕಲ್ಲು ಗಣಿ ಗುತ್ತಿಗೆದಾರರಿಂದ 39.85 ಕೋಟಿ ರೂ. ಸೇರಿ ಒಟ್ಟು 63.83 ಕೋಟಿ ರೂ. ರಾಜಧನ ಬಾಕಿ ಇದ್ದು, ಇದನ್ನು ವಸೂಲಿ ಮಾಡಲು ಈಗಾಗಲೇ ನೋಟಿಸ್ ನೀಡಲಾಗಿದೆ ಎಂದರು.

ಕೆಆರ್‌ಎಸ್ ಅಣೆಕಟ್ಟೆಯ ಸುತ್ತಮುತ್ತಲಿನ 20 ಕಿ.ಮೀ. ವ್ಯಾಪ್ತಿಯೊಳಗೆ ಎಲ್ಲಾ ರೀತಿಯ ಕಲ್ಲು ಗಣಿಗಾರಿಕೆಯನ್ನು ನಿಷೇಧಿಸುವಂತೆ ಜಿಲ್ಲಾಧಿಕಾರಿಗಳು, ಇಲಾಖೆಯ ಸರ್ಕಾರದ ಮಟ್ಟದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯವರಿಗೆ ಪತ್ರ ಬರೆದಿದ್ದು, ಸ್ಫೋಟಕ ವಸ್ತುಗಳನ್ನು ದಾಸ್ತಾನು ಮಾಡಲು ಪರವಾನಗಿ ನೀಡುವಿಕೆ ಹಾಗೂ ನಿಯಂತ್ರಣ ಕ್ರಮವನ್ನು ಕೇಂದ್ರ ಇಲಾಖೆ ಕೈಗೊಳ್ಳಲಿದೆ ಎಂದು ತಿಳಿಸಿದರು.

ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಕಾಮಗಾರಿ ಕೈಗೊಂಡಿರುವ ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಕಾಮಗಾರಿಗೆ ಸಂಬಂಧಿಸಿದಂತೆ 22.44 ಲಕ್ಷ ಮೆಟ್ರಿಕ್ ಟನ್ ಉಪಖನಿಜಗಳನ್ನು ಸಾಗಾಣಿಕೆ ಮಾಡಲು ಪರವಾನಗಿ ಪಡೆದಿದ್ದು, 24.75 ಕೋಟಿ ರೂ. ರಾಜಧನವನ್ನು ಪಾವತಿಸಿದ್ದಾರೆ. ಮುರ್ರಂ ಮಣ್ಣಿಗೆ ಸಂಬಂಧಿಸಿದಂತೆ 7.32 ಕೋಟಿ ರೂ. ಸೇರಿ ಒಟ್ಟಾರೆ ಇಲಾಖೆಗೆ 32.07 ಕೋಟಿ ರೂ. ರಾಜಧನ ಬಂದಿದೆ ಎಂದು ಮಾಹಿತಿ ನೀಡಿದರು.

ಉಳಿದಂತೆ ಪಾಂಡವಪುರ ತಾಲೂಕಿನ ಕನಗನಮರಡಿ ಹಾಗೂ ಶಂಭೂನಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಕ್ವಾರಿಗಳು ಕಾನೂನುಬದ್ಧವಾಗಿದ್ದು, ಎರಡೂ ಕ್ರಷರ್‌ಗಳಿಗೂ ಭೇಟಿ ನೀಡಿ ಪರಿಶೀಲಿಸಿದ ಬಳಿಕವೇ ಪರವಾನಗಿ ನೀಡಲಾಗಿದೆ. ಇದು ಕೆಆರ್‌ಎಸ್‌ನಿಂದ ವಾಯುಮಾರ್ಗದಲ್ಲಿ 20 ಕಿ.ಮೀ. ದೂರ ಇದೆ. ಇಲಾಖೆ ನಿಯಮಾವಳಿಯಂತೆ ಪರವಾನಗಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಮಿಮ್ಸ್ ಆಸ್ಪತ್ರೆಯಲ್ಲಿ ಅಮಾನವೀಯ ಘಟನೆಗೆ ಖಂಡನೆ: ಗ್ಯಾಂಗ್ರಿನ್‌ಗೆ ಒಳಗಾಗಿದ್ದ ಪತಿಯ ಕಾಲು ಕತ್ತರಿಸಿ, ಪತ್ನಿಯ ಕೈಗೆ ಕೊಟ್ಟ ಮಿಮ್ಸ್ ಆಸ್ಪತ್ರೆಯ ಪ್ರಕರಣ ದಿಶಾ ಸಭೆಯಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದಲ್ಲದೆ, ಸಂಸದೆ ಸುಮಲತಾ ಅಂಬರೀಶ್ ಅವರು ಇದೊಂದು ಅಮಾನವೀಯ ಘಟನೆ ಎಂದು ಆಕ್ರೋಶ ವ್ಯಕ್ತಪಡಿಸಿ, ಇನ್ನು ಮುಂದೆ ಇಂತಹ ಘಟನೆಗಳು ಜರುಗದಂತೆ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಟಿ.ಎನ್.ಧನಂಜಯ ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚೆಗೆ ಆರು ಕೋವಿಡ್ ಪ್ರಕರಣಗಳು ಕಂಡು ಬಂದಿದ್ದು, ಅದರಲ್ಲಿ ಎರಡು ರಾಮನಗರದಿಂದ ಬಂದವರಲ್ಲಿ ಪತ್ತೆಯಾಗಿದೆ. ವಾಸ್ತವದಲ್ಲಿ ಓಮಿಕ್ರಾನ್ ತಳಿಯ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿರುವುದಿಲ್ಲ. ಮನೆಯಲ್ಲೇ ಚಿಕಿತ್ಸೆ ಪಡೆದು ಪ್ರತ್ಯೇಕವಾಗಿದ್ದರೆ ಸಾಕು ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ, ವಿದ್ಯುತ್ ಇಲಾಖೆ ಕೃಷಿ ಪಂಪ್ ಸೆಟ್‌ಗಳಿಗೆ ರಾತ್ರಿ ವೇಳೆ ಮಾತ್ರ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಚಿರತೆ ಕಾಟ ಹೆಚ್ಚಾಗಿದ್ದು, ನೀವು ರಾತ್ರಿಯ ಬದಲು ಹಗಲಿನಲ್ಲಿ ವಿದ್ಯುತ್ ನೀಡಿದರೆ ರೈತರಿಗೆ ಸಹಾಯವಾಗುತ್ತದೆ ಎಂದು ಸಲಹೆ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲ ಕೃಷ್ಣ, ಜಿಪಂ ಸಿಇಒ ಶಾಂತಾ ಎಲ್.ಹುಲ್ಮನಿ, ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ಯತೀಶ್ ದಿಶಾ ಸಮಿತಿ ಸದಸ್ಯರಾದ ಬೇಲೂರು ಸೋಮಶೇಖರ್, ಕೆ.ಪಿ.ಅರುಣಕುಮಾರಿ ಇದ್ದರು.



ಅಭಿಮಾನಕ್ಕೆ ಫೋಟೋ ಹಾಕಿಕೊಂಡರೆ ಕೇಳಲು ಆಗಲ್ಲ: ಸುಮಲತಾ

ಮಂಡ್ಯ, ಜ.6– ಬಿಜೆಪಿ ಸಮಾವೇಶದ ಫ್ಲೆಕ್ಸ್‌ಗಳಲ್ಲಿ ನನ್ನ ಅಭಿಮಾನಿಗಳು ಹಾಗೂ ಬೆಂಬಲಿಗರು ನನ್ನ ಫೋಟೋ ಬಳಕೆ ಮಾಡಿಕೊಂಡಿದ್ದಾರೆ. ಅಭಿಮಾನದಿಂದ ನನ್ನ ಫೋಟೋ ಅಳವಡಿಸಿಕೊಂಡರೆ ಅದನ್ನು ಪ್ರಶ್ನಿಸಲು ಆಗಲ್ಲ ಎಂದು ಸಂಸದೆ ಸುಮಲತಾ ಅಂಬರೀಷ್ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದಗೆ ನನ್ನ ಬೆಂಬಲ ಇದೆ. ಇದು ರಹಸ್ಯ ಇಲ್ಲ, ನಾನೇ ಅನೇಕ ಬಾರಿ ಹೇಳಿದ್ದೇನೆ. ಸಚ್ಚಿದಾನಂದ ನನ್ನ ಬೆಂಬಲಿಗನಾಗಿರುವುದರಿಂದ ಫ್ಲೆಕ್ಸ್‌ಗಳಲ್ಲಿ ಫೋಟೋ ಹಾಕಿದ್ದಾರೆ. ಇದಕ್ಕೆ ಬೇರೆ ಅರ್ಥ ಕಲ್ಪಿಸಿಕೊಂಡರೆ ನಾನೇನು ಮಾಡಲು ಎಂದು ಹೇಳಿದರು. ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ನಿನ್ನೆ ಬೆಂಗಳೂರು–ಮೈಸೂರು ನೂತನ ಹೆದ್ದಾರಿ ಪರಿಶೀಲನೆ ಮಾಡಿದ್ದಾರೆ. ಕೆಲವೆಡೆ ರಸ್ತೆ ಅವೈಜ್ಞಾನಿಕ ಕಾಮಗಾರಿ ಬಗ್ಗೆ ನಾನು ಸಚಿವರಿಗೆ ಮನವರಿಕೆ ಮಾಡಿದ್ದು, ಅದನ್ನು ಸರಿಪಡಿಸುವ ಭರವಸೆ ನೀಡಿದ್ದಾರೆ. ಮುಂದಿನ ತಿಂಗಳು ರಸ್ತೆ ಉದ್ಘಾಟನೆಯಾಗುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅಷ್ಟರಲ್ಲಿ ಉಳಿದಿರುವ ರಸ್ತೆ ಕಾಮಗಾರಿ ಮುಗಿಸಿ, ಉದ್ಘಾಟನೆಗೆ ಸಜ್ಜು ಮಾಡುವುದಾಗಿ ಹೇಳಿದ್ದಾರೆ. ಅವರು ಕೊಟ್ಟ ಸಮಯದಲ್ಲಿ ಉದ್ಘಾಟನೆ ಮಾಡುತ್ತಾರೋ ಇಲ್ಲವೋ ಎಂಬುದನ್ನು ಕಾದು ನೋಡೋಣ ಎಂದರು.

ಚಿರತೆ ದಾಳಿ: ಮಹಿಳೆಗೆ ಗಾಯ

ಮಂಡ್ಯ: ಜಾನುವಾರು ಮೇಯಿಸಲು ಹೋಗುತ್ತಿದ್ದ ಮಹಿಳೆಯ ಮೇಲೆ ಚಿರತೆ ದಾಳಿ ಮಾಡಿರುವ ಘಟನೆ ಇಲ್ಲಿನ ಅವರೇಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಭವಿಸಿದೆ.

ಚಿರತೆ ದಾಳಿಯಲ್ಲಿ ಗಾಯಗೊಂಡಿರುವ ಮಹಿಳೆ ಅವರೇಹಳ್ಳಿಯ ಬಸಮ್ಮಣ್ಣಿ ಎಂದು ಗುರುತಿಸಲಾಗಿದ್ದು, ಅವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಸುಮಾರು ಬೆಳಗ್ಗೆ 9ರ ಸಮಯದಲ್ಲಿ ಜಾನುವಾರುಗಳನ್ನು ಜಮೀನಿಗೆ ಹೊಡೆದು ಕೊಂಡು ಹೋಗುತ್ತಿದ್ದಾಗ ಪೊದೆಯಲ್ಲಿ ಅಡಗಿ ಕುಳಿತಿದ್ದ ಚಿರತೆ ಬಸಮ್ಮಣ್ಣಿ ಮೇಲೆ ಎರಗಿದೆ. ಚಿರತೆ ದಾಳಿ ಮಾಡುತ್ತಿದ್ದಂತೆ ಅವರು ಕೂಗಿಕೊಂಡಿದ್ದು, ಸುತ್ತಮುತ್ತಲಿನ ಗ್ರಾಮಸ್ಥರು ಬಂದಿದ್ದಾರೆ. ಗ್ರಾಮಸ್ಥರ ಕಿರುಚಾಟಕ್ಕೆ ಬೆದರಿದ ಚಿರತೆ ಓಡಿ ಹೋಯಿತು ಎಂದು ಗ್ರಾಮಸ್ಥರ ಘಟನೆ ಕುರಿತು ಅರಣ್ಯ ಇಲಾಖೆಗೆ ತಿಳಿಸಿದ್ದಾರೆ.

ಬಸ್ ಉರುಳಿ 30 ಮಂದಿಗೆ ಗಾಯ

ಕೆ.ಆರ್.ಪೇಟೆ, ಜ.6– ಚಾಲಕನ ನಿಯಂತ್ರಣ ತಪ್ಪಿ ಸಾರಿಗೆ ಬಸ್ ಉರುಳಿ ಬಿದ್ದ



ಪರಿಣಾಮ 30 ಮಂದಿ ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಾಲೂಕಿನ ಮುರುಕನಹಳ್ಳಿ ಗ್ರಾಮದ ಬಳಿ ನಡೆದಿದೆ. ಗದಗದಿಂದ ಮೈಸೂರಿಗೆ ತೆರಳುತ್ತಿದ್ದ ಸಾರಿಗೆ ಬಸ್ ಮುರುಕನಹಳ್ಳಿ ಗ್ರಾಮದ ಬಳಿ ಉರುಳಿದೆ. ಪರಿಣಾಮ ಚಾಲಕ, ನಿರ್ವಾಹಕ ಸೇರಿದಂತೆ 30 ಮಂದಿ ಪ್ರಯಾಣಿಕರು ಗಾಯಗೊಂಡಿದ್ದು, ಎಲ್ಲರನ್ನೂ ಕೆ.ಆರ್.ಪೇಟೆಯ ದುಂಡಶೆಟ್ಟಿ ಲಕ್ಷ್ಮಮ್ಮ ಸ್ಮಾರಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಠಾಣೆಯ ಎಸ್‌ಐ ಪ್ರಮೋದ್ ಭೇಟಿ ನೀಡಿ ಪರಿಶೀಲಿಸಿದರು.

ತಡೆಗೋಡೆ ನಿರ್ಮಾಣಕ್ಕೆ ಆಗ್ರಹ: ಬಸ್ ಉರುಳಿ ಬಿದ್ದ ಸ್ಥಳ ತಿರುವಿನಿಂದ ಕೂಡಿದ್ದು, ರಸ್ತೆಯ ಎರಡೂ ಬದಿ ತಡೆಗೋಡೆ ನಿರ್ಮಿಸುವಂತೆ ತಾಲೂಕು ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಸೋಮಶೇಖರ್ ಹಾಗೂ ಕಾರ್ಯಾಧ್ಯಕ್ಷ ಎಸ್.ರವಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ಚಿಕ್ಕಕೊಪ್ಪಲಿನಲ್ಲಿ ಚಿರತೆ ಸೆರೆ

ಪಾಂಡವಪುರ,ಜ.6– ತಾಲೂಕಿನ ಚಿಕ್ಕಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಚಿರತೆ ಸೆರೆ ಸಿಕ್ಕಿದೆ. ಚಿಕ್ಕಕೊಪ್ಪಲು



ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿರುವ ರೈತ ಶಿವರಾಮು ಜಮೀನಿನ ಬಳಿ ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಪದೇ–ಪದೇ ಪ್ರತ್ಯಕ್ಷವಾಗುತ್ತಿದ್ದ ಚಿರತೆ ಸೆರೆಗೆ ಬೋನ್ ಇಡುವಂತೆ ಗ್ರಾಮಸ್ಥರು ಅರಣ್ಯಾಧಿಕಾರಿಗಳಿಗೆ ಮನವಿ ಮಾಡಿದ್ದರು. ಗ್ರಾಮಸ್ಥರು ಹಾಗೂ ರೈತರ ಮನವಿಗೆ ಸ್ಪಂದಿಸಿದ ಅರಣ್ಯಾಧಿಕಾರಿಗಳು ಬೋನ್ ಇರಿಸಿದ್ದರು. ಶುಕ್ರವಾರ ಬೆಳಗ್ಗೆ 4–5 ವರ್ಷದ ಹೆಣ್ಣು ಚಿರತೆ ಬೋನ್‌ನಲ್ಲಿ ಸೆರೆ ಸಿಕ್ಕಿದೆ.

ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿ, ಸೆರೆ ಸಿಕ್ಕ ಚಿರತೆಯನ್ನು ಬೋನಿನ ಸಮೇತ ತೆಗೆದುಕೊಂಡು ಹೋಗಲಾಯಿತು. ಚಿರತೆಗೆ ವೈದ್ಯಕೀಯ ಪರೀಕ್ಷೆ ನಡೆಸಿ ಬಳಿಕ ಮೇಲಾಧಿಕಾರಿಗಳ ಅನುಮತಿ ಪಡೆದುಕೊಂಡು ಮಹದೇಶ್ವರಬೆಟ್ಟದ ಅರಣ್ಯ ಪ್ರದೇಶಕ್ಕೆ ಬಿಡಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಪುಟ್ಟಸ್ವಾಮಿ ತಿಳಿಸಿದರು.

ಒಂದನೇ ಪುಟದಿಂದ

ಫೆಬ್ರವರಿಯಿಂದ ಖಾತಾ ನೀಡಿಕೆ

ಮೇಲ್ದರ್ಜೆಗೇರಿಸಲು ಈ ಹಿಂದೆ ಒತ್ತಾಯಿಸಿದ್ದೆ. 2021ರ ಏ.1ರಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿ, ಹೂಟಗಳ್ಳಿ ನಗರಸಭೆ, ಬೋಗಾದಿ, ರಮ್ಮನಹಳ್ಳಿ, ಶ್ರೀರಾಮಪುರ, ಕಡಕೊಳ ಪಟ್ಟಣ ಪಂಚಾಯಿತಿಯಾಗಿ ಘೋಷಿಸಿತು. ಆ.1ರಂದು ಈ ನಾಲ್ಕು ಹೊಸ ಸ್ಥಳೀಯ ಸಂಸ್ಥೆಗಳು ಕಾರ್ಯಾರಂಭ ಮಾಡಿದ್ದವು. ಆದರೆ, ಕೆಲವು ಆಡಳಿತಾತ್ಮಕ ತೊಡಕು ಎದುರಾದ ಹಿನ್ನೆಲೆಯಲ್ಲಿ ಈ 5 ಹೊಸ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬರುವ ಜನರು ತಮ್ಮ ಆಸ್ತಿಗಳ ಬಗ್ಗೆ ದಾಖಲೆ ಪಡೆಯಲು ಆಗದೆ ತೊಂದರೆ ಅನುಭವಿಸಿದ್ದರು. ಕಳೆದ ಒಂದು ವರ್ಷದಿಂದಲೂ ಈ ಹೊಸ ಸಂಸ್ಥೆಗಳಿಗೆ ಸೇರಿದ ಆಸ್ತಿಯನ್ನು ಮಾರಾಟ, ಪರಭಾರೆ ಮಾಡಲು, ಖಾತೆ ವರ್ಗಾವಣೆ, ಸಾಲ ಪಡೆಯಲು ಸಾಧ್ಯವಾಗದೆ ಜನರು ತೊಂದರೆಗೀಡಾಗಿದ್ದರು. ಇದರಿಂದ ಯಾಕಾದರೂ ಮೇಲ್ದರ್ಜೆಗೆ ಏರಿಸಲು ಪ್ರಯತ್ನ ಪಟ್ಟೆವೋ ಎಂದೆನಿಸಿತ್ತು. ಈ ಸಮಸ್ಯೆಯನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ, ಎದುರಾಗಿರುವ ಆಡಳಿತಾತ್ಮಕ ತೊಡಕು ನಿವಾರಿಸುವಂತೆ ಒತ್ತಾಯಿಸಿದ್ದೆ ಎಂದರು.

ಮನವಿಗೆ ಮನ್ನಣೆ: ನನ್ನ ಮನವಿ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಸಂಪುಟದ ಉಪಸಮಿತಿ ರಚಿಸಿ ಅದಕ್ಕೆ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಅವರನ್ನು ಅಧ್ಯಕ್ಷರಾಗಿ ನಿಯೋಜಿಸಿ, ಸಚಿವರಾದ ಎಂ.ಟಿ.ಬಿ. ನಾಗರಾಜ್, ಮಾಧುಸ್ವಾಮಿ, ಕೋಟಾ ಶ್ರೀನಿವಾಸ ಪೂಜಾರಿ, ನಗರಾಭಿವೃದ್ಧಿ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮಂಜುಶ್ರೀ ಅವರನ್ನು ಸದಸ್ಯರಾಗಿ ನಿಯೋಜಿಸಿದ್ದರು. ಇದೀಗ ಈ ಸಮಿತಿಯು ಪರಿಶೀಲನೆ ಮಾಡಿ ವರದಿ ನೀಡಿದ್ದು, ಚಾಮುಂಡೇಶ್ವರಿ ಕ್ಷೇತ್ರದ ಐದೂ ಹೊಸ ಸ್ಥಳೀಯ ಸಂಸ್ಥೆಗಳೂ ಒಳಗೊಂಡಂತೆ ರಾಜ್ಯದಲ್ಲಿರುವ 61 ನಗರಸಭೆ, 124 ಪುರಸಭೆ, 114 ಪಟ್ಟಣ ಪಂಚಾಯಿತಿಗಳಲ್ಲಿ ಆಸ್ತಿಗಳ ದಾಖಲೆಗಳ ಬಗ್ಗೆ ಇದ್ದ ತೊಡಕು ನಿವಾರಿಸುವುದರೊಂದಿಗೆ, ಅಧಿಕೃತಗೊಳಿಸಿ ದಾಖಲೆ ನೀಡಲು ಕ್ರಮಕೊಳ್ಳಲಾಗಿದೆ. ಇದಕ್ಕಾಗಿ 'ಇ–ಆಸ್ತಿ' ತಂತ್ರಾಂಶ ರೂಪಿಸಲು ಸರ್ಕಾರ ಸೂಚನೆ ನೀಡಿದೆ. ಫೆಬ್ರವರಿ ಮೊದಲ ವಾರದಿಂದ ಈ ಕಾರ್ಯಕ್ರಮ ಅನುಷ್ಠಾನಗೊಳ್ಳಲಿದೆ. ಈಗಾಗಲೇ ಎಲ್ಲಾ ಆಸ್ತಿಗಳ ದಾಖಲೆಗಳನ್ನು ಸಾಫ್ಟ್‌ವೇರ್‌ಗೆ ಅಳವಡಿಸುವ ಕಾರ್ಯವೂ ನಡೆಯುತ್ತಿದೆ ಎಂದು ತಿಳಿಸಿದರು.

ಹೊಸ ತಂತ್ರಾಂಶ ಅಭಿವೃದ್ಧಿ: ತಂತ್ರಾಂಶ ರೂಪಿಸಿದ ಮೇಲೆ ಖಾತೆ ನೀಡುವುದಕ್ಕೆ ಚಾಲನೆ ನೀಡಲಾಗುತ್ತದೆ. ನಗರ ಹಾಗೂ ಪಟ್ಟಣ ಪಂಚಾಯಿತಿಗೆ ಮೇಲ್ದರ್ಜೆಗೇರಿಸಲ್ಪಟ್ಟ ವ್ಯಾಪ್ತಿಯಲ್ಲಿರುವ ಆಸ್ತಿಗಳನ್ನು ಅಧಿಕೃತ, ಅನಧಿಕೃತ ಎಂದು ವಿಂಗಡಿಸಿ ಅವುಗಳಿಗೆ ನಮೂನೆ–3 ನೀಡಲು(ಖಾತೆ) ಆದೇಶದಲ್ಲಿ ತಿಳಿಸಲಾಗಿದೆ. ಇದರಿಂದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಂದಾಜು 103 ಬಡಾವಣೆ ಹಾಗೂ ಈ ವ್ಯಾಪ್ತಿಯಲ್ಲಿರುವ 53,853 ಅನಧಿಕೃತ ಆಸ್ತಿ ಮಾಲೀಕರುಗಳಿಗೆ ಅನುಕೂಲವಾಗಲಿದೆ. ಮಾತ್ರವಲ್ಲದೇ ಇದರಿಂದ ಕ್ರಯ, ವಿಕ್ರಯ ಮಾಡಲು, ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು, ಖಾತಾ ಬದಲಾವಣೆ, ಕಟ್ಟಡ ನಿರ್ಮಾಣ, ನಕ್ಷೆ ಅನುಮೋದನೆ ಮತ್ತು ಪರವಾನಿಗೆ ಪಡೆಯಲು ಸಹಕಾರಿಯಾಗಲಿದೆ.

ಮೇಲ್ದರ್ಜೆಗೇರಿಸುವ ಮುನ್ನ ಗ್ರಾಪಂಗಳಲ್ಲಿ ಕ್ರಮಬದ್ಧ ಆಸ್ತಿ (9, 11ಎ) ಕ್ರಮಬದ್ಧವಲ್ಲದ ಆಸ್ತಿ (9, 11ಬಿ) ಎಂದು ವರ್ಗೀಕರಿಸಿ ಖಾತೆ ವಿತರಿಸಲಾಗುತ್ತಿತ್ತು. ಆದರೆ ನಗರಸಭೆ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬಂದ ನಂತರ ಖಾತೆ ಮಾಡುವುದನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಇದೀಗ ಪ.ಪಂ ಹಾಗೂ ನಗರಸಭೆ ವ್ಯಾಪ್ತಿಯ ಭೂ ಪರಿವರ್ತನೆ ಅನುಮೋದನೆಯಾಗದೆ ಬಡಾವಣೆ ನಿರ್ಮಾಣ ಹಾಗೂ ಮೂಲ ಸೌಲಭ್ಯಗಳನ್ನು ಕಲ್ಪಿಸದ ರೆವಿನ್ಯೂ ಬಡಾವಣೆಯ ಆಸ್ತಿಗಳಿಗೆ (ನಮೂನೆ–3) ಖಾತೆ ಮಾಡಿಕೊಡಲಾಗುತ್ತದೆ ಎಂದು ಭರವಸೆ ನೀಡಿದರು. ಈ ಕಾರ್ಯಕ್ರಮ ಜಾರಿಗೆ ಬಂದ ನಂತರ ಅನಧಿಕೃತ ಆಸ್ತಿಗಳಿಗೆ ತೆರಿಗೆ, ಒಂದು ಪಟ್ಟು ದಂಡ ಪಾವತಿಸಿ ಭೂ ಪರಿವರ್ತನೆ ಮಾಡಿಸಿಕೊಂಡ ಬಳಿಕ ಅಧಿಕೃತ ದಾಖಲೆ ಅವರ ಕೈ ಸೇರಲಿದೆ.

ಹೊಸದಾಗಿ ಘೋಷಿಸಿರುವ ನಗರ ಸಭೆ, ಪಟ್ಟಣ ಪಂಚಾಯ್ತಿ ಸಭೆಯಲ್ಲಿನ ಪಟ್ಟಿ ಮಾಡಿರುವ ಅಧಿಕೃತ ಹಾಗೂ ಅನಧಿಕೃತ ಆಸ್ತಿಗಳ ಪಟ್ಟಿ ಹೀಗಿದೆ

ಅಧಿಕೃತ ಆಸ್ತಿಗಳು

- ಭೂ ಪರಿವರ್ತನೆಯಾಗಿ ಅನುಮೋದನೆಯಾಗಿರುವ ಬಡಾವಣೆಗಳು
- ಗ್ರಾಮ ಠಾಣಾ ಆಸ್ತಿಗಳು.
- ಸರ್ಕಾರದಿಂದ ಮಂಜೂರಾದ ಆಸ್ತಿಗಳು(ಮುಡಾ, ಮುಡಾದಿಂದ ಅನುಮೋದನೆಗೊಂಡ ಖಾಸಗಿ ಬಡಾವಣೆಗಳು, ಆಶ್ರಯ, ಕೆ.ಹೆಚ್.ಬಿ, ಕೊಳಚೆ ಮಂಡಳಿ)
- ಕೆಐಎಡಿಬಿ ವತಿಯಿಂದ ಅನುಮೋದನೆಗೊಂಡ ಬಡಾವಣೆಗಳು.

ಅನಧಿಕೃತ ಆಸ್ತಿಗಳು

- ಭೂ ಪರಿವರ್ತನೆಯಾದ ಆದರೆ ಸಕ್ಷಮ ಪ್ರಾಧಿಕಾರ(ಮುಡಾ ಅಥವಾ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ) ದಿಂದ ಅನುಮೋದನೆಯಾಗದ ಬಡಾವಣೆಯ ಆಸ್ತಿಗಳು.
- ಗ್ರಾಪಂಗಳು ಪೂರ್ಣ, ಭಾಗಶಃ ಮೇಲ್ದರ್ಜೆಗೇರಿಸಿ, ಪಂಚಾಯಿತಿಯಿಂದ ನಿರ್ವಹಿಸಿ, ಹಸ್ತಾಂತರಿಸಿದ ಆಸ್ತಿಗಳು.
- ಕಟ್ಟಡ ಕಟ್ಟಲು ಪರವಾನಗಿ, ರಹದಾರಿ ಪಡೆಯದೆ ನಿರ್ಮಿಸಿದ ಕಟ್ಟಡಗಳು.
- ಅಧಿಕೃತ ಆಸ್ತಿ ಮಾಲೀಕತ್ವ ಇಲ್ಲದ ನಿವೇಶನ, ಕಟ್ಟಡ

ಖಾತೆ ಮಾಡಿಸಿಕೊಳ್ಳಲು ಯಾರೂ ಏಜೆಂಟರ ಮೊರೆ ಹೋಗಬಾರದು. ನೇರವಾಗಿ ಅಧಿಕಾರಿಗಳನ್ನು ಸಂಪರ್ಕಿಸಿ, ಖಾತೆಗೆ ಅರ್ಜಿ ಸಲ್ಲಿಸಬಹುದು. ಮಧ್ಯವರ್ತಿಗಳ ಹಾವಳಿಯಿಂದ ಅಮಾಯಕರ ಶೋಷಣೆ ತಪ್ಪಿಸಲು ಈ ಹೊಸ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅದಾಲತ್ ಮಾಡಿ, ಖಾತೆ ಮಾಡಿಕೊಡುವ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ಆಧಾರ್ ಕಾರ್ಡ್ ಇದ್ದರೆ ಕುಡಿಯುವ ನೀರು ಪೂರೈಕೆ: ಮೈಸೂರು ನಗರಕ್ಕೆ ಹೊಂದಿಕೊಂಡಂತಿರುವ ಹಲವು ಗ್ರಾಮಗಳಿಗೆ ಕಬಿನಿಯಿಂದ ಶುದ್ಧ ಕುಡಿಯುವ ನೀರು ಪೂರೈಸಲು ಈ ಹಿಂದೆಯೇ ಉದ್ದೇಶಿಸಲಾಗಿತ್ತು. ಅದಕ್ಕಾಗಿ ಹಳೆ ಉಂಡುವಾಡಿ ಯೋಜನೆಯನ್ನೂ ಅನುಷ್ಠಾನಗೊಳಿಸಲಾಗಿತ್ತು. ಆದರೆ ಮತದಾರರ ಗುರುತಿನ ಚೀಟಿ ಸೇರಿದಂತೆ ಇನ್ನಿತರ ದಾಖಲೆ ಇದ್ದವರಿಗೆ ಮಾತ್ರ ಕುಡಿಯುವ ನೀರು ಸರಬರಾಜು ಮಾಡುವ ನಿರ್ಬಂಧ ಹೇರಲಾಗಿತ್ತು. ಇದರಿಂದ ದಾಖಲೆ ಹೊಂದಿಲ್ಲದವರಿಗೆ ನೀರು ಪೂರೈಸುತ್ತಿರಲಿಲ್ಲ. ಈಗ ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಆಧಾರ್ ಕಾರ್ಡ್ ಇದ್ದರೆ ನೀರಿನ ಸರಬರಾಜು ಮಾಡಲು ಸೂಚಿಸಲಾಗಿದೆ. ಇದರೊಂದಿಗೆ ನಿಗಧಿತ ಅರ್ಜಿ ಸಮೂನೆ ಭರ್ತಿ ಮಾಡಿಕೊಡುವಂತೆ ಸರ್ಕಾರ ನಿರ್ದೇಶಿಸಿದೆ ಎಂದರು.

203.53 ಕೋಟಿ ಬಿಡುಗಡೆ: ಚಾಮುಂಡೇಶ್ವರಿ ಕ್ಷೇತ್ರದ ಹೂಟಗಳ್ಳಿ ನಗರಸಭೆ, ಬೋಗಾದಿ, ರಮ್ಮನಹಳ್ಳಿ, ಶ್ರೀರಾಂಪುರ, ಕಡಕೊಳ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಈಗಾಗಲೇ 203,53 ಕೋಟಿ ರೂ. ಬಿಡುಗಡೆಯಾಗಿದೆ. ಅದರಲ್ಲಿ ಎಸ್‌ಎಫ್‌ಸಿ ಯೋಜನೆಯಲ್ಲಿ 909.5 ಕೋಟಿ ರೂ, 15ನೇ ಹಣಕಾಸು ಯೋಜನೆಯಲ್ಲಿ 944 ಕೋಟಿ ರೂ., ನಗರೋತ್ಥಾನ ಯೋಜನೆಯಡಿ 5000 ಕೋಟಿ ರೂ., ಅಮೃತ್ 2.0 ಯೋಜನೆಯಡಿ 135 ಕೋಟಿ ರೂ. ಸೇರಿದೆ ಎಂದು ತಿಳಿಸಿದರು.

550 ಮನೆ ಮಂಜೂರು: ಹೊಸದಾಗಿ ಉದಯಿಸಿದ ಐದು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ಸಾಮಾನ್ಯ ಜನರಿಗೆ 363 ಮನೆ, ಪರಿಶಿಷ್ಟ ಜಾತಿಗೆ 99, ಪರಿಶಿಷ್ಟ ಪಂಗಡಕ್ಕೆ 33, ಹಿಂದುಳಿದ ವರ್ಗಕ್ಕೆ 55 ಮನೆ ಸೇರಿದಂತೆ 550 ಮನೆ ಮಂಜೂರಾಗಿದೆ. ಈ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದ್ದು, ಮನೆಗಳು ನಿರ್ಮಾಣ ಕಾಮಗಾರಿ ಬಿರುಸಾಗಿ ನಡೆಯುತ್ತಿದೆ. ಸ್ವಚ್ಛತೆಗಾಗಿ ಕ್ರಮ ಕೈಗೊಳ್ಳಲಾಗಿದ್ದು, ಮನೆ ಮನೆ ಕಸ ಸಂಗ್ರಹಣೆಗಾಗಿ 39 ಆಟೋ ಟಿಪ್ಪರ್‌ಗಳು, 8 ಟ್ರ್ಯಾಕ್ಟರ್, 2 ಜೆಸಿಬಿ, 2 ಜಟ್ಟಿಂಗ್ ಯಂತ್ರಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಕನ್ನಡ ಅಕ್ಷರ ಜಾತ್ರೆಗೆ ಚಾಲನೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನಿಲ್ ಕುಮಾರ್ ಮಾತನಾಡಿ, ಹಾವೇರಿಗೆ ಆಗಮಿಸಿದ ಸಮ್ಮೇಳನಾಧ್ಯಕ್ಷರಿಗೆ ಜಿಲ್ಲಾಡಳಿತ ವತಿಯಿಂದ ಅದ್ದೂರಿ ಸ್ವಾಗತ ನೀಡಲಾಗಿದೆ. ಸಮ್ಮೇಳನ ಯಾವುದೇ ಗೊಂದಲಗಳಿಲ್ಲದೆ ಸುಗಮವಾಗಿ ನಡೆಯಲಿ ಎಂದು ನಿಗದಿತ ಸಮಯಕ್ಕೆ ಧ್ವಜಾರೋಹಣ ಮಾಡಿದ್ದೇವೆ. ಕನ್ನಡ ನಾಡು ನುಡಿ ಭಾಷೆ ಬಗ್ಗೆ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ಉತ್ತಮ ಚರ್ಚೆ ನಡೆಯಲಿದೆ. ಸಮ್ಮೇಳನದಲ್ಲಿ ಯಾವುದೇ ಅಭಾಸ, ಕುಂದುಕೊರತೆಯಾಗದಂತೆ ಸರ್ಕಾರ ಮತ್ತು ಜಿಲ್ಲಾಡಳಿತ ಎಚ್ಚರಿಕೆಯಿಂದ ಕೆಲಸ ಮಾಡಿದೆ. ಕನ್ನಡವೇ ಸತ್ಯ–ಕನ್ನಡವೇ ನಿತ್ಯ ಎಂಬ ಘೋಷಣೆಯನ್ನು ಜಾರಿಗೆ ತರಲು ಸರ್ಕಾರ ಸರ್ವರೀತಿಯಲ್ಲಿ ಪ್ರಯತ್ನ ಮಾಡುತ್ತಿದೆ. ಈ ಸಾಹಿತ್ಯ ಸಮ್ಮೇಳನದಲ್ಲಿ ಯುವ ಪ್ರತಿಭೆಗಳಿಗೆ ಅವಕಾಶ ನೀಡಲಾಗುವುದು. ನಾಡು ನುಡಿಯ ವಿಚಾರದಲ್ಲಿ ಭಿನ್ನತೆ ಮರೆತು ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು ಎಂದರು.

ಇನ್ನು, 86ನೇ ಸಮ್ಮೇಳನಕ್ಕೆ ಸಾಂಕೇತಿಕವಾಗಿ 86 ಪುಸ್ತಕಗಳನ್ನು ಇಂಧನ ಖಾತೆ ಸಚಿವ ವಿ. ಸುನಿಲ್ ಕುಮಾರ್ ಬಿಡುಗಡೆಗೊಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿ 49 ಪುಸ್ತಕಗಳನ್ನು ಪ್ರಕಟಿಸಿದರೆ, 37 ಪುಸ್ತಕಗಳನ್ನು ಪರಿಷತ್ತಿನ ಹಾವೇರಿ ಜಿಲ್ಲಾ ಘಟಕ ಮುದ್ರಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಶೇಷ ಅಂಚೆ ಲಕೋಟೆ ಲೋಕಾರ್ಪಣೆಗೊಳಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ, ?ಕನ್ನಡದ ಕೆಚ್ಚು ಹೆಚ್ಚಿಸಲು, ಕನ್ನಡ ಭಾಷೆ ಬೆಳವಣಿಗೆಗೆ ನುಡಿಹಬ್ಬಗಳು ಪೂರಕ. ಭಾಷೆ ಅನ್ನ ನೀಡಬೇಕು. ಕನ್ನಡ ಮನಸ್ಸುಗಳೆಲ್ಲ ಒಂದಾಗಬೇಕು. ಅಡುಗೆ ಮನೆಗೆ ಅನ್ಯ ಭಾಷೆ ಪ್ರವೇಶಿಸಿದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳ ಮೂಲಕ ಕನ್ನಡ ನುಡಿ ಸಂಸ್ಕೃತಿ ಸಂರಕ್ಷಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ರಾಜ್ಯದಲ್ಲಿ ಕನ್ನಡ ಶಾಲೆಗಳು ಮುಚ್ಚದ ಹಾಗೆ ರಾಜ್ಯ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸುತ್ತದೆ ಎಂಬ ನಂಬಿಕೆ ಇದೆ. ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿ, ಭಾಷಾ ಶಾಸ್ತ್ರೀಯ ಯೋಜನೆಗೆ ಸಂಬಂಧಿಸಿ ನಿಯಮಗಳನ್ನು ರೂಪಿಸಿ ಕನ್ನಡವನ್ನು ಇನ್ನಷ್ಟು ಬಲವರ್ಧನೆಗೊಳಿಸಬೇಕಿದೆ. ಕನ್ನಡ ಸಮ್ಮೇಳನಗಳು ಕನ್ನಡಿಗರ ಅಸ್ಮಿತೆಯ ಹಬ್ಬ. ಸಾಮರಸ್ಯದ ಭಾವ, ಕನ್ನಡದ ಜೀವ ಧ್ಯೇಯವಾಗಿಟ್ಟುಕೊಂಡು ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಉದ್ದೇಶ ವಿವರಿಸಿದರು.

ಸಮ್ಮೇಳನದ ವಿಶೇಷ ಅಂಚೆ ಲಕೋಟೆ ಬಿಡುಗಡೆಗೊಳಿಸಿ ಮಾತನಾಡಿದ ಮಾಜಿಮುಖ್ಯಮಂತ್ರಿ, ಶಾಸಕ ಬಿ.ಎಸ್. ಯಡಿಯೂರಪ್ಪ, ನಗರ ಪ್ರದೇಶಗಳಲ್ಲಿ ಕನ್ನಡ ಭಾಷೆ ಮಾತನಾಡಲು ಹಿಂಜರಿಯುತ್ತಿರುವುದು ಆತಂಕದ ವಿಷಯ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಇಂಗ್ಲಿಷ್ ಭಾಷೆಯ ಜ್ಞಾನದ ಅಗತ್ಯವಾಗಿದ್ದರೂ ಕನ್ನಡ ಉಳಿಸಬೇಕಿದೆ. ಕನ್ನಡ ನಾಡು, ನುಡಿ, ಜಲ ಉಳಿಸಲು ಸರ್ಕಾರ ಬದ್ಧವಾಗಿದೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಈಗಾಗಲೇ ಕನ್ನಡ ವಿಧೇಯಕ ಮಂಡಿಸಲಾಗಿದೆ. ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲಾಗಿದೆ ಎಂದು ತಿಳಿಸಿದರು.

ಇಂದು ಶಿಕ್ಷಣ ಇದೆ. ಆದರೆ, ಸಂಸ್ಕಾರ ಇಲ್ಲದಂತಾಗಿದೆ. ಅದಕ್ಕೆ ಅವಕಾಶ ಸಿಗಬಾರದು. ನುಡಿಯನ್ನು ಬಹುತ್ವದ ನೆಲೆಯಲ್ಲಿ ನೋಡಬೇಕಿದೆ. ಕನ್ನಡ ನಾಡು ಒಂದು ಪ್ರದೇಶವಲ್ಲ. ಅದೊಂದು ಸಂಸ್ಕೃತಿ, ಪರಂಪರೆ. ಕನ್ನಡದ ಶ್ರೀಮಂತ ಪರಂಪರೆಗೆ ವಿದೇಶಿಯರು ಮಾರು ಹೋಗಿದ್ದಾರೆ. ಮನೆಯಲ್ಲಿ ನಿಮ್ಮ ಭಾಷೆ, ಹೊರಗೆ ಕನ್ನಡ ಮಾತಾಡಿ ಎಂಬ ಹೇಳುವ ವಿಶಾಲ ಮನೋಭಾವದವರು ಕನ್ನಡಿಗರು ಎಂದರು.

ಸಿದ್ದೇಶ್ವರ ಸ್ವಾಮೀಜಿಗೆ ಶ್ರದ್ಧಾಂಜಲಿ: ಶುಕ್ರವಾರ ಆರಂಭಗೊಂಡ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅನೇಕ ಘಟನೆಗಳಿಗೆ ಸಾಕ್ಷಿಯಾಯಿತು. ಉದ್ಘಾಟನಾ ಸಮಾರಂಭದ ಆರಂಭದಲ್ಲಿ ಇತ್ತೀಚೆಗೆ ಇಹಲೋಕ ತ್ಯಜಿಸಿದ ವಿಜಯಪುರ ಜ್ಞಾನ ಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ಅವರ ಸ್ಮರಣಾರ್ಥ ಎರಡು ನಿಮಿಷ ಮೌನ ಆಚರಿಸಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು. ವೇದಿಕೆಯ ಮುಂಭಾಗದಲ್ಲಿ ಅವರ ಭಾವಚಿತ್ರ ಇರಿಸಲಾಗಿತ್ತು.

ಶಕ್ತಿ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ: ಸಿಎಂ

ಮಾತನಾಡಿದ ಸಿಎಂ ಬೊಮ್ಮಾಯಿ, ಕನ್ನಡ ಅತ್ಯಂತ ಶ್ರೀಮಂತ ಭಾಷೆಯಾಗಿದ್ದು, ಇದಕ್ಕೆ ಆಪತ್ತು ತರುವ ಯಾವುದೇ ಶಕ್ತಿ ವಿಶ್ವದಲ್ಲಿ ಇನ್ನೂ ಹುಟ್ಟಿಲ್ಲ ಮತ್ತು ಹುಟ್ಟುವುದೂ ಇಲ್ಲ ಎಂದು ಹೇಳಿದರು. ಇಡೀ ದೇಶದಲ್ಲಿ ಕನ್ನಡಕ್ಕೆ ಮಾತ್ರ ಎಂಟು ಜ್ಞಾನಪೀಠ ಪ್ರಶಸ್ತಿಗಳು ದೊರೆತಿವೆ. ದೇಶದ ಬೇರೆ ಯಾವ ಭಾಷೆಗೂ ಸಹ ಇಷ್ಟು ಜ್ಞಾನಪೀಠ ಪ್ರಶಸ್ತಿಗಳು ದೊರೆತಿಲ್ಲ. ಒಂದು ಭಾಷೆ ಒಂದು ಸಂಸ್ಕೃತಿ ಬೆಳೆಯಬೇಕೆಂದರೇ ಇದುವರೆಗೆ ನಡೆದ ಬಂದ ದಾರಿಯ ಸಿಂಹಾವಲೋಕನ ಮಾಡಬೇಕಾಗುತ್ತದೆ. ಆಗ ಅದು ಮುಂದಿನ ದಾರಿಯನ್ನು ನಿರ್ಧರಿಸುತ್ತದೆ ಎಂದರು. ಇಬ್ಬರು ಸರಸ್ವತಿ ಸಮ್ಮಾನ್ ಪುರಸ್ಕೃತರು ಸಹ ನಮ್ಮ ಕನ್ನಡ ನಾಡಿನಲ್ಲಿರುವುದು ವಿಶೇಷವಾಗಿದೆ ಎಂದು ಸಿಎಂ ಬೊಮ್ಮಾಯಿ ಹೇಳಿದರು. ಕನ್ನಡ ಇಡೀ ಜಗತ್ತಿನಲ್ಲಿಅತ್ಯಂತ ಪ್ರಾಚೀನ ಭಾಷೆ. ಇದರರ್ಥ ಕನ್ನಡಿಗರ ಬದುಕು ಪುರಾತನ ಹಾಗೂ ಶ್ರೇಷ್ಠ. ಜಗತ್ತಿನಲ್ಲಿ ಕನ್ನಡ ಸಂಸ್ಕೃತಿ ಅತ್ಯಂತ ಪವಿತ್ರ ಮತ್ತು ಪುರಾತನ. ಇಂಥ ಕನ್ನಡದ ಕಂಪು ಭಾರತದಲ್ಲಿ ಮತ್ತೆ ಹೆಮ್ಮರವಾಗಿ ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಕುರ್ಚಿ ಬಿಡಲು ಸಿದ್ಧನಿಲ್ಲ

ತೆಗೆದುಕೊಂಡ ತೀರ್ಮಾನಗಳನ್ನೇ ನಮ್ಮ ಮೇಲೆ ಹೇರಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರುತ್ತಿದ್ದಾರೆ. ಇದರ ನಡುವೆ ಶಿವಕುಮಾರ್ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಬೆಂಬಲಿಗರಿಗೆ ಹೆಚ್ಚಿನ ಟಿಕೆಟ್ ನೀಡಿ ಅವರನ್ನು ವಿಧಾನಸಭೆಗೆ ಗೆಲ್ಲಿಸಿಕೊಂಡು ಬಂದು ನಂತರ ಆಟ ಆಡೋಣ ಎಂಬ ಲೆಕ್ಕಾಚಾರಕ್ಕೆ ಬಂದಿದ್ದಾರೆ. ತಾವು ನಡೆಸಿರುವ ಚುನಾವಣಾ ಪೂರ್ವ ಸಮೀಕ್ಷಾ ವರದಿಗಳನ್ನೇ ಮುಂದಿಟ್ಟುಕೊಂಡು ತಮ್ಮದೇ ಆದ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ನೆಪಮಾತ್ರಕ್ಕೆ ಅಭ್ಯರ್ಥಿಗಳ ಆಯ್ಕೆಗೆ ಚುನಾವಣಾ ಸಮಿತಿ ಎಂದಿದ್ದರಾದರೂ ಅಂತಿಮವಾಗಿ ವರಿಷ್ಠರ ಮೇಲೆ ಒತ್ತಡ ತಂದು ತಮ್ಮ ಪಟ್ಟಿಯಲ್ಲಿರುವ ಹೆಚ್ಚು ಮಂದಿಗೆ ಟಿಕೆಟ್ ಕೊಡಿಸಲು ಲೆಕ್ಕಾಚಾರ ಹಾಕಿದ್ದಾರೆ. ಹೀಗಾಗಿ ವರಿಷ್ಠರು ಪದೆ ಪದೇ ಮಾತುಕತೆ ನಡೆಸಿ ಉಭಯ ನಾಯಕರು ಒಗ್ಗಟ್ಟಿನಿಂದ ಚುನಾವಣೆ ಎದುರಿಸಬೇಕು ಎಂದು ಸೂಚನೆ ನೀಡುತ್ತಿದ್ದರೂ, ಅವರ ತಾಕೀತು ಕಾರ್ಯರೂಪಕ್ಕೆ ಬರುತ್ತಿಲ್ಲ. ನಾನೊಂದು ತೀರಾ, ನೀನೊಂದು ತೀರ ಎಂಬ ಪರಿಸ್ಥಿತಿ ಕಾಂಗ್ರೆಸ್‌ನಲ್ಲಿ ನಿರ್ಮಾಣವಾಗಿದೆ. ಉಭಯ ನಾಯಕರ ಬೆಂಬಲಿಗರು ಪ್ರತಿಷ್ಠೆಯಾಗಿ ಪರಿಗಣಿಸಿದ್ದು, ತಮ್ಮ ತಮ್ಮ ನಾಯಕರನ್ನು ಮುಖ್ಯಮಂತ್ರಿ ಗಾದಿಯಲ್ಲಿ ನೋಡಲು ಹವಣಿಸುತ್ತಿದ್ದಾರೆ. ಅದಕ್ಕೆ ಬೇಕಾದ ಎಲ್ಲ ರೀತಿಯ ತಂತ್ರ ಹಾಗೂ ಸಿದ್ಧತೆಗಳನ್ನು ಮಾಡುತ್ತಿದ್ದಾರೆ.

ವರ್ಷಪೂರ್ತಿ ಸ್ವದೇಶಿ ವಸ್ತುಗಳ ಮಾರಾಟ

ಅಧಿಕೃತ ಆದೇಶ ಬಂದ ನಂತರ ದೊಡ್ಡಕೆರೆ ಮೈದಾನದಲ್ಲಿರುವ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ವರ್ಷದ 365 ದಿನವೂ ಸ್ಥಳೀಯ ಉತ್ಪನ್ನಗಳ ಮಾರಾಟ ವ್ಯವಸ್ಥೆಗೆ ಡಿಪಿಆರ್ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆದು ಕೊಂಡು ವರ್ಷ ಪೂರ್ತಿ ದಸರಾ ವಸ್ತುಪ್ರದರ್ಶನ ತೆರೆದು ಮಾರಾಟ ವಹಿವಾಟು ನಿರಂತರವಾಗಿ ನಡೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದರು ನುಡಿದರು. ಇಲ್ಲಿನ ಗುಡಿಗಾರಿಕೆ, ಕುಶಲ ವಸ್ತು, ಚನ್ನಪಟ್ಟಣದ ಬೊಂಬೆಗಳು, ಸುತ್ತಲಿನ ಸಣ್ಣ ಉದ್ಯಮಗಳಲ್ಲಿ ತಯಾರಿಸಿದ ಉತ್ಪನ್ನಗಳು, ಮೈಸೂರು ಸಿಲ್ಕ್ ಸೀರೆ ಮುಂತಾದವುಗಳು ಪ್ರವಾಸಿಗರಿಗೆ ಸಿಗುವಂತೆ ಮಾಡಿ ಕೇವಲ ದಸರಾ ಸಂದರ್ಭದಲ್ಲಷ್ಟೇ ಚಟುವಟಿಕೆಗೆ ಸೀಮಿತವಾಗಿದ್ದ ಮೈಸೂರು ದಸರಾ ವಸ್ತುಪ್ರದರ್ಶನ ವರ್ಷಪೂರ್ತಿ ನಡೆಯುವಂತೆ ಯೋಜನೆ ರೂಪಿಸಲಾಗು ವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಪ್ರಸಾದ ಯೋಜನೆ: ಪ್ರಸಾದ ಯೋಜನೆ ಯಡಿ ಮೈಸೂರು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು 49.29 ಕೋಟಿ ರೂ. ಅನುದಾನವನ್ನು ಇನ್ನೆರಡು ದಿನಗಳಲ್ಲಿ ಬಿಡುಗಡೆ ಮಾಡಲಿದೆ. ಅದರಡಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅಗತ್ಯ ಮೂಲ ಸೌಲಭ್ಯ ಕಲ್ಪಿಸುವ ಕಾಮಗಾರಿ ಕೈಗೊಳ್ಳಲಾಗುವುದು. ವಿಶ್ರಾಂತಿ ಗೃಹ, ಶುದ್ಧ ಕುಡಿಯುವ ನೀರು, ಮಾಹಿತಿ ಕೇಂದ್ರ ಸೇರಿದಂತೆ ಹಲವು ಸೌಕರ್ಯಗಳನ್ನು ಪ್ರಸಾದ ಯೋಜನೆ ಯಡಿ ಒದಗಿಸಲು ಮುಜರಾಯಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಪ್ರತಾಪ ಸಿಂಹ ನುಡಿದರು.

ಅದೇ ರೀತಿ ಮೈಸೂರು ಸುತ್ತಮುತ್ತಲ ದೇವಸ್ಥಾನಗಳನ್ನೂ ಅಭಿವೃದ್ಧಿಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ. ಆ ಮೂಲಕ ದೇಶ–ವಿದೇಶಗಳ ಪ್ರವಾಸಿಗರನ್ನು ಮೈಸೂರಿನತ್ತ ಸೆಳೆಯುವುದು ನಮ್ಮ ಸರ್ಕಾರದ ಆದ್ಯತೆ ಯಾಗಿದೆ ಎಂದು ಸಂಸದರು ತಿಳಿಸಿದರು.

ಕಾವೇರಿ ಎಕ್ಸ್‌ಪ್ರೆಸ್ ವೇ ಹೆಸರೇ ಸೂಕ್ತ

ಕೇಂದ್ರ ಭೂ ಸಾರಿಗೆ ಸಚಿವರಿಗೂ ಮನವಿ ಮಾಡಿದ್ದೇನೆ ಎಂದರು. ಉತ್ತರ ಭಾರತದ ಹಲವು ರಾಜ್ಯಗಳಲ್ಲಿಯೂ ಹೆದ್ದಾರಿಗಳಿಗೆ ಗಂಗಾ ಯಮುನಾ, ಸರಸ್ವತಿಯಂತಹ ಪವಿತ್ರ ಜೀವನದಿಗಳ ಹೆಸರುಗಳನ್ನು ನಾಮಕರಣ ಮಾಡಲಾಗಿದೆ. ಹೆದ್ದಾರಿಗಳಿಗೆ ವ್ಯಕ್ತಿಗಳ ಹೆಸರಿಡುವ ಪದ್ಧತಿ ನಮ್ಮಲ್ಲಿಲ್ಲ. ಆದರೆ ಪವಿತ್ರ ನದಿಗಳ ಹೆಸರಿಡಬಹುದಾಗಿದೆ ಎಂದು ಅವರು ತಿಳಿಸಿದರು. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ದಶಪಥ ಹೆದ್ದಾರಿಗೆ ಕೃಷ್ಣರಾಜ ಒಡೆಯರ್ ಹೆಸರಿಡಬೇಕೆಂಬ ಅವರ ಅಭಿಪ್ರಾಯವನ್ನು ನಾನು ಅಲ್ಲಗಳೆಯುತ್ತಿಲ್ಲ. ರಾಜ ಮನೆತನದವರ ಬಗ್ಗೆ ನನಗೆ ಅಪಾರ ಪ್ರೀತಿ ಇರುವುದರಿಂದಲೇ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ನಾಲ್ವಡಿಯವರ ಹೆಸರಿಡಲು ನಾನೇ ಒತ್ತಾಯಿಸಿದ್ದೆ ಎಂದರು. ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಒಡೆಯರ್ ಎಕ್ಸ್‌ಪ್ರೆಸ್ ಎಂದು ಬದಲಾಯಿಸಿದ್ದು, ಮೈಸೂರು ರೈಲು ನಿಲ್ದಾಣಕ್ಕೂ ರಾಜವಂಶಸ್ಥರ ಹೆಸರಿಸಬೇಕೆಂದು ಮನವಿ ಮಾಡಿದ್ದೇನೆ. ಕಾವೇರಿ ಮಾತೆಯೊಂದಿಗೆ ಭಾವನಾತ್ಮಕ ಸಂಬಂಧವಿರುವುದರಿಂದ ಹಾಗೂ ಇಲ್ಲಿನ ಜನರು ಪವಿತ್ರ ನದಿಯ ಅನುಕೂಲ ಪಡೆಯುತ್ತಿರುವುದರಿಂದ ಕಾವೇರಿ ಎಕ್ಸ್‌ಪ್ರೆಸ್ ವೇ ಎಂದು ನಾಮಕರಣ ಮಾಡಬೇಕೆಂದು ಮನವಿ ಮಾಡಿದ್ದೇನೆ ಎಂದು ಪ್ರತಾಪ್ ಸಿಂಹ ನುಡಿದರು. ಫೆಬ್ರವರಿ ಅಂತ್ಯದೊಳಗಾಗಿ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತ ಗೊಳಿಸಬೇಕೆಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಸೂಚನೆ ನೀಡಿದ್ದಾರೆ. ಕಾಮಗಾರಿ ಮುಗಿಸಿ ಮಾರ್ಚ್ ತಿಂಗಳಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆ ಮಾಡಿಸಲಾಗುವುದು ಎಂದು ಸಂಸದರು ನುಡಿದರು.

ಮೈಸೂರಲ್ಲಿ ಮತ್ತೆ ನಾಲ್ವರು ರೌಡಿಗಳ ಗಡಿಪಾರು



ಮೈಸೂರು, ಜ.6–(ಆರ್‌ಕೆ)– ಗೂಂಡಾ ವರ್ತನೆ ಪ್ರದರ್ಶಿಸುವ ಮೂಲಕ ಸಾರ್ವಜನಿಕರಲ್ಲಿ ಭಯ ಉಂಟು ಮಾಡಿ ಸಮಾಜದ ಶಾಂತಿ ಕದಡುತ್ತಿದ್ದ ಮೈಸೂರಿನ ನಾಲ್ವರು ರೌಡಿಗಳನ್ನು ಮುಂದಿನ 6 ತಿಂಗಳವರೆಗೆ ಬೇರೆ ಜಿಲ್ಲೆಗಳಿಗೆ ಗಡಿ ಪಾರು ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮೈಸೂರಿನ ಯರಗನಹಳ್ಳಿ ನಿವಾಸಿ ಲೇಟ್ ಸಿದ್ದರಾಮು ಮಗ ಸತೀಶ್, ವೀರನಗೆರೆಯ ಶಿವಕುಮಾರ್ ಮಗ ಮಧು ಸೂದನ್ ಅಲಿಯಾಸ್ ಮಧು, ಇಟ್ಟಿಗೆ ಗೂಡಿನ ಮಂಜುನಾಥ್ ಅಲಿಯಾಸ್ ಗೆಂಡೆ ಮಂಜ ಹಾಗೂ ಮಹದೇವಪುರ ನಿವಾಸಿ ಲೇಟ್ ಮಂಜನ ಮಗ ಕುಮಾರ ಅಲಿಯಾಸ್ ಕವೇಲಿ ಗಡಿಪಾರಾಗಿರುವ ರೌಡಿ ಆಸಾಮಿಗಳು. ಸತೀಶ್‌ನನ್ನು ಚಾಮರಾಜನಗರಕ್ಕೆ, ಮಧುಸೂದನ್‌ನನ್ನು ಹಾಸನಕ್ಕೆ, ಮಂಜುನಾಥ್‌ನನ್ನು ಕೊಡಗು ಜಿಲ್ಲೆ ಹಾಗೂ ಕುಮಾರನನ್ನು ಚಿತ್ರದುರ್ಗ ಜಿಲ್ಲೆಗೆ ಗಡಿಪಾರು ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಸತೀಶ್ ವಿರುದ್ಧ ಆಲನಹಳ್ಳಿ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿದ್ದು, ಆತ 6 ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ. ರೌಡಿಶೀಟರ್ ಆಗಿದ್ದರೂ ಪೊಲೀಸರ ಕಣ್ಣು ತಪ್ಪಿಸಿ ದರೋಡೆ, ಸುಲಿಗೆ, ಮಾರಣಾಂತಿಕ ಹಲ್ಲೆ, ಹೊಡೆದಾಟದಂತಹ ಕೃತ್ಯಗಳಲ್ಲಿ ಭಾಗಿಯಾಗಿ ರೌಡಿ ಪ್ರವೃತ್ತಿ ಮುಂದುವರಿಸಿದ್ದಾನೆ.



ಮಧು ಸೂದನ್



ಮಂಜುನಾಥ್



ಸತೀಶ್

ಆ ಮೂಲಕ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿ ಸಮಾಜದ ಶಾಂತಿ ಕದಡಿ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗು ತ್ತಿದ್ದಾನೆ. ತನ್ನ ವಿರುದ್ಧ ದಾಖಲಾಗಿರುವ ಪ್ರಕರಣಗಳ ಸಾಕ್ಷಿದಾರರಿಗೆ ಬೆದರಿಸಿ ಭಯ ಹುಟ್ಟಿಸುವುದಲ್ಲದೆ, ಗೂಂಡಾ ವರ್ತನೆ ಪ್ರದರ್ಶಿಸುತ್ತಿದ್ದರಿಂದ ಸಾರ್ವ ಜನಿಕರ ಆಸ್ತಿ– ಪ್ರಾಣಕ್ಕೆ ಹಾನಿ ಮಾಡುವ ಸಂಭವವಿದೆ ಎಂದು ತಿಳಿದು ಬಂದ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತದೃಷ್ಟಿ ಯಿಂದ ಸತೀಶನನ್ನು 6 ತಿಂಗಳವರೆಗೆ ಗಡಿಪಾರು ಮಾಡಲಾಗಿದೆ. ಅದೇ ರೀತಿ ಮಧುಸೂದನ್, ಮಂಜುನಾಥ್ ಹಾಗೂ ಕುಮಾರ ಎಂಬುವರೂ ಸಹ ಲಷ್ಕರ್, ನಜರ್‌ಬಾದ್, ವಿದ್ಯಾ ರಣ್ಯಪುರಂ ಹಾಗೂ ಇನ್ನಿತರ ಠಾಣೆ ವ್ಯಾಪ್ತಿಗಳಲ್ಲಿ ರೌಡಿ ಚಟುವಟಿಕೆಗಳಲ್ಲಿ ತೊಡಗಿದ್ದರೂ, ತಮ್ಮ ದುರ್ವರ್ತನೆ ಮೂಲಕ ಸಾರ್ವಜನಿಕರನ್ನು ಬೆದರಿಸಿ ಭಯದ ವಾತಾವರಣ, ಸಮಾಜದ ಶಾಂತಿ ಹಾಳು ಮಾಡುತ್ತಿದ್ದರಿಂದ ಅವರನ್ನು ಗಡಿಪಾರು ಮಾಡಲಾಗಿದೆ ಎಂದು ಪೊಲೀಸ್ ಆಯುಕ್ತ ತಿಳಿಸಿದ್ದಾರೆ.

ಕಳೆದ 15 ದಿನಗಳ ಹಿಂದಷ್ಟೇ ಮೈಸೂರು ನಗರದಲ್ಲಿ 3 ರೌಡಿ ಆಸಾಮಿಗಳನ್ನು ಗಡಿಪಾರು ಮಾಡಲಾಗಿದ್ದು, ಇದರೊಂದಿಗೆ ಗಡಿಪಾರಾದವರ ಸಂಖ್ಯೆ 7ಕ್ಕೇರಿದೆ. ಸಕ್ರಿಯವಾಗಿ ರೌಡಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ತಿಳಿದು ಬಂದಲ್ಲಿ ಬೇರೆ ರೌಡಿಗಳಿಗೂ ಇದೇ ಮಾದರಿ ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಸಹಕಾರ ಕ್ಯಾಲೆಂಡರ್, ಡೈರಿ ಬಿಡುಗಡೆ...



ಗುರುವಾರದಂದು ಬೆಂಗಳೂರಿನ ಪದ್ಮನಾಭನಗರದ ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ. ದೇವೇಗೌಡರ ನಿವಾಸಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಭೇಟಿ ನೀಡಿ, ಮಾಜಿ ಪ್ರಧಾನಿ ದೇವೇಗೌಡರೊಂದಿಗೆ ಗಹನವಾದ ಚರ್ಚೆ ನಡೆಸಿದರು. ಈ ವೇಳೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಉಪಸ್ಥಿತರಿದ್ದರು. ಇದೇ ವೇಳೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಮಹಾಮಂಡಳದ ನಡಿಗೆ ಸಹಕಾರ ಸಂಘಗಳ ಕಡೆಗೆ ಘೋಷಣೆಯೊಂದಿಗೆ ರಾಜ್ಯದ ಪ್ರತಿಯೊಂದು ಸಹಕಾರ ಸಂಸ್ಥೆಗೂ ಕ್ಯಾಲೆಂಡರ್, ಡೈರಿ ಹಾಗೂ ಸಹಕಾರ ವಾರ ಪತ್ರಿಕೆ ತಲುಪಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಡೈರಿ, ಕ್ಯಾಲೆಂಡರ್, ಸಹಕಾರ ವಾರಪತ್ರಿಕೆಯನ್ನು ಮಾಜಿ ಪ್ರಧಾನಿ ದೇವೇಗೌಡರು, ಪ್ರಕಾಶ್ ಅಂಬೇಡ್ಕರ್, ಹೆಚ್.ಡಿ.ಕುಮಾರಸ್ವಾಮಿ ಬಿಡುಗಡೆ ಮಾಡಿದರು.

ಮೈಸೂರಿನ ಜೆಪಿ ನಗರದಲ್ಲಿ ಮಹಾಲಕ್ಷ್ಮಿ ಸ್ವೀಟ್ಸ್‌ನ 37ನೇ ಮಳಿಗೆ ಉದ್ಘಾಟನೆ





ಪ್ರಸಿದ್ಧ ಸ್ವೀಟ್ಸ್ ಮಾರಾಟ ಮಳಿಗೆ ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್‌ನ 37ನೇ ಮಳಿಗೆ ಇತ್ತೀಚೆಗೆ ಮೈಸೂರಿನ ಜೆಪಿ ನಗರದ 10ನೇ ಮೇನ್ (ಗೊಬ್ಬಳಿ ಮರದ ಬಳಿ)ನಲ್ಲಿ ಉದ್ಘಾಟನೆಯಾಯಿತು. ಮಹಾಲಕ್ಷ್ಮಿ ಸ್ವೀಟ್ಸ್ ಅಧ್ಯಕ್ಷ ಶಿವಕುಮಾರ್ ಸಾಂಪ್ರದಾಯಿಕ ಪೂಜೆ ಸಲ್ಲಿಸುವ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರೊಂದಿಗೆ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಶಿವಕುಮಾರ್ ಉಪಸ್ಥಿತರಿದ್ದರು. ಮೈಸೂರಿನ ವಿವಿಧ ಬಡಾವಣೆಗಳಲ್ಲದೆ, ಬೆಂಗಳೂರು, ಕೊಡಗು, ಚಾಮರಾಜನಗರ, ಹಾಸನದಲ್ಲೂ ಮಹಾಲಕ್ಷ್ಮಿ ಸ್ವೀಟ್ಸ್ ಮಳಿಗೆಗಳಿವೆ.

ವಿಧಾನಸೌಧದಲ್ಲಿ ಸಿಕ್ಕ ಹಣಕ್ಕೂ ನನಗೂ ಸಂಬಂಧ ಇಲ್ಲ



ಬೆಂಗಳೂರು, ಜ.6(ಕೆಎಂಶಿ)– ವಿಧಾನ ಸೌಧದಲ್ಲಿ ಪೊಲೀಸರು ವಶಪಡಿಸಿಕೊಂಡಿರುವ ಹಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಂಡ್ಯ ಜಿಲ್ಲೆಯ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಒಬ್ಬರು ಬುಧವಾರ ಸಂಜೆ 10.50 ಲಕ್ಷ ರೂ.ಗಳನ್ನು ವಿಧಾನಸೌಧಕ್ಕೆ ತಂದಿದ್ದು, ಆ ಅಧಿಕಾರಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಇದರ ಬೆನ್ನಲ್ಲೇ ತುರ್ತು ಪತ್ರಿಕಾಗೋಷ್ಠಿ ಕರೆದು ಮಾತನಾಡಿದ ಸಿ.ಸಿ.ಪಾಟೀಲ್, ಆತ ಯಾವ ಉದ್ದೇಶಕ್ಕೆ ಹಣ ತಂದ ಎನ್ನುವ ಬಗ್ಗೆ ತನಿಖೆ ನಡೆಯು ತ್ತಿದೆ. ತನಿಖಾ ವರದಿ ಬಂದ ನಂತರ ಆತನ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾ ಗುವುದು. ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ರಾಜಕೀಯ ವಾಗಿ ನನ್ನ ಮತ್ತು ಮುಖ್ಯಮಂತ್ರಿಯವರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದರು. ನಾನು ಹಣ ಪಡೆಯಲೇಬೇಕೆಂದಿದ್ದರೆ ವಿಧಾನಸೌಧಕ್ಕೆ ತರಿಸಿಕೊಂಡು ಪಡೆಯುತ್ತಿದ್ದೇನೆ ಎಂದು ಮರುಪ್ರಶ್ನೆ ಹಾಕಿದ್ದಾರೆ. ಇದೆಲ್ಲ ಚುನಾವಣಾ ರಾಜಕೀಯ. ತನಿಖೆಯ ನಂತರ ಸತ್ಯಾಸತ್ಯತೆ ಹೊರಬೀಳಲಿದೆ. ಇದರಲ್ಲಿ ನನ್ನ ಇಲ್ಲವೇ ಮುಖ್ಯಮಂತ್ರಿಯವರ ಯಾವುದೇ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿದರು.

ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆ ಮೇಲೆ ಭಾರೀ ವಾಹನಗಳ ಸಂಚಾರಕ್ಕೆ ನಾಲ್ಕೈದು ತಿಂಗಳಲ್ಲೇ ಅವಕಾಶ ಕಲ್ಪಿಸ ಲಾಗುವುದೆಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಪಂಚಮಶಾಲಿ ಸಮುದಾಯವನ್ನು 2ಎ ಪ್ರವರ್ಗಕ್ಕೆ ಸೇರಿಸಲು ಕೂಡಲ ಸಂಗಮದ ಪಂಚಮಶಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿಗಳು ನೀಡಿರುವ 24 ಗಂಟೆ ಗಡುವು ಹಿಂದಕ್ಕೆ ಪಡೆಯಬೇಕು. ಸದ್ಯದಲ್ಲೇ ಈ ಸಮಾಜಕ್ಕೆ ಸಿಹಿ ಸುದ್ದಿ ಸಿಗಲಿದೆ ಎಂದು ಮನವಿ ಮಾಡಿದರು.

ಕುಲಶಾಸ್ತ್ರೀಯ ಅಧ್ಯಯನ ನಡೆಸಿ ಮಧ್ಯಂತರ ವರದಿ ಕೊಡಲಾಗಿದೆ. ಎಲ್ಲಾ ಜಿಲ್ಲೆಗಳಿಗೂ ಭೇಟಿ ಕೊಟ್ಟು ಅಧ್ಯಯನ ಮಾಡಬೇಕಿತ್ತು. ಜೊತೆಗೆ ಕೋವಿಡ್ ಇದ್ದ ಕಾರಣ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ ಮಧ್ಯಂತರ ವರದಿ ನೀಡುವುದು ವಿಳಂಬವಾಗಿದೆ.

ಆರೋಪಿ ಜಗದೀಶ್‌ಗೆ ಷರತ್ತುಬದ್ಧ ಜಾಮೀನು

ಬೆಂಗಳೂರು, ಜ.3– ವಿಧಾನಸೌಧದಲ್ಲಿ 10.5 ಲಕ್ಷ ಹಣ ಸಿಕ್ಕ ಪ್ರಕರಣದಲ್ಲಿ ಬಂಧಿತನಾಗಿದ್ದ ಮಂಡ್ಯ ಮೂಲದ ಪಿಡಬ್ಲ್ಯೂಡಿ ಕಿರಿಯ ಎಂಜಿನಿಯರ್ ಜಗದೀಶ್‌ಗೆ ಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ವಿಧಾನಸೌಧದ ಮುಖ್ಯದ್ವಾರ ಬಳಿ 10.5 ಲಕ್ಷ ಹಣ ಸಿಕ್ಕ ಪ್ರಕರಣದಲ್ಲಿ ಜಗದೀಶ್‌ನನ್ನು ಬಂಧಿಸಿದ್ದ ವಿಧಾನಸೌಧ ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ಇನ್‌ಸ್ಪೆಕ್ಟರ್ ಕುಮಾರಸ್ವಾಮಿ ಅವರು ತಡರಾತ್ರಿವರೆಗೂ ವಿಚಾರಣೆ ನಡೆಸಿದ್ದರು. ಆದರೂ ಜಗದೀಶ್ ಯಾರಿಗೆ ಹಣ ಕೊಡೋಕೆ ಬಂದಿದ್ದ ಎಂಬ ಮಾಹಿತಿಯನ್ನು ಬಾಯಿ ಬಿಟ್ಟಿರಲಿಲ್ಲ. ಆದ್ದರಿಂದ ಲಂಚದ ರೂಪದಲ್ಲಿ ಹಣ ಕೊಡಲು ಬಂದಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿ ತನಿಖೆ ಮುಂದುವರೆಸಲಾಗಿತ್ತು. ಜಗದೀಶ್ ಮೊಬೈಲ್ ವಶಕ್ಕೆ ಪಡೆದು ಪರಿಶೀಲಿಸಿದಾಗ ಕೊನೆಯ ದೂರವಾಣಿ ಕರೆ ಹಾಗೂ ಕೆಲ ವಾಟ್ಸಪ್ ಚಾಟ್‌ಗಳನ್ನು ಡಿಲೀಟ್ ಮಾಡಿರುವ ಶಂಕೆ ವ್ಯಕ್ತವಾಗಿತ್ತು. ಬಳಿಕ ಜಗದೀಶ್ ಯಾರ ಕೈಕೆಳಗೆ ಕೆಲಸ ಮಾಡ್ತಿದ್ದ ಅನ್ನೋ ಕುರಿತಾಗಿ ಮಾಹಿತಿ ಸಂಗ್ರಹ ಮಾಡಿದ್ದರು. ಆರೋಪಿ ಬಾಯಿಬಿಡಲಿಲ್ಲ ಅಂದರೆ ಸೀನಿಯರ್ ಎಂಜನಿಯರ್‌ಗೆ ನೋಟಿಸ್ ಕೊಟ್ಟು ವಿಚಾರಣೆ ನಡೆಸಲು ಮುಂದಾಗಿದ್ದರು.

ಪ್ರಧಾನಮಂತ್ರಿ ಆವಾಜ್ ಯೋಜನೆಯಡಿ ಫಲಾನುಭವಿಗಳಿಗೆ ಮಂಜೂರಾಗಿರುವ

ಮನೆಗಳ ಪರಿಶೀಲಿಸಿದ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಮುಖಂಡರು



ಮೈಸೂರು, ಜ.6(ಎಂಟಿವೈ)– ಮೈಸೂರಿನ ಕುದುರೆಮಾಳಕ್ಕೆ ಬಿಜೆಪಿ ಎಸ್ಸಿ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂಜಯ್ ನಿರ್ಮಲ್ ಹಾಗೂ ಡಾ.ಸ್ವರಾಜ್ ವಿದ್ವಾನ್ ಭೇಟಿ ನೀಡಿ, ಪ್ರಧಾನ ಮಂತ್ರಿ ಆವಾಜ್ ಯೋಜನೆಯಡಿ ಫಲಾನುಭವಿಗಳಿಗೆ ಮಂಜೂರಾಗಿರುವ ಮನೆಗಳನ್ನು ಪರಿಶೀಲಿಸಿದರು. ಮೈಸೂರಿನ ಬೋಗಾದಿ ರಸ್ತೆಗೆ ಹೊಂದಿಕೊಂಡಂತೆ ಇರುವ ಕುದುರೆ ಮಾಳದಲ್ಲಿ ನಿರ್ಮಾಣ ಮಾಡಿ ಫಲಾನುಭವಿಗಳಿಗೆ ನೀಡಿರುವ ಮನೆಗಳನ್ನು ಪರಿಶೀಲಿಸಿ ದರಲ್ಲದೆ, ಫಲಾನುಭವಿಗಳೊಂದಿಗೆ ಸಮಾ ಲೋಚಿಸಿದರು. ಅಲ್ಲದೆ, ಉಜ್ವಲಾ ಯೋಜನೆಯಡಿ ಅಡುಗೆ ಅನಿಲ ಸರಬರಾಜು ಮಾಡುತ್ತಿರುವ ಫಲಾನುಭವಿಗಳಿಂದಲೂ ಮಾಹಿತಿ ಪಡೆದರು.

ಇದೇ ವೇಳೆ ಬಿಜೆಪಿ ಎಸ್ಸಿ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಂಜಯ್ ನಿರ್ಮಲ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಹಿತಕಾಯಲು ಹಲವು ಕಾರ್ಯಕ್ರಮ ರೂಪಿಸಿದೆ. ದೇಶದೆಲ್ಲೆಡೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಪರಿಶಿಷ್ಟ ಸಮುದಾಯದ ಫಲಾನುಭವಿಗಳಿಗೆ ಮನೆ ನಿರ್ಮಿಸಿಕೊಡಲಾಗಿದೆ. ಅಡುಗೆ ಅನಿಲವನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಬಿಜೆಪಿ ಎಸ್ಸಿ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕುದುರೆಮಾಳಕ್ಕೆ ಭೇಟಿ ನೀಡಿ, ಮನೆ ಹಾಗೂ ಅಡುಗೆ ಅನಿಲದ ಸಂಪರ್ಕ ಪಡೆದಿರುವ ಫಲಾನುಭವಿಗಳೊಂದಿಗೆ ಸಮಾಲೋಚಿಸಿದ್ದಾರೆ. ಅಲ್ಲದೆ ರಾಜ್ಯ ಸರ್ಕಾರದ ವತಿಯಿಂದ ಕುದುರೆ ಮಾಳಕ್ಕೆ ರಸ್ತೆ, ಚರಂಡಿ ಸೇರಿದಂತೆ ಇನ್ನಿತರ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯೆ ವೇದಾವತಿ, ಮುಖಂಡ ರಮೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಉನ್ನತ ಶಿಕ್ಷಣದ ಗುಣಮಟ್ಟ ಕಾಯ್ದುಕೊಳ್ಳಲು ಸರ್ಕಾರ, ರಾಜ್ಯಪಾಲರ ಹಸ್ತಕ್ಷೇಪ ಇರಬಾರದು

■ ಮಾಜಿ ಶಿಕ್ಷಣ ಸಚಿವ ಪ್ರೊ. ಬಿ.ಕೆ.ಚಂದ್ರಶೇಖರ್ ಅಭಿಮತ ■ ಕುಲಪತಿಗಳ ನೇಮಕ ಭ್ರಷ್ಟಾಚಾರ ವಿಷಯದಲ್ಲಿ ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ಸಹಮತ



ಮೈಸೂರು, ಜ.6(ಎಂಟಿವೈ)–ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸಿ ಗಟ್ಟಿಗೊಳಿಸಬೇಕಾದರೆ ಸರ್ಕಾರ ಹಾಗೂ ರಾಜ್ಯಪಾಲರ ಹಸ್ತಕ್ಷೇಪದಿಂದ ಮುಕ್ತಗೊಳಿಸಬೇಕು ಎಂದು ಮಾಜಿ ಸಚಿವ ಪ್ರೊ.ಬಿ.ಕೆ. ಚಂದ್ರಶೇಖರ್ ಒತ್ತಾಯಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉನ್ನತ ಶಿಕ್ಷಣಕ್ಕೆ ಮತ್ತಷ್ಟು ಸತ್ವ ತುಂಬುವ ಅನಿವಾರ್ಯತೆ ಎದುರಾಗಿದೆ. ಅದನ್ನು ಮಾಡಬೇಕಾದರೆ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಬೇಕು. ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣದಲ್ಲಿ ರಾಜ್ಯಪಾಲರು ಹಾಗೂ ಸರ್ಕಾರದ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಬಹುತೇಕ ರಾಜ್ಯಪಾಲರಿಗೆ ಉನ್ನತ ಶಿಕ್ಷಣದ ಕುರಿತು ಹೆಚ್ಚಿನ ಮಾಹಿತಿ ಇರುವುದಿಲ್ಲ. ರಾಜ್ಯಪಾಲರಾಗಿದ್ದಾರೆ ಎಂಬ ಏಕೈಕ ಕಾರಣದಿಂದ ಉನ್ನತ ಶಿಕ್ಷಣದಲ್ಲಿ ಮಹತ್ವದ ತೀರ್ಮಾನ ಕೈಗೊಳ್ಳುವ ಅಧಿಕಾರ ನೀಡಲಾಗುತ್ತದೆ. ಇದು ಸರಿಯಾದ ಕ್ರಮವಲ್ಲ. ಸರ್ಕಾರದ ಹಸ್ತಕ್ಷೇಪವೂ ನಿರಂತರವಾಗಿ ಇರುತ್ತದೆ. ಇದರಿಂದ ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಇದು ಕೇವಲ ಬಿಜೆಪಿ ಸರ್ಕಾರದಲ್ಲಿ ಮಾತ್ರವಲ್ಲ ಎಲ್ಲ ಸರ್ಕಾರದ ಅವಧಿಯಲ್ಲಿ ಆಗಿರುವ ತಪ್ಪು. ಈ ತಪ್ಪನ್ನು ಇನ್ನಾದರೂ ಸರಿಪಡಿಸಬೇಕು. ಆ ಮೂಲಕ ಉನ್ನತ ಶಿಕ್ಷಣವನ್ನು ಗಟ್ಟಿಗೊಳಿಸಬೇಕು ಎಂದು ಅಭಿಪ್ರಾಯಪಟ್ಟರು.

ಕುಲಪತಿ ನೇಮಕಾತಿಗೆ ಸರ್ಕಾರ ಸರ್ಚ್ ಕಮಿಟಿ ರಚಿಸುವ ವ್ಯವಸ್ಥೆ ಇದೆ. ಈ ಸರ್ಚ್ ಕಮಿಟಿ ಅರ್ಜಿಗಳನ್ನು ಸ್ವೀಕರಿಸಿ ಮೂವರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡುತ್ತದೆ. ಆ ಮೂವರಲ್ಲಿ ಒಬ್ಬರನ್ನು ಆಯ್ಕೆ ಮಾಡುವ ಅನಿವಾರ್ಯತೆ ರಾಜ್ಯಪಾಲರಿಗೆ ಇರುತ್ತದೆ. ಈ ಪ್ರಕ್ರಿಯೆಯಲ್ಲಿ ಉತ್ತಮ ಕುಲಪತಿ ಆಯ್ಕೆಯಾಗುತ್ತಾರೆ ಎಂಬ ನಂಬಿಕೆ ನನಗೆ ಇಲ್ಲ. ಕೆಲವರು ಕುಲಪತಿಯಾಗಲು 5 ರಿಂದ 6 ಕೋಟಿ ರೂ. ಹಣ ನೀಡುತ್ತಿದ್ದಾರೆ ಎಂಬ ಸಂಸದ ಪ್ರತಾಪ್ ಸಿಂಹ ಆರೋಪ ಸತ್ಯವಾಗಿದ್ದು, ಅವರ ಹೇಳಿಕೆಗೆ ನನ್ನ ಸಹಮತ ಇದೆ ಎಂದು ಹೇಳಿದರು. ಕುಲಪತಿ ನೇಮಕದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಹಾಗೂ ಅನರ್ಹರು ಕುಲಪತಿ ಹುದ್ದೆ ಅಲಂಕರಿಸುವುದನ್ನು ತಪ್ಪಿಸಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಂತಹ ವಿವಿಧ ಉನ್ನತ ಸಂಸ್ಥೆಗಳ ಮುಖ್ಯಸ್ಥರನ್ನೊಳಗೊಂಡ ಸರ್ಚ್ ಕಮಿಟಿ ರಚಿಸಬೇಕು. ಅವರು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯುವ ಸಾಧ್ಯತೆ ಕಡಿಮೆ. ಹಾಗಾಗಿ ಎಲ್ಲ ವಿವಿಗಳಿಗೆ ಉತ್ತಮ ಕುಲಪತಿಗಳು ನೇಮಕವಾಗಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿಯೇತರ ಸರ್ಕಾರ ಹೊಂದಿರುವ ತಮಿಳುನಾಡು, ಕೇರಳ, ದೆಹಲಿ, ಪಶ್ಚಿಮ ಬಂಗಾಳದಲ್ಲಿ ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘರ್ಷ ಪ್ರಾರಂಭವಾಗಿದೆ. ರಾಜ್ಯಪಾಲರು ಪ್ರತಿಯೊಂದು ವಿಚಾರಕ್ಕೂ ಮೂಗು ತೂರಿಸುವ ಪ್ರಯತ್ನ ಮಾಡುತ್ತಿದ್ದು, ಸರ್ಕಾರ ಸುಗಮವಾಗಿ ಆಡಳಿತ ನಡೆಸಲು ಬಿಡುತ್ತಿಲ್ಲ. ಈ ನಡೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ. ಬಿ.ಜೆ.ವಿಜಯ ಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ, ಮಾಧ್ಯಮ ವಕ್ತಾರ ಮಹೇಶ್ ಇದ್ದರು.

ಮುಂದಿನ ಶೈಕ್ಷಣಿಕ ವರ್ಷ 100 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ



ಕೂಡಿಗೆಯಲ್ಲಿ ಓಬವ್ವ ಆತ್ಮರಕ್ಷಣೆ ಕಲೆ ಪ್ರದರ್ಶನಕ್ಕೆ ಚಾಲನೆ ನೀಡುತ್ತಿರುವ ಸಚಿವ ಕೋಟಾ ಶ್ರೀನಿವಾಸ ಪೂಜಾರಿ

ವಸತಿ ಶಾಲೆಗಳ ಪ್ರವೇಶಕ್ಕೆ ಬೇಡಿಕೆ ಹೆಚ್ಚಳ: ಕೋಟಾ ಶ್ರೀನಿವಾಸ ಪೂಜಾರಿ

ಕುಶಾಲನಗರ, ಜ.6– ರಾಜ್ಯದಲ್ಲಿ ವಸತಿ ಶಾಲೆಗಳ ಶಿಕ್ಷಣದ ಗುಣಮಟ್ಟ ಮತ್ತು ಫಲಿತಾಂಶ ಉತ್ತಮವಾಗಿದ್ದು, ಬೇಡಿಕೆಯೂ ಸಹ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ 6 ನೇ ತರಗತಿಗೆ 50 ರಿಂದ 100 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಯುಕ್ತಾಶ್ರಯದಲ್ಲಿ ಕೂಡಿಗೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಸಭಾಂಗಣದಲ್ಲಿ ಶುಕ್ರವಾರ ನಡೆದ ಓಬವ್ವ ಆತ್ಮ ರಕ್ಷಣೆ ಕಲೆ ಪ್ರದರ್ಶನಕ್ಕೆ



ವಸತಿ ಶಾಲೆಯ ಮಕ್ಕಳು ಸ್ವಯಂರಕ್ಷಣೆಗಾಗಿ ಕಲಿತ ಕರಾಟೆ ಪ್ರದರ್ಶನ ನೀಡುತ್ತಿರುವುದು.

ಚಾಲನೆ ನೀಡಿ ಅವರು ಮಾತನಾಡಿದರು.

ವಿದ್ಯಾರ್ಥಿನಿಯರಿಗೆ ಆತ್ಮವಿಶ್ವಾಸ ಮೂಡಿಸಲು ಹಾಗೂ ಸ್ವಯಂ ರಕ್ಷಣೆಗಾಗಿ ಆತ್ಮ ರಕ್ಷಣಾ ಕಲೆ, ಕರಾಟೆ ತರಬೇತಿ ನೀಡುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಸಮಾಜ ಘಾತಕರಿಂದ ಪ್ರಾಣವನ್ನು ರಕ್ಷಿಸಿಕೊಳ್ಳುವುದರ ಜತೆಗೆ ಸ್ವಯಂ ರಕ್ಷಣೆ ಮತ್ತು ಆತ್ಮಸ್ಥೈರ್ಯ ಕಲ್ಪಿಸಿಕೊಳ್ಳಲು ಇದು ಸಹಕಾರಿಯಾಗಿದೆ. ಕರಾಟೆ ಎಲ್ಲರಿಗೂ ಅವಶ್ಯಕವಾಗಿದೆ. ವಿಶೇಷವಾಗಿ ಹೆಣ್ಣು ಮಕ್ಕಳು ಕೂಡಾ ತಮ್ಮ ಸುರಕ್ಷತೆಗಾಗಿ ಕಡ್ಡಾಯವಾಗಿ ಇದನ್ನು ಕಲಿಯಬೇಕಾಗಿದೆ ಎಂದರು.

ರಾಜ್ಯದಲ್ಲಿ ಅಂಬೇಡ್ಕರ್, ಮೊರಾರ್ಜಿ ದೇಸಾಯಿ, ಏಕಲವ್ಯ, ಕಿತ್ತೂರು ರಾಣಿ ಚೆನ್ನಮ್ಮ, ನಾರಾಯಣ ಗುರು ಹೀಗೆ ಒಟ್ಟು 830 ವಸತಿ ಶಾಲೆಗಳಿದ್ದು, 2 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಸತಿ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಫಲಿತಾಂಶ ಉತ್ತಮವಾಗಿದ್ದು, ರಾಜ್ಯಾದ್ಯಂತ ಬೇಡಿಕೆ ಹೆಚ್ಚಿದೆ. ಆದ್ದರಿಂದ ಮುಂದಿನ ಶೈಕ್ಷಣಿಕ ವರ್ಷದಿಂದ 6 ನೇ ತರಗತಿ ಪ್ರವೇಶಕ್ಕೆ ಎ ಮತ್ತು ಬಿ ವಿಭಾಗ ಮಾಡಿ 50 ರಿಂದ 100 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶ ಮಾಡಲಾಗುವುದು ಎಂದು ಹೇಳಿದರು.

ರಾಜ್ಯದ ವಿವಿಧ ವಸತಿ ಶಾಲೆಯಲ್ಲಿ ಓದಿದ 14 ವಿದ್ಯಾರ್ಥಿಗಳು ಭಾರತೀಯ ತಾಂತ್ರಿಕ ಸಂಸ್ಥೆ(ಐಐಟಿ) ಗೆ ಆಯ್ಕೆಯಾಗಿದ್ದಾರೆ. ಇದೊಂದು ವಿಶೇಷ ಎಂದರೆ ಅತಿಶಯೋಕ್ತಿಯಲ್ಲ ಎಂದು ಸಚಿವರು ಹರ್ಷ ವ್ಯಕ್ತಪಡಿಸಿದರು.

ವಸತಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಶಿಕ್ಷಕರಿಗೆ ಸೇವಾ ಭದ್ರತೆ ನೀಡಲಾಗುವುದು. ಹಾಗೆಯೇ ಶಿಕ್ಷಕರಿಗೆ ಗೌರವಧನ ಹೆಚ್ಚಿಸಲಾಗುವುದು. ಆ ನಿಟ್ಟಿನಲ್ಲಿ 18 ಕೋಟಿ ರೂ. ವೆಚ್ಚವಾಗಲಿದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಲಾಗುವುದು ಎಂದರು.

ವಿದ್ಯಾರ್ಥಿ ನಿಲಯಗಳ ಮೂಲ ಸೌಕರ್ಯಕ್ಕೆ 135 ಕೋಟಿ ರೂ.ಬೇಕಿದ್ದು, ಆ ನಿಟ್ಟಿನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗಿದೆ. ಸರ್ಕಾರ ಎಲ್ಲಾ ರೀತಿಯ ಆರ್ಥಿಕ ನೆರವು ನೀಡಲಿದೆ. 50 ಕಡೆಗಳಲ್ಲಿ ಕನಕದಾಸರ ಹೆಸರಿನಲ್ಲಿ ವಿದ್ಯಾರ್ಥಿ ನಿಲಯ, ಹಾಗೆಯೇ 5 ಕಡೆಗಳಲ್ಲಿ (ಮಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಬೆಂಗಳೂರು) ದೀನ್ ದಯಾಳ್ ಉಪಾಧ್ಯಾಯ ವಿದ್ಯಾರ್ಥಿ ನಿಲಯದಲ್ಲಿ ಒಂದು ಸಾವಿರ ಮಕ್ಕಳಿಗೆ ಅವಕಾಶ ಕಲ್ಪಿಸಲಾಗುವುದು. ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅವಕಾಶ ಬೇಕು ಎನ್ನುವ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಒದಗಿಸಲಾಗುವುದು ಎಂದರು.

ಶಾಸಕ ಎಂ.ಪಿ.ಸುಜಾಕುಶಾಲಪ್ಪ ಮಾತನಾಡಿ, ಪ್ರತಿಕೂಲ ಸನ್ನಿವೇಶಗಳಲ್ಲಿ ಹೆಣ್ಣು ಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವಷ್ಟು ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢ ಹಾಗೂ ಸಮರ್ಥರಾಗಿರುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ. ಈ ರೀತಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢ ಮತ್ತು ಸಮರ್ಥರಾಗಲು ಇವರಿಗೆ ಆತ್ಮ ರಕ್ಷಣಾ ಕಲೆಗಳಾದ ಕರಾಟೆ, ಜೂಡೋ, ಟೆಕ್ವಾಂಡೋಗಳಲ್ಲಿ ಪರಿಣಿತಿ ಹೊಂದುವುದು ಅವಶ್ಯಕವಾಗಿದೆ ಎಂದರು.

ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರುಗಳು ಮಾತನಾಡಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಎನ್.ಮಂಜುನಾಥ್, ವಸತಿ ಶಾಲೆಗಳ ಜಿಲ್ಲಾ ಸಮನ್ವಯಾಧಿಕಾರಿ ಲೋಕೇಶ್,ಕೂಡಿಗೆ ಮೊರಾರ್ಜಿ ಶಾಲೆಯ ಪ್ರಾಂಶುಪಾಲ ಪ್ರಕಾಶ್, ವಿವಿಧ ವಸತಿ ಶಾಲೆಯ ಪ್ರಾಂಶುಪಾಲರಾದ ಚಂದ್ರಶೇಖರ ರೆಡ್ಡಿ, ಶ್ರೀದೇವಿ, ಭಾರತಿ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಬಾಲಕೃಷ್ಣ ರೈ, ವಿಸ್ತರಣಾಧಿಕಾರಿಯಾದ ಚಂದ್ರಪ್ಪ, ಎಂಜಿನಿಯರ್ ಚೆನ್ನೇಸ್ ಉಪಸ್ಥಿತರಿದ್ದರು. ತರಬೇತುದಾರರಾದ ಶರಣ್ಯ ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಪ್ರದರ್ಶಿಸಿದ ಕರಾಟೆ ಪ್ರದರ್ಶನಗಳು ಎಲ್ಲರ ಸೆಳೆಯಿತು.

ಕೊಡಗು ಜಿಲ್ಲಾ ಮತದಾರರ ಪಟ್ಟಿ ಪ್ರಕಟ

ಕೊಡಗು ಜಿಲ್ಲೆಯಲ್ಲಿ 4,44,098 ಮತದಾರರು

ಮಡಿಕೇರಿ, ಜ.6– ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಭಾವಚಿತ್ರವಿರುವ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಕೈಗೊಂಡು ಅರ್ಹ ನಾಗರಿಕರನ್ನು ಮತ್ತು ಯುವ ಮತದಾರರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡಿ ಪಟ್ಟಿ ಪ್ರಕಟಿಸಲಾಗಿದೆ.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕೊಡಗು ಜಿಲ್ಲೆಯ 208–ಮಡಿಕೇರಿ ಮತ್ತು 209–ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯನ್ನು ಜ.5 ರಂದು ಎಲ್ಲಾ ಮತಗಟ್ಟೆಗಳಲ್ಲಿ, ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿ ಕಚೇರಿ ಹಾಗೂ ಜಿಲ್ಲೆಯ ಅಧಿಕೃತ ವೆಬ್‌ಸೈಟ್ https://kodagu.nic.in ರಲ್ಲಿ ಪ್ರಕಟಿಸಲಾಗಿದೆ.

ಪ್ರಸ್ತುತ ಕೊಡಗು ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರ ಗಳಿಂದ ಒಟ್ಟು 4,44,098 ಮತದಾರರು ಇದ್ದು, 208–ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,25,910 ಮತದಾರರು ಹಾಗೂ 209–ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,18,188 ಮತದಾರರು ಇದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ಅವಧಿಯಲ್ಲಿ ಜಿಲ್ಲೆಯಲ್ಲಿರುವ ಎಲ್ಲಾ ಕಾಲೇಜುಗಳಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಂಡು ಮತದಾರರ ಪಟ್ಟಿಯಲ್ಲಿ ನೋಂದಣಿಯಾಗದೇ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ, 18–19 ವರ್ಷದ ಒಟ್ಟು 3,747 ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಲಾಗಿದೆ.

ಜಿಲ್ಲೆಯಲ್ಲಿರುವ 250 ಹಾಡಿಗಳ ಪೈಕಿ ಜನವಸತಿ ಇರುವ 76 ಹಾಡಿಗಳಲ್ಲಿ ವಾಸವಿರುವ ಜೇನುಕುರುಬ ಸಮುದಾಯದ ಜನಾಂಗದವರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಲು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯ ಸಹಯೋಗದೊಂದಿಗೆ ತಹಶೀಲ್ದಾರ್, ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ತಾಲೂಕು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯ ಅಧಿಕಾರಿಗಳ ವಿಶೇಷ ತಂಡವನ್ನು ರಚಿಸಿ, ಈ ತಂಡವು ಪ್ರತಿಯೊಂದು ಹಾಡಿಗಳಿಗೂ ಭೇಟಿ ನೀಡಿ, ಒಟ್ಟು 1002 ಮತದಾರರನ್ನು ಗುರುತಿಸಿ, ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಲಾಗಿದೆ.

ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ಜಿಲ್ಲಾಧಿಕಾರಿ ಕಚೇರಿ, ಉಪ ವಿಭಾಗಾಧಿಕಾರಿಗಳ ಮತ್ತು ತಹಶೀಲ್ದಾರರ ಕಚೇರಿಯನ್ನು ಸಂಪರ್ಕಿಸಬಹುದು ಹಾಗೂ ಮತದಾರರು https://www.nvsp.in, https://voterportal.eci.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮತ್ತು ವಿಎಚ್‌ಎ ಮೊಬೈಲ್ ಆಪ್ ಮೂಲಕ ಮಾಹಿತಿ ಪಡೆಯಬಹುದು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಗೃಹರಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಮಡಿಕೇರಿ, ಜ.6– ಜಿಲ್ಲಾ ಗೃಹರಕ್ಷಕದಳ ಕೊಡಗು ಜಿಲ್ಲೆ ಮಡಿಕೇರಿ ಕಚೇರಿಯಲ್ಲಿ 2022–23 ನೇ ಸಾಲಿಗೆ ಜಿಲ್ಲಾ ಗೃಹ ರಕ್ಷಕದಳ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಸ್ಥಾನಗಳಿಗೆ ಸ್ವಯಂ ಸೇವಕ ಗೃಹ ರಕ್ಷಕರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕೊಡಗು ಜಿಲ್ಲೆಯ ನಿವಾಸಿಯಾಗಿರುವ 20 ವರ್ಷ ಮೇಲ್ಪಟ್ಟ 40 ವರ್ಷದೊಳಗಿನ ಹಾಗೂ 10ನೇ ತರಗತಿ ತೇರ್ಗಡೆ ಹೊಂದಿರುವ ದೃಢಕಾಯರಾಗಿರುವ ಪುರುಷ, ಮಹಿಳಾ ಅಭ್ಯರ್ಥಿಗಳು ಜನವರಿ, 13 ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.08272–228427 ಸಂಪರ್ಕಿಸಬಹುದು.

ಕೊಡವ ಲ್ಯಾಂಡ್ ಸ್ವಾಯತ್ತತೆಗೆ ಆಗ್ರಹಿಸಿ ಸಿಎನ್‌ಸಿ ಪ್ರತಿಭಟನೆ

ಮಡಿಕೇರಿ, ಜ.6– ಕೊಡವ ಜನಾಂಗವನ್ನು ರಾಷ್ಟ್ರದ ಇತರ ನಾಗರಿಕರಿಗೆ ಸಮಾನವಾಗಿ ಪರಿಗಣಿಸುವ ಮೂಲಕ ಕೊಡವ ತಾಯ್ನಾಡು ಮತ್ತು ಕೊಡವರ ಭಾವನೆಗಳನ್ನು ಗೌರವಿಸಬೇಕು. ಇದಕ್ಕಾಗಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆಯನ್ನು ರೂಪಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವ ಕಾರ್ಯವಿಧಾನಕ್ಕೆ ತ್ವರಿತವಾಗಿ ಚಾಲನೆ ನೀಡಬೇಕೆಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿತು.



ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಧರಣಿ ನಡೆಸಿದ ಸಂಘಟನೆಯ ಪ್ರಮುಖರು 'ಕೊಡವ ಲ್ಯಾಂಡ್' ಪರ ಘೋಷಣೆಗಳನ್ನು ಕೂಗಿದರು. ಸರ್ಕಾರಗಳು ಅತಿ ಸೂಕ್ಷ್ಮ ಕೊಡವ ಬುಡಕಟ್ಟು ಜನಾಂಗವನ್ನು ಸಮಾನ ನಾಗರಿಕರಂತೆ ಪರಿಗಣಿಸಬೇಕು ಮತ್ತು ತಾಯ್ನಾಡನ್ನು ಇತರ ಭಾಷಾವಾರು ರಾಜ್ಯಗಳಂತೆ ಗೌರವಯುತವಾಗಿ ಕಾಣಬೇಕು. ಆದರೆ ಸರ್ಕಾರಗಳು ಕೊಡವ ಪ್ರದೇಶವನ್ನು ತಮ್ಮ ಸಂಪನ್ಮೂಲ ಉತ್ಪಾದಿಸುವ ಆಕ್ರಮಿತ ಕಾಲೋನಿ ಎಂದು ಪರಿಗಣಿಸುತ್ತಿವೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸಾಂವಿಧಾನಿಕ ಸಂಸದೀಯ ಸಹಭಾಗಿತ್ವದ ಪ್ರಜಾಪ್ರಭುತ್ವದಲ್ಲಿ ಸಿಎನ್‌ಸಿ ಸಂಘಟನೆ ಹಾಗೂ ಕೊಡವರು ಯಾವುದೇ ಜಾಗ ಅಥವಾ ಸಮಾನ ಪಾಲು ಕೇಳುತ್ತಿಲ್ಲ. ಬದಲಿಗೆ ಸಂವಿಧಾನದ 32ನೇ ವಿಧಿಯ ಅನುಷ್ಠಾನಕ್ಕೆ ಮನವಿ ಮಾಡಿಕೊಳ್ಳುತ್ತಿದೆ. ಬುಡಕಟ್ಟು ಜನಾಂಗವಾಗಿರುವ ಕೊಡವರ ಹಕ್ಕುಗಳಿಗೆ ಭದ್ರತೆ ನೀಡಲು ಆಡಳಿತ ವರ್ಗ ಮುಂದಾಗುವ ಮೂಲಕ ತನ್ನ ಮನೋಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು ಎಂದು ನಾಚಪ್ಪ ಆಗ್ರಹಿಸಿದರು. ಕಾನೂನುಬದ್ಧ ಆಶೋತ್ತರಗಳು ಮತ್ತು ಗೌರವಾನ್ವಿತ ಗುರಿಗಳನ್ನು ತಿಳಿಸಲು ಸಿಎನ್‌ಸಿ ನಿರಂತರ ಧರಣಿಗಳನ್ನು ನಡೆಸುತ್ತಿರುವುದಾಗಿ ತಿಳಿಸಿದರು.

ಕೊಡವಲ್ಯಾಂಡ್‌ಗೆ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯನ್ನು ರಚಿಸುವ ಮೂಲಕ ರಾಷ್ಟ್ರ ಮತ್ತು ವಿಶ್ವ ಶಾಂತಿಗಾಗಿ ಕೊಡವರು ಪ್ರಾಣತ್ಯಾಗ ಮಾಡಿದ ಸತ್ಯವನ್ನು ಒಪ್ಪಿಕೊಳ್ಳಬೇಕು. ಸಂವಿಧಾನದ ಆರ್ಟಿಕಲ್ 244(ಎ) ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್ ಅಡಿಯಲ್ಲಿ ಕೊಡವಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆಯನ್ನು ಆಂತರಿಕ ಸ್ವಯಂ–ನಿರ್ಣಯ ಅಧಿಕಾರದ ಹಕ್ಕಿನೊಂದಿಗೆ ರೂಪಿಸಬೇಕು. ಅತೀ ಸೂಕ್ಷ್ಮಾತಿ ಸೂಕ್ಷ್ಮ ಮೈಕ್ರೋ ಕೊಡವ ರೇಸ್ ಅನ್ನು ಎಸ್‌ಟಿ ಪಟ್ಟಿಯಲ್ಲಿ ಸೇರಿಸಬೇಕು. ಕೊಡವ ಜನಾಂಗೀಯ 'ಸಂಸ್ಕಾರ ಗನ್' ಹಕ್ಕನ್ನು ಸಂವಿಧಾನದ 25 ಮತ್ತು 26ನೇ ವಿಧಿಗಳಡಿಯಲ್ಲಿ ಅನುಮೋದಿಸಬೇಕು ಎಂದು ಒತ್ತಾಯಿಸಿದರು.

ಸಿಎನ್‌ಸಿಯ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಅಪರ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಕೇಂದ್ರ ಗೃಹ ಮಂತ್ರಿ ಅಮಿತ್ ಶಾ, ಕೇಂದ್ರ ಕಾನೂನು ಮಂತ್ರಿ ಕಿರಣ್ ರಿಜಿಜು, ಅರ್ಥಶಾಸ್ತ್ರಜ್ಞ ಮತ್ತು ಕೇಂದ್ರ ಮಾಜಿ ಕಾನೂನು ಮಂತ್ರಿ ಡಾ. ಸುಬ್ರಮಣಿಯನ್ ಸ್ವಾಮಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನಾಚಪ್ಪ ಅವರು ಜಿಲ್ಲಾಡಳಿತದ ಮೂಲಕ ಮನವಿ ಪತ್ರವನ್ನು ಸಲ್ಲಿಸಿದರು. ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಗಾಗಿ ಸಿಎನ್‌ಸಿಯೊಂದಿಗೆ ಸಮರ್ಪಣಾ ಭಾವದಿಂದ ಅರ್ಪಿಸಿಕೊಳ್ಳುವುದಾಗಿ ಪ್ರಮುಖರು ಇದೇ ಸಂದರ್ಭ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಧರಣಿಯಲ್ಲಿ ಪಟ್ಟಮಾಡ ಲಲಿತಾ ಗಣಪತಿ, ಪುಲ್ಲೇರ ಸ್ವಾತಿ ಕಾಳಪ್ಪ, ಕಲಿಯಂಡ ಮೀನಾ ಪ್ರಕಾಶ್, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಲೆ.ಕರ್ನಲ್ ಬಿ.ಎಂ.ಪಾರ್ವತಿ, ಕೂಪದಿರ ಪುಷ್ಪ ಮುತ್ತಪ್ಪ, ಕಲಿಯಂಡ ಪ್ರಕಾಶ್, ಪುಲ್ಲೇರ ಕಾಳಪ್ಪ, ಅಜ್ಜಿಕುಟ್ಟಿರ ಲೋಕೇಶ್, ಬೊಟ್ಟಂಗಡ ಗಿರೀಶ್, ಪಟ್ಟಮಾಡ ಕುಶ, ಚೆಂಬಂಡ ಜನತ್, ಮಂದಪಂಡ ಮನೋಜ್, ಕಾಟುಮಣಿಯಂಡ ಉಮೇಶ್, ಅಪ್ಪಾರಂಡ ಪ್ರಸಾದ್, ಮೇದುರ ಕಂಠಿ ಇತರರು ಪಾಲ್ಗೊಂಡಿದ್ದರು.

ಸಾಲದ ಬಾಧೆ: ರೈತ ಆತ್ಮಹತ್ಯೆ

ಬೇಗೂರು, ಜ.6– ರೈತನೊಬ್ಬ ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ರಂಗೂಪುರ ಗ್ರಾಮದಲ್ಲಿ ಸಂಭವಿಸಿದೆ.



ಬೇಗೂರು ಸಮೀಪದ ರಂಗೂಪುರ ಗ್ರಾಮದ ಮಹದೇವೇಗೌಡ (50) ಎಂಬುವರೇ ಆತ್ಮಹತ್ಯೆಗೆ ಶರಣಾದವರಾಗಿದ್ದಾರೆ. ಮಹದೇವೇಗೌಡ ಸ್ಥಳೀಯ ಪಿಎಸಿಸಿ ಬ್ಯಾಂಕ್‌ನಲ್ಲಿ ಪಡೆದಿದ್ದ ಸಾಲ ಸುಸ್ತಿಯಾಗಿತ್ತು. ಅಲ್ಲದೆ ಪತ್ನಿ ಹೆಸರಿನಲ್ಲಿ ವಿವಿಧ ಸ್ವಯಂ ಸಹಾಯ ಸಂಘಗಳಲ್ಲಿ ಸಾಲ ಪಡೆದಿದ್ದರು. ಜೊತೆಗೆ ಜಮೀನು ಪತ್ರ ನೀಡಿ ಖಾಸಗಿಯವರಿಂದ ಸಾಲ ಪಡೆದಿದ್ದರು ಎನ್ನಲಾಗಿದೆ. ಕಳೆದ ರಾತ್ರಿ ಕೂಡ ಹೆಂಡತಿಯೊಂದಿಗೆ ಸಾಲ ಹೆಚ್ಚಾಗಿರುವ ಬಗ್ಗೆ ಚರ್ಚಿಸಿದ್ದು, ಶುಕ್ರವಾರ ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಸ್ಥಳಕ್ಕೆ ತಹಸೀಲ್ದಾರ್ ರವಿಶಂಕರ್ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ದಾಖಲಾತಿಗಳ ಆಧಾರದ ಮೇಲೆ 5 ಲಕ್ಷದವರೆವಿಗೂ ಪರಿಹಾರ ಕೊಡಿಸುವುದಾಗಿ ತಿಳಿಸಿದ್ದಾರೆ. ನಂತರ ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಯಿತು. ಬೇಗೂರು ಪೊಲೀಸ್ ಠಾಣೆಯ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಭಾಸ್ಕರ್, ಎ.ಎಸ್.ಐ ಶಿವಶಂಕರಪ್ಪ, ಕಾಂಗ್ರೆಸ್ ಮುಖಂಡ ನಾಗರಾಜು, ಬಿಎಂ ಮುನಿರಾಜು, ಸುರೇಶ್, ಬಸವರಾಜು ಮತ್ತಿತರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಶಾಸಕರಿಂದ ಕೋಡಿಮೋಳೆ ಗ್ರಾಮದ ಕೆರೆ ಏರಿ ಪರಿಶೀಲನೆ



ಕೆರೆಯಿಂದ ಅಕ್ಕಪಕ್ಕದ ಜಮೀನುಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿನೀಡಿ ಪರಿಶೀಲಿಸಿದರು.

ಚಾಮರಾಜನಗರ, ಜ.6– ತಾಲೂಕಿನ ಕೋಡಿಮೋಳೆ ಗ್ರಾಮಕ್ಕೆ ಹೊಂದಿಕೊಂಡಂತಿರುವ ಕೆರೆಯಿಂದ ಜಿನುಗುತ್ತಿರುವ ನೀರಿನಿಂದ ಅಕ್ಕಪಕ್ಕದ ಜಮೀನುಗಳು ತೇವಾಂಶಗೊಂಡು ಬೆಳೆಗಳು ನಾಶವಾಗುತ್ತಿದೆ. ಇದಕ್ಕೆ ಸೂಕ್ತ ಪರಿಹಾರ ಕೊಡಿಸುವಂತೆ ರೈತರ ಮನವಿ ಮೇರೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ರೈತರ ಸಮಸ್ಯೆಯನ್ನು ಆಲಿಸಿದರು.

ಕೋಡಿಮೋಳೆ ಸೇರಿದಂತೆ ರಾಮಸಮುದ್ರ, ಕೋಡಿಮೋಳೆ ಬಸವನಪುರ ಗ್ರಾಮದ ಸುತ್ತಮುತ್ತ ಭತ್ತ, ರಾಗಿ, ಮುಸುಕಿನ ಜೋಳ ಸೇರಿದಂತೆ ಇತರೆ ಬೆಳೆ ಬೆಳೆಯುತ್ತಿದ್ದು, ಸಮೀಪದ ಕೋಡಿಮೋಳೆ ಕೆರೆಯ ನೀರು ಜಿನುಗಿ ಅದರ ತೇವಾಂಶ ಜಮೀನಿನಲ್ಲಿ ಹೆಚ್ಚಾಗಿದ್ದು, ಇದರಿಂದ ಬೆಳೆನಾಶ ಹಂತದಲ್ಲಿವೆ. ಸಾಲ–ಸೋಲ ಮಾಡಿ, ಬೆಳೆದ ಬೆಳೆಯು ಕೈ ಸೇರದಂತಾಗುವ ಆತಂಕವಿದೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವಂತೆ ರೈತರು ಶಾಸಕರಲ್ಲಿ ತಮ್ಮ ಅಳಲು ತೋಡಿಕೊಂಡರು.

ಶಾಸಕರು ಪ್ರತಿಕ್ರಿಯಿಸಿ ಕೆರೆಯ ತೇವಾಂಶದ ನೀರು ಜಮೀನಿನಲ್ಲಿ ನಿಲ್ಲದಂತೆ ಒಂದೂವರೆ ಕಿಮೀ ಉದ್ದದ ಮೋರಿ ನಿರ್ಮಿಸಲು ವೆಚ್ಚದ ಅಂದಾಜುಪಟ್ಟಿ ತಯಾರಿಸುವಂತೆ ಸ್ಥಳದಲ್ಲಿ ಹಾಜರಿದ್ದ ಸಣ್ಣ ನೀರಾವರಿ ಇಲಾಖೆ ಎಇಇ ಇಂಜಿನಿಯರ್ ಈಶ್ವರ್ ಅವರಿಗೆ ಸೂಚಿಸಿದರು. ಕಾವೇರಿ ನೀರಾವರಿ ನಿಗಮದ ಎಇಇ ಮಂಜುನಾಥ್, ಜಿಪಂ ಎಂಜಿನಿಯರ್ ನಟರಾಜು, ಕ್ಷೇತ್ರ ನಿರೀಕ್ಷಕ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಚಿಕ್ಕಮಹಾದೇವು, ಮುಖಂಡರಾದ ಕೋಡಿಮೋಳೆ ಗೋವಿಂದಶೆಟ್ಟಿ ಸೇರಿದಂತೆ ಆ ಭಾಗದ ರೈತರು ಹಾಜರಿದ್ದರು.

ರಸ್ತೆ ಕಾಮಗಾರಿ ಪರಿಶೀಲನೆ: ಇದೇ ವೇಳೆ ಪಿಎಂಜಿಎಸ್‌ವೈ ಯೋಜನೆಯಡಿ ಸಂತೇಮರಹಳ್ಳಿ ಮುಖ್ಯರಸ್ತೆಯಿಂದ ಕಾಡಹಳ್ಳಿ– ಸಪ್ಪಯ್ಯನಪುರ ನಡೆಯುತ್ತಿರುವ ರಸ್ತೆ ಕಾಮಗಾರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಪರಿಶೀಲಿಸಿದರು. ಸಂಬಂಧಪಟ್ಟ ಕಾಮಗಾರಿ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದು ಸೂಚಿಸಿದರು.

ಬೂತ್ ವಿಜಯ ಅಭಿಯಾನ ಯಶಸ್ವಿಗೆ ಶ್ರಮಿಸಿ

ನಗರದಲ್ಲಿ ಬೂತ್ ವಿಜಯ ಅಭಿಯಾನಕ್ಕೆ ವಿ.ಶ್ರೀನಿವಾಸಪ್ರಸಾದ್ ಚಾಲನೆ



ಚಾಮರಾಜನಗರ, ಜ.6– ಬಿಜೆಪಿಯು ಜ. 2 ರಿಂದ ಆರಂಭ ಮಾಡಿರುವ ಬೂತ್ ವಿಜಯ ಅಭಿಯಾನ ಯಶ್ವಸಿಗೊಳಿಸಲು ಪಕ್ಷದ ಕಾರ್ಯಕರ್ತರು, ಮುಖಂಡರು ಶ್ರಮಿಸಬೇಕು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಮನವಿ ಮಾಡಿದರು.

ನಗರದ ಗಾಳೀಪುರ ಬಡಾವಣೆಯ 2ನೇ ವಾರ್ಡ್‌ನಲ್ಲಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಬೂತ್ ವಿಜಯ ಅಭಿಯಾನಕ್ಕೆ ವಾರ್ಡ್‌ನ ಸದಸ್ಯರ ಮನೆ ಮುಂಭಾಗದಲ್ಲಿ ಪಕ್ಷದ ಬಾವುಟ ಕಟ್ಟಿ ಹಾರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಬಿಜೆಪಿ ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸುವ ಸಲುವಾಗಿ ಪಕ್ಷದ ವತಿಯಿಂದ ರಾಜ್ಯಾದ್ಯಂತ ಎಲ್ಲ ಬೂತ್‌ಗಳಲ್ಲಿ ವಿಜಯ ಅಭಿಯಾನ ನಡೆಯುತ್ತಿದೆ. ಈ ಅಭಿಯಾನದಲ್ಲಿ ಪಕ್ಷದ ಧ್ವಜವನ್ನು ಕಾರ್ಯಕರ್ತರ ಮನೆಗೆ ಕಟ್ಟಿ ಹಾರಿಸಲಾಗುತ್ತದೆ. ಇದು ಬಹಳ ಸಂತಸವಾಗಿದೆ. ಇದೀಗ ಚಾಮರಾಜನಗರದ 2ನೇ ವಾರ್ಡ್‌ನಲ್ಲಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಈ ಅಭಿಯಾನವು ಯಶಸ್ವಿಯಾಗಲಿ ಎಂದು ಆಶಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಜಾರಿ ಮಾಡಿದೆ. ಬಿಜೆಪಿ ಸರ್ಕಾರದ ಸಾಧನೆಗಳನ್ನು ಮನೆಮನೆಗೆ ತಲುಪಿಸಬೇಕು ಆ ಮೂಲಕ ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಕಾಡಾಧ್ಯಕ್ಷ ಜಿ.ನಿಜಗುಣರಾಜು, ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿಗಳಾದ ನಾಗಶ್ರೀ ಪ್ರತಾಪ್, ನಾರಾಯಣಪ್ರಸಾದ್, ಜಿಪಂ ಮಾಜಿ ಸದಸ್ಯ ಎ.ಆರ್. ಬಾಲರಾಜ್, ಮುಖಂಡ ಕೂಡ್ಲೂರು ಹನುಮಂತಶೆಟ್ಟಿ, ಡಾ. ಎ.ಆರ್. ಬಾಬು, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಮಹದೇವನಾಯಕ, ಯುವ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ವಾರ್ಡ್‌ನ ಸದಸ್ಯೆ ಗೌರಿ ಸೆಂದಿಲ್ ಕುಮಾರ್, ಬೂತ್ ಅಧ್ಯಕ್ಷ ನಾಗೇಂದ್ರ, ಕಾರ್ಯದರ್ಶಿ ಕಾರ್ತಿಕ್, ಟೌನ್ ಪ್ರಧಾನ ಕಾರ್ಯದರ್ಶಿ ಶಿವು ರಾಮಸಮುದ್ರ ಮುಖಂಡರಾದ ಮಾಂಬಳ್ಳಿ ನಂಜುಂಡಸ್ವಾಮಿ, ಸೆಂದಿಲ್ ಕುಮಾರ್, ಪಳನಿ, ವೀರಾಜ್, ವೇಣುಗೋಪಾಲ್, ಅಗರರಾಜು, ಬಂಗಾರು, ಪ್ರಸನ್ನ, ಮಹೇಶ್ ಇತರರು ಹಾಜರಿದ್ದರು.

ಜ.14ರಂದು ಬಾಕಿ ವಿಕಲಚೇತನ ಫಲಾನುಭವಿಗಳಿಗೆ ಉಚಿತ ಸಾಧನ, ಸಲಕರಣೆ ವಿತರಣೆ

ಚಾಮರಾಜನಗರ, ಜ.6– ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿನ ಬಾಕಿ ಉಳಿದ ವಿಶೇಷಚೇತನ ಫಲಾನುಭವಿಗಳಿಗೆ ಉಚಿತ ಸಾಧನ, ಸಲಕರಣೆಗಳನ್ನು ಜ.14ರಂದು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವಿತರಿಸಲಾಗುವುದೆಂದು ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಜಿಲ್ಲೆಯ ವಿಕಲಚೇತನರಿಗೆ ಅಗತ್ಯವುಳ್ಳ ಸಾಧನ, ಸಲಕರಣೆಗಳನ್ನು ಉಚಿತವಾಗಿ ವಿತರಿಸುವ ಸಂಬಂಧ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಪೂರ್ವಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರದ ವಿಶೇಷ ಆಡಿಪ್ ಯೋಜನೆಯಡಿ ಡಿ.24 ರಂದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ, ವಿಕಲಾಂಗ ವ್ಯಕ್ತಿಗಳ ಸಬಲೀಕರಣ (ದಿವ್ಯಾಂಗಜನ್) ಇಲಾಖೆ, ಆರ್ಟಿಫಿಶಿಯಲ್ ಲಿಂಬ್ಸ್ ಮ್ಯಾನುಫ್ಯಾಕ್ಚರಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ (ಆಲಿಂಕೋ), ಜಿಲ್ಲಾಡಳಿತ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಿ ವಿಶೇಷಚೇತನ ಫಲಾನುಭವಿಗಳಿಗೆ ಸಾಧನ, ಸಲಕರಣೆಗಳನ್ನು ವಿತರಿಸಲಾಗಿತ್ತು. ಒಟ್ಟು 1693 ವಿಕಲಚೇತನರಲ್ಲಿ ಬಾಕಿ ಉಳಿದ 197 ಫಲಾನುಭವಿಗಳಿಗೆ ಜನವರಿ 14ರಂದು ವಿತರಣೆ ಮಾಡಲಾಗುವುದು ಎಂದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಉಪ ವಿಭಾಗಾಧಿಕಾರಿ ಗೀತಾ ಹುಡೇದ, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ದೀಪಾ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗೀತಾಲಕ್ಷ್ಮೀ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ವಿಶ್ವೇಶ್ವರಯ್ಯ, ಇತರರು ಸಭೆಯಲ್ಲಿ ಹಾಜರಿದ್ದರು.

ಸಾರ್ವಜನಿಕವಾಗಿ ಪ್ರಾಣಿ ಬಲಿ ಬೇಡ, ನ್ಯಾಯಾಲಯದ ಆದೇಶ ಪಾಲಿಸಿ

ಚಾಮರಾಜನಗರ, ಜ.6– ಜಿಲ್ಲಾ ವ್ಯಾಪ್ತಿಯಲ್ಲಿ ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆ ಸೇರಿದಂತೆ ಯಾವುದೇ ಜಾತ್ರೆ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಸಾರ್ವಜನಿಕವಾಗಿ ಯಾವುದೇ ಪ್ರಾಣಿಯನ್ನು ದೇವರ ಹೆಸರಿನಲ್ಲಿ ಬಲಿ ಕೊಡದೇ ನ್ಯಾಯಾಲಯದ ಆದೇಶವನ್ನು ಪಾಲಿಸಿ ಎಂದು ಜಿಲ್ಲಾಧಿಕಾರಿ ಡಿ. ಎಸ್. ರಮೇಶ್ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ, ಪಶು ಪ್ರಾಣಿ ಬಲಿ ನಿರ್ಮೂಲನ ಜಾಗೃತಿ ಮಹಾ ಸಂಘ ಹಮ್ಮಿಕೊಂಡಿದ್ದ ಪ್ರಾಣಿ ಬಲಿ ತಡೆ ಜಾಗೃತಿಗಾಗಿ ಅಹಿಂಸಾ–ಪ್ರಾಣಿದಯಾ– ಆಧ್ಯಾತ್ಮ ಸಂದೇಶ ಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.



ಜಿಲ್ಲೆಯ ಜನರು ಬುದ್ದಿವಂತರು, ಮಂಟೇಸ್ವಾಮಿ ಆಗಲೀ, ಸಿದ್ದಪ್ಪಾಜಿ ಆಗಲಿ ಅವರು ಸತ್ಯ ಮತ್ತು ಸಸ್ಯಹಾರಿ ದೇವರೆಂದು ತಿಳಿದಿದ್ದೇನೆ, ಇಲ್ಲಿನ ಕೆಲ ಪದ್ಧತಿ ಇರಬಹುದು ಅದನ್ನು ನಿಮ್ಮ ನಿಮ್ಮ ಮನೆಗಳಲ್ಲಿ ಮಾಡಿ ನಿಮ್ಮ ಆಹಾರ ಪದ್ಧತಿಗೆ ಯಾವುದೇ ಅಡ್ಡಿ ಇಲ್ಲ, ದೇವರ ಹೆಸರಿನಲ್ಲಿ, ದೇವಸ್ಥಾನ ಆವರಣದಲ್ಲಿ, ದೇವಸ್ಥಾನದ ಸುತ್ತ ಮುತ್ತ ಬಹಿರಂಗವಾಗಿ ಪ್ರಾಣಿ ಬಲಿ ಕೊಡಬೇಡಿ ಎಂದು ಮನವಿ ಮಾಡಿದರು.

ಈಗಾಗಲೇ ಜಿಲ್ಲಾಡಳಿತ ಎಲ್ಲಾ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡಿದೆ, ಆದ್ದರಿಂದ ಜಿಲ್ಲಾಡಳಿತದ ಜೊತೆ ಕೈಜೋಡಿಸಿ, ಸಹಕರಿಸುವುದರ ಜೊತೆಗೆ ನ್ಯಾಯಾಲದ ಆದೇಶಗಳನ್ನು ಪಾಲಿಸಿ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಕುಮಾರ್ ಮಾತನಾಡಿ, ನ್ಯಾಯಾಲದ ಆದೇಶಕ್ಕೆ ಬೆಲೆ ಕೊಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಆ ಮೂಲಕ ಶಾಂತಿಯುತವಾಗಿ ಅಹಿಂಸಾತ್ಮಕವಾಗಿ, ಸಾರ್ವಜನಿಕವಾಗಿ ಯಾವುದೇ ಪ್ರಾಣಿ ಬಲಿ ಕೊಡದೇ ಜಾತ್ರೆ, ಹಬ್ಬಗಳನ್ನು ಆಚರಿಸುವಂತೆ ತಿಳಿಸಿದರು.

ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ, ಪಶು ಪ್ರಾಣಿ ಬಲಿ ನಿರ್ಮೂಲನ ಜಾಗೃತಿ ಮಹಾ ಸಂಘದ ಅಧ್ಯಕ್ಷರಾದ ದಯಾನಂದಸ್ವಾಮಿ ಮಾತನಾಡಿ, ಕರ್ನಾಟಕ ಹೈಕೋರ್ಟ್‌ನ ಆದೇಶದಂತೆ ಕರ್ನಾಟಕ ಸರ್ಕಾರದ ಸಹಯೋಗದೊಡನೆ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯು ಚಿಕ್ಕಲೂರಿನ ಸಿದ್ದಪ್ಪಾಜಿ ಜಾತ್ರೆ, ಬಿಳಿಗಿರಿ ರಂಗನ ಬೆಟ್ಟದ ಶ್ರೀ ರಂಗನಾಥಸ್ವಾಮಿ ಜಾತ್ರೆ ಹಾಗೂ ವಡಗೆರೆ ಶ್ರೀ ಆಂಜನೇಯ ಸ್ವಾಮಿ, ಕುರುಬನ ಕಟ್ಟೆ ಶ್ರೀ ಮಂಟೇಸ್ವಾಮಿ ಮತ್ತು ಶಿಂಶಾ ಮಾರಮ್ಮ ದೇವಾಲಯಗಳು ಮತ್ತು ಅವುಗಳ ಸುತ್ತಮುತ್ತಲಿನ ಪರಿಸರಗಳಲ್ಲಿ ಹಾಗೂ ಇನ್ನಿತರ ಧಾರ್ಮಿಕ ಸ್ಥಳಗಳಲ್ಲಿ ನಡೆಯಲಿರುವ ಪ್ರಾಣಿಗಳ ಬಲಿ ಕೈಬಿಟ್ಟು ಅಹಿಂಸಾತ್ಮಕವಾಗಿ ಸಾತ್ವಿಕ ಪದಾರ್ಥಗಳಿಂದ ಪೂಜೆ ಸಲ್ಲಿಸಲು,ಧಾರ್ಮಿಕ ಸೇವಾ ಕೈಂಕರ್ಯಗಳನ್ನು ಕೈಗೊಳ್ಳುವಂತೆ ಭಕ್ತರಲ್ಲಿ ಜಾಗೃತಿ ಮೂಡಿಸಲು ಈ ಅಹಿಂಸ– ಪ್ರಾಣಿದಯಾ– ಆಧ್ಯಾತ್ಮ ಸಂದೇಶ ಯಾತ್ರೆಯನ್ನು ಕೈಗೊಳ್ಳಲಾಗಿದೆ. ಎಂದರು,

ನಗರದ ಬ್ರಹ್ಮಾಕುಮಾರಿ ಈಶ್ವರಿ ವಿಶ್ವವಿದ್ಯಾ ನಿಲಯದ ಬಿ.ಕೆ. ಧಾನೇಶ್ವರೀಜಿ ಮಾತನಾಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜೈನ ಸಂಘದ ಅಧ್ಯಕ್ಷ ನಿರ್ಮಲ್ ಕುಮಾರ್, ಮಾಜಿ ಅಧ್ಯಕ್ಷ ನಾಗರತ್ನರಾಜ್, ಲಯನ್ಸ್ ಅಧ್ಯಕ್ಷ ಪ್ರಕಾಶ್ ಜೈನ್, ಕನ್ಹೈಯಲಾಲ್, ಮಹೇಶ್, ಸಾಧುಲಾಲ್ ಜೈನ್, ಮುಖೇಶ್‌ಕುಮಾರ್ ಜೈನ್, ರಮೇಶ್, ಆರ್. ವೆಂಕಟೇಶ್, ಬಸವ ವೇದಿಕೆ ಪ್ರಸಾದ್, ಓಂ ಶಾಂತಿ ನ್ಯೂಸ್ ಸರ್ವೀಸ್‌ನ ಬಿ.ಕೆ. ಆರಾಧ್ಯ ಇತರರು ಇದ್ದರು.

ಶ್ರೀ ಅಯ್ಯಪ್ಪಸ್ವಾಮಿ ಅದ್ದೂರಿ ಜಾತ್ರೆ, ಕೊಂಡ ಮಹೋತ್ಸವ

ಗುಂಡ್ಲುಪೇಟೆ, ಜ.6– ಪಟ್ಟಣದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ವತಿಯಿಂದ ಏರ್ಪಡಿಸಿದ್ದ ಶ್ರೀ ಅಯ್ಯಪ್ಪಸ್ವಾಮಿಯ ಜಾತ್ರೆ ಮತ್ತು ಕೊಂಡ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಅಯ್ಯಪ್ಪ ದೇವಾಲಯದ ಮುಂಭಾಗದಲ್ಲಿ ಧ್ವಜಾರೋಹಣ, ಶ್ರೀ ಗಣಪತಿ ಹೋಮ ಮತ್ತು ಶ್ರೀ ಅಯ್ಯಪ್ಪಸ್ವಾಮಿ ಬೆಳ್ಳಿ ವಿಗ್ರಹದ ಮೆರವಣಿಗೆ ಮತ್ತು ಕೊಂಡ ಮಹೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಜಾತ್ರೆ ಮತ್ತು ಕೊಂಡ ಮಹೋತ್ಸವದ ಅಂಗವಾಗಿ ದೇವಾಲಯದ ಮುಂಭಾಗದಲ್ಲಿರುವ ಸ್ಥಳದಲ್ಲಿ ನಿರ್ಮಿಸಲಾಗಿದ್ದ ಬಾಳೆದಿಂಡಿನ ಅಲಂಕೃತ ಮಂಟಪದಲ್ಲಿ ಅಯ್ಯಪ್ಪಸ್ವಾಮಿ ಫೋಟೋಗೆ ಪೂಜೆ ಮಾಡಲಾಯಿತು. ಇದಲ್ಲದೇ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿರುವ ಶ್ರೀ ಗಣಪತಿ, ಅಯ್ಯಪ್ಪಸ್ವಾಮಿ ಮತ್ತು ಸುಬ್ರಹ್ಮಣ್ಯ ಸ್ವಾಮಿಯ ಮೂಲ ಮೂರ್ತಿಗೆ ಹಾಗೂ ದೇವಾಲಯಕ್ಕೆ ವಿದ್ಯುತ್ ದೀಪಾಲಂಕಾರ ಮತ್ತು ತಳಿರು ತೋರಣದಿಂದ ಅಲಂಕರಿಸಲಾಗಿತ್ತು. ನಂತರ ಅಯ್ಯಪ್ಪಸ್ವಾಮಿಯ ಬೆಳ್ಳಿ ವಿಗ್ರಹವನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ನಾಳೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಜನವರಿ 8ರಂದು ತುರ್ತು ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ರಾಮಸಮುದ್ರ, ಹೌಸಿಂಗ್ ಬೋರ್ಡ್, ಕೋರ್ಟ್ ರಸ್ತೆ, ಬಿ. ರಾಚಯ್ಯ ಜೋಡಿ ರಸ್ತೆ, ಕರಿನಂಜನಪುರ, ಚನ್ನಿಪುರದ ಮೋಳೆ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಗ್ರಾಹಕರು ಸಹಕರಿಸಬೇಕೆಂದು ಸೆಸ್ಕ್‌ನ ಕಾರ್ಯ ಮತ್ತು ಪಾಲನ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೈವ ಕೋಲದ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ವ್ಯಕ್ತಿ ಸಾವು...!?

'ಕಾಂತಾರ' ಚಿತ್ರದ ಸನ್ನಿವೇಶ ಕಣ್ಣಿಗೆ ಕಟ್ಟಿಕೊಂಡಿರುವ ಜನರಲ್ಲಿ ಭಾರೀ ಅಚ್ಚರಿ... ಆತಂಕ...

ಉಡುಪಿ, ಜ.6–ದೈವಕೋಲ ವಿಚಾರದಲ್ಲಿ 'ಕಾಂತಾರ' ಚಿತ್ರದಲ್ಲಿ ಬರುವ ಸನ್ನಿವೇಶದಂತೆಯೇ ಉಡುಪಿ ಜಿಲ್ಲೆಯ ಪಡುಬಿದಿರೆ ಬಳಿಯ ದೈವ ಸನ್ನಿಧಿಯಲ್ಲಿ ನಿಜವಾಗಿಯೂ ನಡೆದಿದ್ದು ಸಂಪ್ರದಾಯದಂತೆ ನಡೆಯುತ್ತಿದ್ದ ದೈವಕೋಲದ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದ ವ್ಯಕ್ತಿ ಸಾವನ್ನಪ್ಪಿದ್ದಾನೆ.

ವಿವರ: ಪಡುಬಿದಿರೆಯ ಪಡಹಿತ್ಲುವಿನಲ್ಲಿರುವ ಜಾರಾಂದಾಯ ದೈವ ಸನ್ನಿಧಿಯಲ್ಲಿ ನೂರಾರು ವರ್ಷಗಳಿಂದ ದೈವಕೋಲ ನಡೆಯುತ್ತಾ ಬಂದಿದೆ. ಆದರೆ ಪಡುಹಿತ್ಲು ಸೇವಾ ಸಮಿತಿ ರಚಿಸಿಕೊಂಡು, ಈ ಸಮಿತಿ ವತಿಯಿಂದ ಕಳೆದ 15 ವರ್ಷಗಳಿಂದ ದೈವಕೋಲ ನಡೆಸಲಾಗುತ್ತಿದೆ.



ಈ ಮಧ್ಯೆ ಜಯಪೂಜಾರಿ ಎಂಬಾತ 9 ಜನರೊಂದಿಗೆ ಸೇರಿ ಟ್ರಸ್ಟ್‌ವೊಂದನ್ನು ರಚಿಸಿಕೊಂಡು ಜ.7ರಂದು ಪಡುಹಿತ್ಲುವಿನಲ್ಲಿ ದೈವಕೋಲ ನಡೆಸಲು ದಿನಾಂಕ ನಿಗದಿಪಡಿಸಿದ್ದಾನೆ. ಆದರೆ ಟ್ರಸ್ಟ್ ವತಿಯಿಂದ ದೈವಕೋಲ ನಡೆಸುವುದಕ್ಕೆ ಕಳೆದ 15 ವರ್ಷದಿಂದ ಕೋಲಾ ನಡೆಸುತ್ತಿರುವ ಸಮಿತಿ ವಿರೋಧ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಮೆಟ್ಟಿಲು ಹತ್ತಿದ ಜಯಪೂಜಾರಿ ಜ.7ರಂದು ಟ್ರಸ್ಟ್ ವತಿಯಿಂದ ನಡೆಯುವ ದೈವಕೋಲಕ್ಕೆ ಪಡುಹಿತ್ಲು ಸೇವಾ ಸಮಿತಿಯವರು ಅಡ್ಡಿಪಡಿಸಬಾರದು ಎಂದು ಡಿ.23ರಂದು ತಡೆಯಾಜ್ಞೆ ತಂದಿದ್ದಾನೆ. ತಮಗೆ ತಡೆಯಾಜ್ಞೆ ದೊರೆತ ಹಿನ್ನೆಲೆಯಲ್ಲಿ ಅಂದು ಟ್ರಸ್ಟ್‌ನವರು ಸಂಭ್ರಮಾಚರಣೆಯನ್ನೂ ಮಾಡಿದ್ದಾರೆ. ಆದರೆ ಮರುದಿನ ಡಿ.24ರಂದು ಸಮೀಪದ ಕೊಡಮತ್ತಾಯ ಎಂಬಲ್ಲಿ ನಡೆದ ದೈವಕೋಲಕ್ಕೆ ತೆರಳಿದ್ದ ಜಯಪೂಜಾರಿ ಕೋಲದಲ್ಲೇ ಕುಸಿದು ಬಿದ್ದು ಸಾವನ್ನಪ್ಪಿದ್ದಾನೆ.

ಕಾಂತಾರ ಸನ್ನಿವೇಶ: ಈ ಚಿತ್ರದಲ್ಲಿ ಒಂದು ಕುಟುಂಬದವರು ದೈವದ ಆಜ್ಞೆಯಂತೆ ಗ್ರಾಮಸ್ಥರಿಗಾಗಿ ಒಂದಷ್ಟು ಜಾಗವನ್ನು ಮೀಸಲಿಟ್ಟಿರುತ್ತಾರೆ. ಆದರೆ ಆ ಕುಟುಂಬಕ್ಕೆ ಸೇರಿದ ವ್ಯಕ್ತಿ ಮುಂದೆ ಆ ಜಾಗ ತನಗೆ ಸೇರಬೇಕು ಎಂದು ತಗಾದೆ ತೆಗೆಯುತ್ತಾನೆ. ದೈವಕೋಲ ನಡೆದಾಗ ಸದರಿ ಜಾಗ ಗ್ರಾಮಸ್ಥರಿಗೆ ಸೇರಿದ್ದು ಎಂದು ದೈವ ನುಡಿಯುತ್ತದೆ. ಆದರೆ ಆ ವ್ಯಕ್ತಿಯು ಈ ಜಾಗದ ಬಗ್ಗೆ ತಾನು ಕೋರ್ಟ್‌ಗೆ ಹೋಗುವುದಾಗಿ ಹೇಳಿದಾಗ ದೈವವು ಕೋರ್ಟ್ ಮೆಟ್ಟಿಲಲ್ಲೇ ನಾನು ತೀರ್ಪು ನೀಡುತ್ತೇನೆ ಎಂದು ತಿಳಿಸುತ್ತದೆ. ಆತ ಕೋರ್ಟ್ ಮೆಟ್ಟಿಲು ಹತ್ತುವಾಗಲೇ ರಕ್ತ ಕಾರಿ ಸಾವನ್ನಪ್ಪುತ್ತಾನೆ.

ಈಗ ಪಡುಹಿತ್ಲುವಿನಲ್ಲಿ ನಡೆದಿರುವ ಘಟನೆಯಲ್ಲಿ ಮೃತಪಟ್ಟಿರುವ ಜಯಪೂಜಾರಿ ಕೂಡ ಕಾಂತಾರ ಚಿತ್ರದಲ್ಲಿ ಗ್ರಾಮಸ್ಥರಿಗಾಗಿ ಒಂದಷ್ಟು ಜಾಗ ನೀಡಿದ ಕುಟುಂಬದ ವ್ಯಕ್ತಿಯಂತೆ, ಕಳೆದ 15 ವರ್ಷದಿಂದ ದೈವಕೋಲ ನಡೆಸುತ್ತಿರುವ ಪಡುಹಿತ್ಲು ಸೇವಾ ಸಮಿತಿಯ ಒಂದು ಕುಟುಂಬದ ವ್ಯಕ್ತಿಯಾಗಿದ್ದಾನೆ. ಚಿತ್ರದಲ್ಲಿ ಸದರಿ ಜಾಗ ತನಗೆ ಸೇರಿದ್ದು ಎಂದು ಓರ್ವ ಕೋರ್ಟ್ ಮೆಟ್ಟಿಲು ಹತ್ತಿದಂತೆಯೇ ಪಡುಹಿತ್ಲುವಿನಲ್ಲಿ ಕೂಡ ಜಯಪೂಜಾರಿ ದೈವಕೋಲವನ್ನು ತಾನು ರಚಿಸಿಕೊಂಡಿರುವ ಟ್ರಸ್ಟ್ ವತಿಯಿಂದಲೇ ನಡೆಯಬೇಕು. ಆ ಕೋಲಕ್ಕೆ ಸಮಿತಿಯವರು ಅಡ್ಡಿಪಡಿಸಬಾರದು ಎಂದು ಕೋರ್ಟ್ ಮೆಟ್ಟಿಲು ಹತ್ತುತ್ತಾನೆ. ಚಿತ್ರದಲ್ಲಿ ಬರುವ ಸನ್ನಿವೇಶದಲ್ಲಿ ಪಾತ್ರಧಾರಿ ಕೋರ್ಟ್ ಮೆಟ್ಟಿಲು ಹತ್ತುವಾಗಲೇ ರಕ್ತ ಕಾರಿ ಸತ್ತರೆ, ಪಡುಹಿತ್ಲುವಿನಲ್ಲಿ ಕೋರ್ಟ್ ತೀರ್ಪು ಬಂದ ಮರುದಿನ ಸಮೀಪದ ಒಂದು ಸ್ಥಳದಲ್ಲಿ ನಡೆದ ದೈವಕೋಲದಲ್ಲೇ ಜಯಪೂಜಾರಿ ಸಾವನ್ನಪ್ಪುತ್ತಾನೆ.

ಖ್ಯಾತ ರಂಗ ನಿರ್ದೇಶಕ ಗೋಪಾಲಕೃಷ್ಣ ನಾಯರಿ ನಿಧನ

ಮಂಗಳೂರು, ಜ.6– ಕನ್ನಡ ರಂಗಭೂಮಿಯ ಹಿರಿಯ ರಂಗ ನಿರ್ದೇಶಕ ಗೋಪಾಲಕೃಷ್ಣ ನಾಯರಿ (68 ವರ್ಷ) ಅವರು ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ ಎಂದು ತಿಳಿದುಬಂದಿದೆ. ಪತ್ನಿ ಸುಲೋಚನ, ಮಗಳು ಉದಾತ್ತ ಹಾಗು ಮೊಮ್ಮಗಳು ಮತ್ತು ಅಳಿಯ ಹಾಗೂ ಅಪಾರ ಶಿಷ್ಯವರ್ಗವನ್ನೂ ಅಗಲಿದ್ದಾರೆ. ಉಡುಪಿ ಜಿಲ್ಲೆಯ ಸಾಲಿಗ್ರಾಮದ ಕಾರ್ಕಡದಲ್ಲಿ ಅವರ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಅವರ ಕುಟುಂಬದ ಆಪ್ತ ಮೂಲಗಳು ತಿಳಿಸಿವೆ ನಾಯರಿ ಅವರು ಎನ್‌ಎಸ್‌ಡಿಯಲ್ಲಿ ತರಬೇತಿ ಪಡೆದು ಮರಳಿದ ಬಳಿಕ ನಾಗೇಶ್ ನಿರ್ದೇಶನದ ತಾಮ್ರಪತ್ರ ನಾಟಕದಲ್ಲಿ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದರು. ನಂತರ ಗಂಗಾಧರ ಸ್ವಾಮಿ ನಿರ್ದೇಶನದಲ್ಲಿ ಸಮುದಾಯದಲ್ಲಿ ಕೊಂದು ಕೂಗಿತ್ತು ನೋಡಾ ನಾಟಕದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಪಂಚರತ್ನ ಯಾತ್ರೆಗೆ ರಾಜ್ಯದಾದ್ಯಂತ ಅಭೂತಪೂರ್ವ ಜನ ಬೆಂಬಲ



● ಶಾಸಕ ಜಿ.ಟಿ.ದೇವೇಗೌಡರ ಉತ್ಸಾಹ ● ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ರಚನೆಗೆ ಜನತೆ ನಿರ್ಧಾರ ● ಮಾಧ್ಯಮಗಳ ವರದಿ ಸುಳ್ಳಾಗಿಸುವ ಜನತೆಯ ತೀರ್ಪು: ಆಶಯ ● ಮಾರ್ಚ್‌ನಲ್ಲಿ ಮೈಸೂರಲ್ಲಿ ಪಂಚರತ್ನ ಯಾತ್ರೆ ಕಾರ್ಯಕ್ರಮ ● ಜ.15ರ ನಂತರ ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಸಂಘಟನಾ ಕಾರ್ಯಾರಂಭ

ಮೈಸೂರು, ಜ.6(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಗಾಗಿ ಜೆಡಿಎಸ್ ಭರ್ಜರಿ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪಂಚರತ್ನ ಯಾತ್ರೆಗೆ ನಿರೀಕ್ಷೆಗೂ ಮೀರಿದ ಜನ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜೆಡಿಎಸ್ ಎಲ್ಲಿದೆ ಎಂದು ಕೆಲವರು ಪ್ರಶ್ನೆ ಮಾಡಿದ್ದರು. ಆದರೆ, ಅವರಿಗೆಲ್ಲಾ ಪಂಚರತ್ನ ಯಾತ್ರೆಯಿಂದ ಉತ್ತರ ಸಿಗುತ್ತಿದೆ. ಹೆಚ್.ಡಿ.ಕುಮಾರಸ್ವಾಮಿ ಪಕ್ಷ ಸಂಘಟನೆಗಾಗಿ ಪಂಚರತ್ನಯಾತ್ರೆಯ ಮೂಲಕ ಪಣ ತೊಟ್ಟಿದ್ದಾರೆ. ಈಗಾಗಲೇ 45 ಕ್ಷೇತ್ರಗಳಲ್ಲಿ ಯಾತ್ರೆ ನಡೆದಿದೆ. ಎಲ್ಲಾ ಕ್ಷೇತ್ರಗಳಲ್ಲೂ ಭಾರೀ ಪ್ರಮಾಣದ ಬೆಂಬಲ ದೊರೆಯುತ್ತಿದೆ. ಕುಮಾರಸ್ವಾಮಿ ದಿನದಲ್ಲಿ 20 ಗಂಟೆ ಈಗ ಕೆಲಸ ಮಾಡುತ್ತಿದ್ದಾರೆ. ಮಧ್ಯರಾತ್ರಿ 1 ಗಂಟೆವರೆಗೂ ಕಾರ್ಯಕರ್ತರೊಂದಿಗೆ ಬೆರೆಯುತ್ತಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಮಾರ್ಚ್‌ನಲ್ಲಿ ಪಂಚರತ್ನ ಯಾತ್ರೆ ನಡೆಯಲಿದೆ ಎಂದರು.

ರಾಜ್ಯದ ಜನತೆ ಜೆಡಿಎಸ್ ಮೇಲೆ ಅಪಾರ ವಿಶ್ವಾಸ ಇಟ್ಟುಕೊಂಡಿದ್ದಾರೆ. ಎರಡೂ ರಾಷ್ಟ್ರೀಯ ಪಕ್ಷಗಳ ಸರ್ಕಾರವನ್ನು ಕಂಡಿದ್ದಾರೆ. ಜೆಡಿಎಸ್‌ನಿಂದ ಮಾತ್ರ ಪಾರದರ್ಶಕ ಆಡಳಿತ ಸಾಧ್ಯ ಎಂದು ಜನರಿಗೆ ತಿಳಿದಿದೆ. ಅದಕ್ಕಾಗಿ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಲು ಜನ ನಿರ್ಧರಿಸಿದ್ದಾರೆ. ಈಗಾಗಲೇ ಪಂಚರತ್ನ ಯಾತ್ರೆಯಿಂದಾಗಿ ಹಲವು ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ ಭಾರೀ ಬೆಂಬಲ ವ್ಯಕ್ತವಾಗಿದೆ.

ಕೆಲವು ಮಾಧ್ಯಮಗಳಲ್ಲಿ 2023ರ ಚುನಾವಣೆಯಲ್ಲಿ ಜೆಡಿಎಸ್‌ಗೆ 40–45 ಸ್ಥಾನ ಲಭಿಸುತ್ತದೆ ಎಂದು ಸಮೀಕ್ಷಾ ವರದಿ ಪ್ರಕಟವಾಗಿದೆ. ಇನ್ನು 180 ಕ್ಷೇತ್ರಗಳಲ್ಲಿ ಯಾತ್ರೆ ನಡೆಯಬೇಕಾಗಿದೆ. ಹಾಗಾಗಿ ಚುನಾವಣೆ ವೇಳೆಗೆ ಪಕ್ಷಕ್ಕೆ ಇನ್ನಷ್ಟು ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

ನಾನು ಆ ಲೈನ್‌ನಲ್ಲಿ ಇಲ್ಲ

ಸಮ್ಮಿಶ್ರ ಸರ್ಕಾರ ಪತನಗೊಳಿಸಲು ಬಾಂಬೆಗೆ ತೆರಳಿದ್ದ ಶಾಸಕರಿಗೆ ಸ್ಯಾಂಟ್ರೋ ರವಿ ಯುವತಿಯರನ್ನು ಸರಬರಾಜು ಮಾಡಿದ್ದ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಲು ಹಿಂದೇಟು ಹಾಕಿದ ಜಿಟಿಡಿ, ನಾನು ಮೈಸೂರಲ್ಲಿ 4 ದಶಕಗಳಿಂದ ರಾಜಕಾರಣ ಮಾಡಿಕೊಂಡು ಬರುತ್ತಿದ್ದೇನೆ. ಒಂದು ಬಾರಿಯೂ ಸ್ಯಾಂಟ್ರೋ ರವಿ ಬಗ್ಗೆ ನಾನು ಕೇಳಿಲ್ಲ. ಆತ ಮೈಸೂರಿನವನು, ಅಷ್ಟೊಂದು ಹಣ ಸಂಪಾದಿಸಿದ್ದಾನೆ. ಪ್ರಭಾವಿಯಾಗಿದ್ದಾನೆ ಎಂಬುದು ಗೊತ್ತೇ ಇಲ್ಲ. ಯಾಕಂದ್ರೆ ನಾನು ಆ ಲೈನ್‌ನಲ್ಲಿ ಇಲ್ಲ ಎಂದು ಮುಗುಳ್ನಕ್ಕರು.

ಜ.15ರ ನಂತರ ಜಿಲ್ಲಾ ಪ್ರವಾಸ: ಚುನಾವಣೆ ಹಿನ್ನೆಲೆಯಲ್ಲಿ ಜ.15ರವರೆಗೂ ನಾನು ಕೆಲ ಕಾರಣಗಳಿಂದ ಜಿಲ್ಲೆಯ ವಿವಿಧ ಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳಲು ಸಾಧ್ಯವಾಗುವುದಿಲ್ಲ ಎಂದು ನಾನು ಮೊದಲೇ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ತಿಳಿಸಿದ್ದೇನೆ. ಸಂಕ್ರಾಂತಿ ನಂತರ ಮೈಸೂರು ಜಿಲ್ಲೆಯ ಎಲ್ಲಾ ಕ್ಷೇತ್ರಗಳಿಗೂ ತೆರಳಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇನೆ ಎಂದರು.

ಈಗಾಗಲೇ ಜಿಲ್ಲೆಯಲ್ಲಿ ಕೆ.ಆರ್.ನಗರದಲ್ಲಿ ಶಾಸಕ ಸಾ.ರಾ.ಮಹೇಶ್, ಪಿರಿಯಾಪಟ್ಟಣದಲ್ಲಿ ಶಾಸಕ ಕೆ.ಮಹದೇವು, ತಿ.ನರಸೀಪುರದಲ್ಲಿ ಶಾಸಕ ಅಶ್ವಿನ್ ಕುಮಾರ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕನಾಗಿ ನಾನಿದ್ದೇನೆ. ನಾಲ್ವರು ಶಾಸಕರು ಈಗಾಗಲೇ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆಗೆ ಶ್ರಮಿಸುತ್ತಿದ್ದೇವೆ. ಯಾವ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರಿಲ್ಲವೋ ಆ ಕ್ಷೇತ್ರಗಳಲ್ಲಿ ಸಂಘಟನೆಗೆ ಒತ್ತು ನೀಡಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಹೆಚ್.ಡಿ.ಕೋಟೆ ಅಭ್ಯರ್ಥಿ ಆಯ್ಕೆ: ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಜಯಪ್ರಕಾಶ್ ಹೆಸರನ್ನು ಘೋಷಿಸುವಂತೆ ಮೈಸೂರಿನ ನಾಲ್ವರು ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಕ್ಷದ ಜಿಲ್ಲಾಧ್ಯಕ್ಷರು ಒಮ್ಮತದಿಂದ ಹೆಚ್.ಡಿ.ಕುಮಾರಸ್ವಾಮಿ ಅವರಲ್ಲಿ ಕೇಳಿಕೊಂಡಿದ್ದೇವೆ. ಜಯಪ್ರಕಾಶ್ ಹೆಸರನ್ನು ಹೊರತುಪಡಿಸಿ ಬೇರೆ ಯಾರ ಹೆಸರನ್ನು ಶಿಫಾರಸ್ಸು ಮಾಡಿಲ್ಲ. ಹಾಗಾಗಿ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಯಾವುದೇ ಗೊಂದಲವಿಲ್ಲ. ಜ.15ರ ನಂತರ ಹೆಚ್.ಡಿ. ಕುಮಾರಸ್ವಾಮಿ ಅವರು ಜಯಪ್ರಕಾಶ್ ಅವರ ಹೆಸರನ್ನು ಅಧಿಕೃತವಾಗಿ ಘೋಷಿಸಲಿದ್ದಾರೆ ಎಂದರು.

ಅಸಂವಿಧಾನಿಕ ಪದ ಬಳಕೆ ಸಲ್ಲ

ಇತ್ತೀಚಿನ ರಾಜಕಾರಣದಲ್ಲಿ ಕೆಲವು ಸಂದರ್ಭದಲ್ಲಿ ರಾಜಕಾರಣಿಗಳು ಟೀಕೆ ಮಾಡುವಾಗ ಅಸಂಬದ್ಧ ಪದ ಬಳಸುತ್ತಿರುವುದು ಕಂಡು ಬಂದಿದೆ. ಇದು ಸರಿಯಾದ ಕ್ರಮವಲ್ಲ. ನಾಯಿ, ನರಿ. ಕೋಳಿ, ಕೊತ್ತಿ(ಬೆಕ್ಕು) ಸೇರಿದಂತೆ ಇನ್ನಿತರ ಪದ ಬಳಕೆ ಸರಿಯಾದುದ್ದಲ್ಲ. ಮಾಜಿ ಸಿಎಂ ಸಿದ್ದರಾಮಯ್ಯ ಮುತ್ಸದ್ಧಿ ರಾಜಕಾರಣಿಯಾಗಿದ್ದಾರೆ. ಅವರೂ ಸೇರಿದಂತೆ ಯಾರೇ ಆಗಲಿ ಪದ ಬಳಕೆ ಬಗ್ಗೆ ಜಾಗ್ರತೆ ವಹಿಸುವುದು ಸೂಕ್ತ. ನಾಯಿಯನ್ನು ನಾರಾಯಣಸ್ವಾಮಿ ಎಂದು ಭಾವಿಸುತ್ತೇವೆ. ನಾಯಿಗೆ ನಾವು ಎಂದಿಗೂ ಸಮಾನರಾಗಲು ಸಾಧ್ಯವೇ ಇಲ್ಲ.

ಮಡಿವಾಳ ಸಮಾಜ ಎಸ್‌ಸಿ ಸೇರ್ಪಡೆಗೆ ಹೋರಾಟ

ಶಾಸಕ ಡಾ.ಯತೀಂದ್ರ ಬೆಂಬಲ



ಮೈಸೂರು,ಜ.6(ಪಿಎಂ)– ಪರಿಶಿಷ್ಟ ಜಾತಿ ಪಟ್ಟಿಗೆ ಮಡಿವಾಳ ಸಮುದಾಯ ಸೇರ್ಪಡೆಗೊಳಿಸಬೇಕೆಂಬ ಹೋರಾಟಕ್ಕೆ ತಮ್ಮ ಬೆಂಬಲ ಇರುವುದಾಗಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೈಸೂರು ತಾಲೂಕು ವೀರ ಮಡಿವಾಳರ ಸಂಘದ 2023ರ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಬಹಳ ವರ್ಷಗಳಿಂದ ಪರಿಶಿಷ್ಟ ಜಾತಿ ಪಟ್ಟಿಗೆ ಸೇರ್ಪಡೆಗೊಳಿಸಬೇಕೆಂದು ಮಡಿವಾಳ ಸಮುದಾಯ ಹೋರಾಟ ಮಾಡುತ್ತಿದ್ದು, ಇದಕ್ಕೆ ನನ್ನ ಬೆಂಬಲವಿದೆ. ನಮ್ಮ ಸರ್ಕಾರ ಇದ್ದಾಗ ಎಲ್ಲಾ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ನೀಡಲಾಯಿತು. ಆದರೆ ಈಗ ಮಡಿವಾಳ ಸೇರಿದಂತೆ ಹಿಂದುಳಿದ ವರ್ಗಗಳನ್ನು ಕಡೆಗಣಿಸಲಾಗಿದೆ ಎಂದು ದೂರಿದರು.

ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣ ಹೆಚ್ಚಳಗೊಳ್ಳಬೇಕು. ಮೇಲ್ವರ್ಗದ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರಷ್ಟು ಮೀಸಲಾತಿ ನೀಡಿರುವುದು ಸಂವಿಧಾನದ ಆಶಯಕ್ಕೆ ಪೂರಕವಾಗಿಲ್ಲ. ಜೊತೆಗೆ ಕೇವಲ ಶೇ.4ರಷ್ಟು ಜನಸಂಖ್ಯೆಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಆರ್ಥಿಕವಾಗಿ ಹಿಂದುಳಿದವರ ಶ್ರೇಯೋಭಿವೃದ್ಧಿಗೆ ಬೇರೆ ಯೋಜನೆಗಳನ್ನು ರೂಪಿಸಬಹುದಿತ್ತು. ಮೀಸಲಾತಿ ಕಲ್ಪಿಸುವ ಅಗತ್ಯವಿರಲಿಲ್ಲ ಎಂದರು.

ಎಲ್ಲಾ ಹಿಂದುಳಿದ ವರ್ಗಗಳು ತಮ್ಮ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಗೆ ಒತ್ತಾಯಿಸಬೇಕಿದೆ. ಹಿಂದುಳಿದ ವರ್ಗದ ಶೇ.54ರಷ್ಟು ಜನಸಂಖ್ಯೆಗೆ ಕೇವಲ ಶೇ.36ರಷ್ಟು ಮೀಸಲಾತಿ ಇದ್ದು, ಇದರಿಂದ ಸಾಮಾಜಿಕ ನ್ಯಾಯ ಕಾಯ್ದುಕೊಳ್ಳಲು ಸಾಧ್ಯವಿಲ್ಲ. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಒಗ್ಗಟ್ಟಿನಿಂದ ಹೋರಾಟ ಮಾಡಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ರಾಜ್ಯ ಮಡಿವಾಳ ಸಂಘದ ರಾಜ್ಯಾಧ್ಯಕ್ಷ ಸಿ.ನಂಜಪ್ಪ ತಾಲೂಕು ಅಧ್ಯಕ್ಷ ಜಯರಾಮ್, ಪದಾಧಿಕಾರಿಗಳಾದ ಮಾದುರಾಜು, ಶಿವಣ್ಣ ಮತ್ತಿತರರು ಹಾಜರಿದ್ದರು.

ಜ.8ರಂದು ಬೆಂಗಳೂರಲ್ಲಿ ಸಭೆ...

ಪರಿಶಿಷ್ಟ ಜಾತಿ ಪಟ್ಟಿಗೆ ಮಡಿವಾಳ ಸಮುದಾಯ ಸೇರ್ಪಡೆ ಮಾಡಬೇಕೆಂದು ಒತ್ತಾಯಿಸಿ ಫೆಬ್ರವರಿ 3ನೇ ವಾರದಲ್ಲಿ ಬೃಹತ್ ಹೋರಾಟ ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಜ.8ರಂದು ಬೆಂಗಳೂರಿನ ಸಂಘದ ಆವರಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ.

-ಸಿ.ನಂಜಪ್ಪ, ರಾಜ್ಯಾಧ್ಯಕ್ಷರು, ಮಡಿವಾಳ ಸಂಘ



ಕೃಷ್ಣರಾಜ ಕ್ಷೇತ್ರದ ಶಾಸಕರ ಅನುದಾನದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಹಿಂಭಾಗ ಮಳೆ ನೀರು ಚರಂಡಿ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಶುಕ್ರವಾರ ಚಾಲನೆ ನೀಡಿದರು. ಈ ವೇಳೆ ಮೇಯರ್ ಶಿವಕುಮಾರ್, ಉಪ ಮೇಯರ್ ಶ್ರೀಮತಿ ಜಿ.ರೂಪ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಪಾಲಿಕೆ ವಾರ್ಡ್ ನಂ.50ರ ಬೆಸ್ತಗೇರಿ ನಿವಾಸಿ ಸಿದ್ದರಾಜು ಅವರ ಮನೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಗೃಹೋಪಯೋಗಿ ವಸ್ತುಗಳು ಸುಟ್ಟು ಹೋಗಿದ್ದು, ಸಂತ್ರಸ್ತರಿಗೆ ಸದರಿ ವಾರ್ಡ್‌ನ ಪಾಲಿಕೆ ಸದಸ್ಯ ಲೋಕೇಶ್ ಪಿಯಾ ಅವರು ಧನಸಹಾಯ ಮಾಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಜ.8ರಂದು ದೇವಾಲಯಕ್ಕೆ ಗಣೇಶ ವಿಗ್ರಹ ಸಮರ್ಪಣೆ



ಮೈಸೂರು,ಜ.6(ಪಿಎಂ)– ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಸ್ಯಾಂಡಲ್‌ವುಡ್ ಸೆಲೆಬ್ರಿಟೀಸ್ ಮತ್ತು ಭೂಮಿಕಾ ಭಾವೈಕ್ಯ ಬಳಗದ ಸಂಯುಕ್ತಾಶ್ರಯದಲ್ಲಿ ಜ.8ರಂದು ದೇವಾಲಯಕ್ಕೆ ಗಣೇಶ ವಿಗ್ರಹ ಸಮರ್ಪಣೆ ಮತ್ತು ಸಾರ್ಥಕ ಸೇವಾಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಪೋಷಕ ರಾಚಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11ಕ್ಕೆ ಬನುಮಯ್ಯ ರಸ್ತೆಯಲ್ಲಿರುವ ಶ್ರೀ ವೀರಭದ್ರಸ್ವಾಮಿ ದೇವಾಲಯದಲ್ಲಿ ಕಾರ್ಯಕ್ರಮ ನಡೆಯಲಿದೆ. ಮೊದಲಿಗೆ ದೇವಾಲಯಕ್ಕೆ 1 ಅಡಿ ಎತ್ತರದ ಕಂಚಿನ ಗಣೇಶನ ವಿಗ್ರಹ ಸಮರ್ಪಿಸಲಾಗುವುದು ಎಂದರು.

ಬಳಿಕ ದೇವಾಲಯದ ಆವರಣದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಶ್ರೀ ವೀರಭದ್ರಸ್ವಾಮಿ ದೇವಾಲಯದ ಪ್ರಧಾನ ಪುರೋಹಿತ ಮಹೇಶ್ ಅವರಿಗೆ ಸಾರ್ಥಕ ಸೇವಾಭೂಷಣ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಮೈಸೂರಿನ ಬಸವ ಧ್ಯಾನ ಕೇಂದ್ರದ ಶ್ರೀ ಮಾತೆ ಬಸವಾಂಜಲಿ ದೇವಿ ಅವರ ಸಾನಿಧ್ಯದಲ್ಲಿ ಮೇಯರ್ ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಇನ್ನು ಹಲವು ಗಣ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ವೇದಿಕೆ ಸಂಸ್ಥಾಪಕ ಅಧ್ಯಕ್ಷ ತಗಡೂರು ಗೌರೀಶಂಕರ, ಜಿಲ್ಲಾಧ್ಯಕ್ಷ ಎಂ.ಎನ್.ಪ್ರಕಾಶ್, ನಗರಾಧ್ಯಕ್ಷ ಎನ್.ಕೃಷ್ಣ, ಮುಖಂಡರಾದ ಸುರೇಶ್ ಗೋಲ್ಡ್, ಸವಿತಾ ಘಾಟ್ಕೆ, ಭಾಗ್ಯ ಗೋಷ್ಠಿಯಲ್ಲಿದ್ದರು.

ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಉಪಾಧ್ಯಕ್ಷ ಅರುಣ್ ಹಲ್ದರ್ ಪ್ರವಾಸ

ಮೈಸೂರು, ಜ.6– ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಉಪಾಧ್ಯಕ್ಷ ಅರುಣ್ ಹಲ್ದರ್ ಜ.7 ರಂದು



ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಮಧ್ಯಾಹ್ನ 1 ಗಂಟೆಗೆ ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಕಲ್ಯಾಣ ಸಂಘಟನೆಗಳೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 1.30 ಗಂಟೆಗೆ ಜಿಲ್ಲೆಯ ಪ್ರಮುಖ ಬ್ಯಾಂಕಿಂಗ್ ಮುಖ್ಯಸ್ಥರೊಂದಿಗೆ, ಮಧ್ಯಾಹ್ನ 2 ಗಂಟೆಗೆ ಜಿಲ್ಲಾ ದಂಡಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿ ಮತ್ತು ಪರಿಶಿಷ್ಟ ಜಾತಿ ಕಲ್ಯಾಣ ಸಂಬಂಧಿತ ಅಧಿಕಾರಿಗಳು, ಸಂಜೆ 4 ಗಂಟೆಗೆ ಲಲಿತ ಮಹಲ್ ಹೋಟೆಲ್‌ನಲ್ಲಿ ಅಖಿಲ ಭಾರತ ಎಸ್.ಸಿ.ಮೋರ್ಚಾ ನಾಯಕರೊಂದಿಗೆ ಸಭೆ ನಡೆಸುವರು.

ಜ.10ರಂದು ರಾಜ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ



ಮೈಸೂರು,ಜ.6(ಪಿಎಂ)– ರವಿಸಂತು ಬಳಗ ಮತ್ತು ರೋಟರಿ ಬೆಂಗಳೂರು ಹೈಗ್ರೌಂಡ್ಸ್ ವತಿಯಿಂದ ಜ.10ರಂದು ರಾಜ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಳಗದ ರವಿ ಸಂತೋಷ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಕಾರ್ಯಕ್ರಮ ನಡೆಯಲಿದೆ. 82 ಮಂದಿ ಕಲಾವಿದರಿಗೆ ರಾಜ್ಯ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು. ಜೊತೆಗೆ 100 ಕನ್ನಡ ಸಿನಿಮಾಗಳ ನಿರ್ದೇಶನ ಮಾಡಿರುವ ಓಂ ಸಾಯಿ ಪ್ರಕಾಶ್ ಅವರಿಗೆ 'ನಿರ್ದೇಶಕ ಸಾರ್ವಭೌಮ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಬಳಿಕ ಗಾಯನ ಕಾರ್ಯಕ್ರಮ ನಡೆಯಲಿದ್ದು, ಇದಕ್ಕೆ ಪ್ರವೇಶ ಉಚಿತವಿದೆ ಎಂದರು.

ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ ರಾವ್, ಚಲನಚಿತ್ರ ನಟಿ ಭವ್ಯ, ಕರ್ನಾಟಕ ಪ್ರೆಸ್ ಕ್ಲಬ್ ಕೌನ್ಸಿಲ್ ಅಧ್ಯಕ್ಷ ಡಾ.ಶಿವಕುಮಾರ್ ನಾಗರ ನಾವಿಲೆ ಮೊದಲಾದವರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಗಾಯಕರಾದ ರಾಮದಾಸ್, ರವಿ, ಕಿರುತೆರೆ ನಟಿ ಸಿಂಚನಾ, ಮುಖಂಡರಾದ ಓಂಕಾರ್ ಆನಂದ್, ನವೀನ್, ಶ್ರೀಕಂಠು ಗೋಷ್ಠಿಯಲ್ಲಿದ್ದರು.

ಜ.9ರಿಂದ ಐದು ದಿನ ಸಂಚಲನ ಮಕ್ಕಳ ನಾಟಕ, ಜಾನಪದ ಉತ್ಸವ

ಕಾರ್ಯಕ್ರಮದಲ್ಲಿ 314 ಮಕ್ಕಳು ಭಾಗಿ, ಸಾರ್ವಜನಿಕರಿಗೆ ಪ್ರವೇಶ ಉಚಿತ

ಮೈಸೂರು,ಜ.6(ಪಿಎಂ)– ಸಂಚಲನ ಮೈಸೂರು ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ರೋಟರಿ ಮೈಸೂರು ಉತ್ತರದ ಸಹಯೋಗದಲ್ಲಿ ಜ.9ರಿಂದ 13ರವರೆಗೆ ರಾಜ್ಯ ಮಟ್ಟದ ಸಂಚಲನ ಮಕ್ಕಳ ನಾಟಕೋತ್ಸವ ಮತ್ತು ಜಾನಪದ ಉತ್ಸವ ಆಯೋಜಿಸಲಾಗಿದೆ ಎಂದು ಸಂಚಲನದ ಅಧ್ಯಕ್ಷ ದೀಪಕ್ ಮೈಸೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ಉತ್ಸವ ನಡೆಯಲಿದೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಜ.9ರಂದು ಸಂಜೆ 4.30ಕ್ಕೆ ಕಿರು ರಂಗ ಮಂದಿರದ ಹೊರ ಆವರಣದಲ್ಲಿ ಜಾನಪದ ಉತ್ಸವಕ್ಕೆ ಚಾಲನೆ ದೊರೆಯಲಿದೆ. ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಕಾರ್ಯದರ್ಶಿ ಡಾ.ಕುಮಾರ ಸ್ವಾಮಿ ಮೊದಲಾದವರು ಭಾಗವಹಿಸಲಿದ್ದಾರೆ. ಶಕ್ತಿಧಾಮ ವಿದ್ಯಾಶಾಲೆ, ಗುರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ದಡದಹಳ್ಳಿ ಸರ್ಕಾರಿ ಪ್ರೌಢಶಾಲೆ ಮಕ್ಕಳು ಜಾನಪದ ನೃತ್ಯ ಸಾದರಪಡಿಸಲಿದ್ದಾರೆ ಎಂದರು.



ಬಳಿಕ ಸಂಜೆ 6ಕ್ಕೆ ಕಿರುರಂಗಮಂದಿರ ದಲ್ಲಿ ಮಕ್ಕಳ ನಾಟಕೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಶಾಸಕ ಜಿ.ಟಿ. ದೇವೇಗೌಡ, ಮೇಯರ್ ಶಿವಕುಮಾರ್, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಮ್ ರಾಯಪುರ, ಹಿರಿಯ ರಂಗಕರ್ಮಿ ಡಾ.ಶ್ರೀಪಾದಭಟ್, ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ–3181ರ ಜಿಲ್ಲಾ ಗವರ್ನರ್ ಪ್ರಕಾಶ್ ಕಾರಂತ್ ಅತಿಥಿಗಳಾಗಿ ಭಾಗ ವಹಿಸಲಿದ್ದಾರೆ. ನಂತರ 'ಪುಣ್ಯಕೋಟಿ' ಮತ್ತು 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ನಾಟಕಗಳ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಜ.10ರಿಂದ ಪ್ರತಿದಿನ ಸಂಜೆ 6ರಿಂದ ಜಾನಪದ ಉತ್ಸವ ಮತ್ತು ನಾಟಕಗಳ ಪ್ರದರ್ಶನ ನಡೆಯಲಿದೆ. ಜ.10ರಂದು 'ಹಸಿರು ಹಬ್ಬಲಿ' ನೃತ್ಯ ಪ್ರದರ್ಶನ, 'ಒಗಟಿನ ರಾಣಿ' ನಾಟಕ ಪ್ರದರ್ಶನ ನಡೆಯಲಿದೆ ಜ.11ರಂದು 'ಮೋಹಿನಿ ಅಟ್ಟಂ' ಪ್ರದರ್ಶನ, 'ಸ್ಮಶಾನ ಕುರುಕ್ಷೇತ್ರಂ' ನಾಟಕ, ಜ.12ರಂದು 'ಬೆಟ್ಟದ ಇಲಿಗಳ ಕಥೆ, ಕುಣಿ ಕುಣಿ ನವಿಲೇ' ನಾಟಕಗಳ ಪ್ರದರ್ಶನ ನಡೆಯಲಿದೆ. ಜ.13ರಂದು ಸಂಜೆ 6ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮ ಶೇಖರ್, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮತ್ತು ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಸ್.ಹೆಚ್.ಜಗದೀಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಮಾರೋಪದ ಬಳಿಕ 'ನಾಯಿಮರಿ' ನಾಟಕ ಪ್ರದರ್ಶನಗೊಳ್ಳಲಿದೆ. ಬಹುತೇಕ ಎಲ್ಲಾ ನಾಟಕಗಳು ಒಂದು ಗಂಟೆ ಅವಧಿ ಯನ್ನು ಹೊಂದಿವೆ. ಒಟ್ಟಾರೆ ಈ ಉತ್ಸವದಲ್ಲಿ 314 ಮಂದಿ ಮಕ್ಕಳು ಪಾಲ್ಗೊಳ್ಳಲಿದ್ದಾರೆ ಎಂದರು. ರಂಗಕರ್ಮಿಗಳಾದ ರಾಜ ಶೇಖರ ಕದಂಬ, ಇಂದಿರಾ ನಾಯಕ್, ರೋಟರಿ ಮೈಸೂರು ಉತ್ತರದ ಅಧ್ಯಕ್ಷ ಎಸ್.ಹೆಚ್.ಜಗದೀಶ್, ಕಾರ್ಯದರ್ಶಿ ಲೋಕನಾಥ್ ಗೋಷ್ಠಿಯಲ್ಲಿದ್ದರು.

ರಾಜ್‌ಕೋಟ್‌ನ ಡ್ಯಾಮ್‌ಗೆ ಪ್ರಧಾನಿ ಮೋದಿ ತಾಯಿ ಹೀರಾಬೆನ್ ಹೆಸರು

ರಾಜ್‌ಕೋಟ್, ಜ.6– ಗುಜರಾತ್‌ನ ರಾಜ್‌ಕೋಟ್ ನಗರದ ಹೊರವಲಯದಲ್ಲಿ ನಿರ್ಮಿಸಲಾಗುತ್ತಿರುವ ಚೆಕ್‌ಡ್ಯಾಮ್‌ಗೆ



ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ, ದಿವಂಗತ ಹೀರಾಬೆನ್ ಅವರ ಹೆಸರನ್ನು ಇಡಲಾಗಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಗಿರ್ ಗಂಗಾ ಪರಿವಾರ ಟ್ರಸ್ಟ್, ರಾಜ್‌ಕೋಟ್–ಕಲವಾಡ ರಸ್ತೆಯ ವಗುಡಾದ್ ಗ್ರಾಮದ ಬಳಿ ನ್ಯಾರಿ ನದಿಗೆ ಅಡ್ಡವಾಗಿ 15 ಲಕ್ಷ ರೂಪಾಯಿ ವೆಚ್ಚದಲ್ಲಿ ಚೆಕ್ ಡ್ಯಾಂ ನಿರ್ಮಿಸುತ್ತಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ದಿಲೀಪ್ ಸಖಿಯಾ ಹೇಳಿದ್ದಾರೆ.

ಸ್ಥಳೀಯ ಶಾಸಕಿ ದರ್ಶಿತಾ ಶಾ ಮತ್ತು ರಾಜ್‌ಕೋಟ್ ಮೇಯರ್ ಪ್ರದೀಪ್ ದಾವ್ ಅವರ ಸಮ್ಮುಖದಲ್ಲಿ ಬುಧವಾರ ಅಣೆಕಟ್ಟಿನ ಶಿಲಾನ್ಯಾಸ ನೆರವೇರಿಸಲಾಯಿತು.

PWD ಮಿನಿಸ್ಟರ್ ಇಲ್ಲಾ ಸಿಎಂಗೆ ಕೊಡೋದಕ್ಕೆ ಹಣ ತಂದಿರಬೇಕು



ಬೆಂಗಳೂರು, ಜ.6– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೂಗಿನ ನೇರಕ್ಕೆ ಲಂಚದ ವ್ಯವಹಾರ ನಡೆಯುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗಂಭೀರ ಆರೋಪ ಮಾಡಿದ್ದಾರೆ. ಬೆಂಗಳೂರಿನಲ್ಲಿ ಇಂದು ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಕಳೆದ ಬುಧವಾರ ಸಂಜೆ ವಿಧಾನಸೌಧ ಪೂರ್ವ ದ್ವಾರದಲ್ಲಿ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ಜಗದೀಶ್ ಎಂಬಾತ ಹತ್ತೂವರೆ ಲಕ್ಷ ರೂ. ಬ್ಯಾಗಿನಲ್ಲಿ ತಂದು ಸಿಕ್ಕಿಹಾಕಿಕೊಂಡಿರುವ ಪ್ರಕರಣ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಇದರ ಅರ್ಥ ವಿಧಾನಸೌಧದಲ್ಲೇ ಲಂಚದ ವ್ಯವಹಾರ ನಡೆಯುತ್ತಿದೆ ಎಂದು. ಮುಖ್ಯ ಮಂತ್ರಿಗಳ ಮೂಗಿನ ನೇರಕ್ಕೆ ಲಂಚದ ವ್ಯವಹಾರ ನಡೆಯುತ್ತಿದೆ. ವಿಧಾನಸೌಧಕ್ಕೆ ಹಣವನ್ನು ತಂದ ವ್ಯಕ್ತಿ ಯಾರಿಗೆ ಕೊಡಲು ಬಂದಿದ್ದ ಕಥಾಆ ಮಿನಿಸ್ಟರ್‌ಗೆ ಕೊಡಲು ಬಂದಿರಬೇಕು, ಇಲ್ಲಾ ಮುಖ್ಯಮಂತ್ರಿಗಳಿಗೆ ಕೊಡೋದಕ್ಕೆ ಬಂದಿರಬೇಕು ಅಲ್ವಾ...? ಎಂದು ಪ್ರಶ್ನೆ ಮಾಡಿದರು.

ಪ್ರವಾಸಿ ಬಸ್‌ನಲ್ಲಿ ಬೆಂಕಿ: ಚಾಲಕನ ಸಮಯ ಪ್ರಜ್ಞೆಯಿಂದ ತಪ್ಪಿದ ಅನಾಹುತ

ಚಾಮುಂಡಿಬೆಟ್ಟದಲ್ಲಿ ಶುಕ್ರವಾರ ಘಟನೆ

ಮೈಸೂರು, ಜ.6–(ಆರ್‌ಕೆ)– ಗುಜರಾತ್‌ನಿಂದ ಪ್ರವಾಸಿಗರನ್ನು ಕರೆತಂದಿದ್ದ ಬಸ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡಿದ್ದು, ಚಾಲಕನ ಸಮಯ ಪ್ರಜ್ಞೆಯಿಂದಾಗಿ ಸಂಭವಿಸಬಹುದಾಗಿದ್ದ ಭಾರೀ ಅಗ್ನಿ ಅನಾಹುತ ತಪ್ಪಿದಂತಾಗಿದೆ ಈ ಘಟನೆ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.



ಪ್ರವಾಸಕ್ಕಾಗಿ ಮೈಸೂರಿಗೆ ಬಂದಿದ್ದ 50 ಮಂದಿ ಗುಜರಾತ್ ಮೂಲದ ಪ್ರವಾಸಿಗರು ತಾಯಿಯ ದರ್ಶನಕ್ಕೆಂದು ಚಾಮುಂಡಿಬೆಟ್ಟಕ್ಕೆ ತೆರಳಿದ್ದರು. ಬೆಟ್ಟ ತಲುಪಿದ ಬಸ್ಸನ್ನು ಅಲ್ಲಿನ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸುತ್ತಿದ್ದಂತೆಯೇ ಸೈಲೆನ್ಸರ್ ಬಳಿ ಬೆಂಕಿ ಹೊತ್ತಿಕೊಳ್ಳುತ್ತಿರುವುದನ್ನು ಗಮನಿಸಿದ ಚಾಲಕ ತಕ್ಷಣ ಇಂಜಿನ್ ಆಫ್ ಮಾಡಿ ಪ್ರಯಾಣಿಕರನ್ನು ಬಸ್‌ನಿಂದ ಕೆಳಗಿಳಿಸಿದ. ಎಲ್ಲರನ್ನು ದೂರ ಕಳುಹಿಸಿ ಸಾರ್ವಜನಿಕರ ಸಹಾಯದಿಂದ ಸೈಲೆನ್ಸರ್ ಬಳಿ ಕಾಣಿಸಿಕೊಂಡಿದ್ದ ಬೆಂಕಿ ನಂದಿಸಿ ನೋಡಿದಾಗ ಡೀಸೆಲ್ ಪೈಪ್‌ನಿಂದ ಇಂಧನ ಸೋರಿಕೆಯಾಗಿ ಸೈಲೆನ್ಸರ್ ಶಾಖದಿಂದ ಬೆಂಕಿ ಹೊತ್ತಿಕೊಂಡಿರುವುದು ತಿಳಿಯಿತು.

ನಂತರ ಮೆಕ್ಯಾನಿಕ್ ಕರೆಸಿಕೊಂಡು ಡೀಸೆಲ್ ಟ್ಯಾಂಕ್ ಸೋರಿಕೆಯಾಗುತ್ತಿದ್ದುದನ್ನು ಸರಿಪಡಿಸಿದ ಮೇಲೆ ಪ್ರವಾಸಿಗರೊಂದಿಗೆ ಪ್ರಯಾಣ ಮುಂದುವರಿಸಿದರು. ಬೆಂಕಿಯನ್ನು ಗಮನಿಸಿ ತಕ್ಷಣ ಪ್ರಯಾಣಿಕರನ್ನು ಬಸ್ಸಿನಿಂದಿಳಿಸಿ ಅಪಾಯದಿಂದ ಪಾರು ಮಾಡಿದ ಚಾಲಕನ ಸಮಯ ಪ್ರಜ್ಞೆಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಆ ವೇಳೆ ಚಾಮುಂಡಿಬೆಟ್ಟದ ಔಟ್‌ಪೋಸ್ಟ್ ಠಾಣೆ ಪೊಲೀಸರು, ಸಿದ್ಧಾರ್ಥ ಸಂಚಾರ ಠಾಣೆ ಸಿಬ್ಬಂದಿ ಹಾಗೂ ಸಾರ್ವಜನಿಕರು ಬೆಂಕಿ ನಂದಿಸಲು ಚಾಲಕನ ನೆರವಿಗೆ ಬಂದರು. ತಾಯಿ ಚಾಮುಂಡೇಶ್ವರಿ ಕೃಪೆಯಿಂದಾಗಿ ಬಸ್ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

ಫೇಸ್ ಬುಕ್‌ನಲ್ಲಿ ಪರಿಚಯದ ನಂತರ ಮದುವೆ: ಈಗ ಪತಿ ನಾಪತ್ತೆ

ಪೊಲೀಸರಿಗೆ ದೂರು ನೀಡಿದ ಮಹಿಳೆ

ಮೈಸೂರು, ಜ.6–ಫೇಸ್ ಬುಕ್ ಮೂಲಕ ಪರಿಚಯವಾಗಿ, ಪ್ರೀತಿಸಿ ಮದುವೆಯಾದ ಪತಿ ನಾಪತ್ತೆಯಾಗಿದ್ದಾನೆ ಎಂದು ಮಹಿಳೆಯೋರ್ವರು ಪೊಲೀಸರಿಗೆ ದೂರು ನೀಡಿದ್ದಾರೆ.

ಮೈಸೂರಿನ ಮೇದರಕೇರಿ ನಿವಾಸಿ ತುಳಸಿ(28) ಎಂಬುವರ ಪತಿ ಕೆ.ಎನ್.ಪ್ರದೀಪ್(29) ನಾಪತ್ತೆಯಾದವನಾಗಿದ್ದು, ಕರಿಮುದ್ದನಹಳ್ಳಿ ನಿವಾಸಿಯಾದ ಈತ ಕಳೆದ ಎರಡು ವರ್ಷದ ಹಿಂದೆ ತುಳಸಿ ಅವರಿಗೆ ಫೇಸ್ ಬುಕ್‌ನಲ್ಲಿ ಪರಿಚಯವಾಗಿದ್ದು, ನಂತರ ಪ್ರೀತಿಸಿ, ಇಬ್ಬರೂ ಮೇದರಕೇರಿಯಲ್ಲಿ ಬಾಡಿಗೆ ಮನೆ ಮಾಡಿ ವಾಸಿಸುತ್ತಿದ್ದರು. 2022ರ ನ.3ರಂದು ಬೆಳಗ್ಗೆ ಚಾಮುಂಡಿಬೆಟ್ಟದ ಪಕ್ಕದಲ್ಲಿರುವ ಅರಳೀಮರದ ಕೆಳಗೆ ಈಕೆಗೆ ತಾಳಿ ಕಟ್ಟಿ ಮದುವೆಯಾಗಿದ್ದಾನೆ. ಅದೇ ದಿನ ಮದುವೆಯನ್ನು ರಿಜಿಸ್ಟರ್ ಮಾಡಲು ಹೋದಾಗ ಅಧಿಕಾರಿಗಳು ಆಧಾರ್ ಸೇರಿದಂತೆ ಕೆಲ ದಾಖಲೆಗಳನ್ನು ಕೇಳಿದ್ದಾರೆ. ಹೀಗಾಗಿ ನಂತರ ಅದನ್ನು ತರೋಣವೆಂದು ಇಬ್ಬರೂ ಸಬರ್ಬನ್ ಬಸ್ ನಿಲ್ದಾಣದ ಬಳಿ ಬಂದಾಗ ಪ್ರದೀಪ, ಸ್ನೇಹಿತ ಕರೆಯುತ್ತಿದ್ದಾನೆ, ನೀನು ಮನೆಗೆ ಹೋಗು, ಬರುತ್ತೇನೆಂದು ತಿಳಿಸಿ ಬಸ್ ಸ್ಟ್ಯಾಂಡ್ ಒಳಗೆ ಹೋದವನು ಮತ್ತೆ ವಾಪಸ್ ಬಂದಿಲ್ಲ. ನ.7ರವರೆಗೂ ಮೊಬೈಲ್ ಮೂಲಕ ಮಾತನಾಡಿಕೊಂಡಿದ್ದ. ನಂತರ ಆತನ ಮೊಬೈಲ್ ಸ್ವಿಚ್ ಆಫ್ ಆಗಿದೆ ಎಂದು ಜ.4ರಂದು ತುಳಸಿ ನೀಡಿದ ದೂರನ್ನು ವ್ಯಕ್ತಿ ನಾಪತ್ತೆ ಪ್ರಕರಣವಾಗಿ ದಾಖಲಿಸಿಕೊಂಡಿರುವ ಕೆ.ಆರ್.ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಪೊಲೀಸರೆಂದು ಹೇಳಿ ಗೃಹಿಣಿಯಿಂದ ಮಾಂಗಲ್ಯ ಸರ ಎಗರಿಸಿದ ಖದೀಮರು

ಮೈಸೂರು, ಜ.6–ಪೊಲೀಸರೆಂದು ನಂಬಿಸಿ ಗೃಹಿಣಿಯೋರ್ವರ ಮಾಂಗಲ್ಯ ಸರ ಕಿತ್ತುಕೊಂಡಿರುವ ಘಟನೆ ಮೈಸೂರಿನ ಕೆ.ಜಿ.ಕೊಪ್ಪಲಿನ ಬಳಿ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ನಡೆದಿದೆ. ಕೆ.ಜಿ.ಕೊಪ್ಪಲು ನಿವಾಸಿ ಜಯಮ್ಮ(50) ಸರ ಕಳೆದುಕೊಂಡವರಾಗಿದ್ದು, ಇವರು ಜ.1ರಂದು ಬೆಳಗ್ಗೆ 10.15ರ ಸುಮಾರಿನಲ್ಲಿ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ ಹೋಗುತ್ತಿದ್ದಾಗ ವ್ಯಕ್ತಿಯೋರ್ವ ಬಂದು ಪೊಲೀಸರು ಕರೆಯುತ್ತಿದ್ದಾರೆ ಎಂದು ಹೇಳಿ ಮತ್ತೋರ್ವನ ಬಳಿಗೆ ಕರೆದೊಯ್ದಿದ್ದಾರೆ.



ಆಗ ಆತ ತಾನು ಪೊಲೀಸ್ ಎಂದು ಹೇಳಿಕೊಂಡಿದ್ದಲ್ಲದೇ ಈಗ ತಾನೆ ಕೊಲೆ ನಡೆದಿದೆ. ಎಲ್ಲಾ ಕಡೆ ಕಳ್ಳರು ಸರ ಕಿತ್ತುಕೊಂಡು ಹೋಗುತ್ತಿದ್ದಾರೆ ಎಂದು ಹೇಳುತ್ತಿರುವಾಗಲೇ ಮತ್ತೋರ್ವ ವ್ಯಕ್ತಿ ಅಲ್ಲಿಗೆ ಬಂದಾಗ ಅವನನ್ನೂ ಕೂಡ ಕರೆದು, ಜಯಮ್ಮ ಅವರಿಗೆ ಹೇಳಿದಂತೆಯೇ ಹೇಳಿ ಸರ ಬಿಚ್ಚಿಕೊಡುವಂತೆಯೂ, ಅದನ್ನು ಪೇಪರ್ ಕಟ್ಟಿಕೊಡುವುದಾಗಿ ತಿಳಿಸಿದ್ದಾನೆ. ಜಯಮ್ಮ ಮತ್ತು ಇನ್ನೋರ್ವ ವ್ಯಕ್ತಿ ಸರಗಳನ್ನು ಬಿಚ್ಚಿಕೊಟ್ಟಾಗ ಅವುಗಳನ್ನು ಪೇಪರ್‌ವೊಂದರಲ್ಲಿ ಸುತ್ತಿ ವಾಪಸ್ ನೀಡಿ, ಮನೆಗೆ ಹೋಗಿ ಎಂದು ಹೇಳಿ ಹೊರಟು ಹೋಗಿದ್ದಾನೆ. ಜಯಮ್ಮ ಮನೆಗೆ ಬಂದು ನೋಡಿದಾಗ ತಾನು ನೀಡಿದ 65 ಗ್ರಾಂ ತೂಕದ ಎರಡೆಳೆಯ ಮಾಂಗಲ್ಯ ಸರವಿಲ್ಲದೆ ಒಂದು ಎಳೆಯ ನಕಲಿ ಚಿನ್ನದ ಸರವಿರುವುದು ಗೊತ್ತಾಗಿದೆ. ಈ ಸಂಬಂಧ ಏ.1ರಂದು ಜಯಮ್ಮ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ಕೆ.ಎಂ.ದೊಡ್ಡಿ, ಜ.6–ಹಾಡ ಹಗಲೇ ಮನೆಯ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿರುವ ಘಟನೆ ಮದ್ದೂರು ತಾಲೂಕು ಕಾಡುಕೊತ್ತನಹಳ್ಳಿ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಸುನೀತ(33) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಜ.4ರಂದು ಇವರ ಪತಿ ತಿರುಪತಿಗೆ ಹೋಗಿದ್ದಾರೆ. ಅದೇ ದಿನ ಸುನೀತ ಅವರು ಚಾಮುಂಡಮ್ಮನ ಹಬ್ಬಕ್ಕಾಗಿ ಮಾದರಹಳ್ಳಿಯ ಅಕ್ಕನ ಮನೆಗೆ ಹೋಗಿದ್ದು, ಇವರ ಅತ್ತೆ ಲಕ್ಷ್ಮಮ್ಮ ಬೆಳಗ್ಗೆ 11 ಗಂಟೆಗೆ ಗದ್ದೆಗೆ ಹೋಗಿದ್ದಾರೆ. ಮಧ್ಯಾಹ್ನ 2.30ರ ಸುಮಾರಿನಲ್ಲಿ ಲಕ್ಷ್ಮಮ್ಮ ಮನೆಗೆ ಹಿಂತಿರುಗಿದಾಗ 27 ಗ್ರಾಂ ತೂಕದ ಚಿನ್ನಾಭರಣ ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಸುನೀತ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಎಂ.ದೊಡ್ಡಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಚಾಲಕನ ವಂಚಿಸಿ ಟ್ಯಾಕ್ಸಿ ಕದ್ದೊಯ್ದ ಖದೀಮ

ಮಂಡ್ಯ, ಜ.6–ಹೊಸ ವರ್ಷದ ಪ್ರವಾಸಕ್ಕೆಂದು ಬುಕ್ ಮಾಡಿದ ಕಾರನ್ನು ಪ್ರವಾಸಿಗನೇ ಕದ್ದೊಯ್ದ ಘಟನೆ ಮಂಡ್ಯದ ಹೋಟೆಲ್ ಅಮರಾವತಿ ಬಳಿ ನಡೆದಿದೆ.

ವಿವರ: ಬೆಂಗಳೂರಿನ ಕಾಡುಗೋಡಿ ನಿವಾಸಿ ಬಿ.ಆರ್.ಉಮೇಶ್(53) ಎಂಬುವರು ಕೆ.ನಾಗೇಶ್ ಎಂಬುವರಿಗೆ ಸೇರಿದ ಕೆ.ಎ.05 ಎಇ 1317 ಸಂಖ್ಯೆಯ ಮಹೇಂದ್ರ ವೆರಿಟೋ ಟ್ಯಾಕ್ಸಿಯನ್ನು ಚಾಲನೆ ಮಾಡುತ್ತಿದ್ದಾರೆ. ಡಿ.30ರಂದು ಬೆಂಗಳೂರಿನ ಹೊರಮಾವಿನಲ್ಲಿರುವ ಸಪ್ತಗಿರಿ ಪಿಜಿಯಿಂದ ಮೈಸೂರಿಗೆ ಹೊಸ ವರ್ಷ ಆಚರಣೆಗಾಗಿ ಪ್ರವಾಸಕ್ಕೆ ಹೋಗಬೇಕೆಂದು ಹೈದರಾಬಾದ್ ನಿವಾಸಿ ಎಂದು ಹೇಳಿಕೊಂಡಿದ್ದ ಸಯ್ಯದ್ ಅಲೀಂ ಎಂಬಾತ ಇವರ ಕಾರನ್ನು ಬುಕ್ ಮಾಡಿದ್ದಾನೆ.

ಅಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನಿಂದ ಹೊರಟು ಮೈಸೂರಿನಲ್ಲಿ ಹೊಸ ವರ್ಷ ಆಚರಿಸಿದ ನಂತರ ಕೆಲ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಜ.1ರಂದು ರಾತ್ರಿ ಮಂಡ್ಯದ ಅಮರಾವತಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾನೆ. ಈ ವೇಳೆ ಚಾಲಕ ಉಮೇಶ್ ಪ್ರವಾಸಿಗನನ್ನು ಹೋಟೆಲ್‌ನಲ್ಲೇ ಬಿಟ್ಟು ಮಂಡ್ಯದ ಬಂದೀಗೌಡ ಲೇಔಟ್‌ನಲ್ಲಿರುವ ತನ್ನ ಸ್ನೇಹಿತನ ಮನೆಯಲ್ಲಿ ಉಳಿದುಕೊಂಡಿದ್ದಾನೆ. ಅಂದು ರಾತ್ರಿ ಚಾಲಕನಿಗೆ ಕರೆ ಮಾಡಿದ ಸಯ್ಯದ್ ಅಲೀಂ ತನಗೆ ಅರ್ಜೆಂಟಾಗಿ ಲ್ಯಾಪ್‌ಟಾಪ್ ಬೇಕಾಗಿದೆ ಎಂದು ಹೇಳಿದಾಗ ಚಾಲಕ ತನ್ನ ಸ್ನೇಹಿತನ ಮಗನ ಲ್ಯಾಪ್‌ಟಾಪ್ ಅನ್ನು ಸಯ್ಯದ್ ಅಲೀಂಗೆ ಕೊಟ್ಟು ಸ್ನೇಹಿತನ ಮನೆಗೆ ವಾಪಸ್ ಬಂದಿದ್ದಾನೆ.

ಜ.3ರಂದು ಬೆಳಗ್ಗೆ ಚಾಲಕನಿಗೆ ಕರೆ ಮಾಡಿದ ಅಲೀಂ ಕಾರು ತರುವಂತೆ ಹೇಳಿದಾಗ ಉಮೇಶ್ ಅಮರಾವತಿ ಹೋಟೆಲ್‌ಗೆ ತೆರಳಿದ್ದಾನೆ. ನಾನು ಅರ್ಜೆಂಟಾಗಿ ಬೆಂಗಳೂರಿಗೆ ಹೋಗಬೇಕಾಗಿದೆ ಎಂದು ತಿಳಿಸಿದ ಸಯ್ಯದ್ ಅಲೀಂ, ಚಾಲಕನನ್ನು ಸ್ನಾನ ಮಾಡಿಕೊಳ್ಳುವಂತೆ ಹೇಳಿದ್ದಾನೆ. ಚಾಲಕ ಸ್ನಾನ ಮಾಡಿ ಬರುವಷ್ಟರಲ್ಲಿ ಸಯ್ಯದ್ ಅಲೀಂ ಕಾರು, ಲ್ಯಾಪ್‌ಟಾಪ್ ಹಾಗೂ ಕಾರಿನ ದಾಖಲೆಗಳೊಂದಿಗೆ ಪರಾರಿಯಾಗಿದ್ದಾನೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಮಾರಸ್ವಾಮಿ ಸರಿಯಾಗಿ ಆಡಳಿತ ನಡೆಸಲಿಲ್ಲ; ಹಾಗಾಗಿ ನಾವು ಬಾಂಬೆಗೆ ಹೋಗಬೇಕಾಗಿ ಬಂತು...



● ಮಾಜಿ ಸಿಎಂ ಕುಮಾರಸ್ವಾಮಿಗೆ ಸಹಕಾರ ಸಚಿವ ಸೋಮಶೇಖರ್ ತಿರುಗೇಟು ● ಯಾರ್‍ಯಾರೋ ಬಂದು ಸೆಲ್ಫಿ ತೊಗೋತ್ತಾರೆ ಅವರ್‍ನೆಲ್ಲಾ ಕೇಳಕ್ಕಾಗುತ್ತಾ...: ಸ್ಯಾಂಟ್ರೋ ರವಿಯೊಂದಿಗಿನ ಫೋಟೋಗೆ ಪ್ರತಿಕ್ರಿಯೆ

ಮೈಸೂರು, ಜ.6(ಎಸ್‌ಬಿಡಿ)– ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರಿಂದ ಆಡಳಿತ ನಡೆಸಲು ಸಾಧ್ಯವಾಗಲಿಲ್ಲ ಎನ್ನುವ ಕಾರಣಕ್ಕೆ ಜೆಡಿಎಸ್ ಹಾಗೂ ಕಾಂಗ್ರೆಸ್ ಶಾಸಕರು ಹೊರಹೋಗಬೇಕಾಯ್ತು. ಆದರೆ 'ಕುಣಿಯಲಾರದ ..... ನೆಲ ಡೊಂಕು ಎನ್ನುವಂತೆ' 3 ವರ್ಷದ ನಂತರ ಚುನಾವಣೆ ಸಂದರ್ಭದಲ್ಲಿ ಅವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಸಹಕಾರ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಸಮ್ಮಿಶ್ರ ಸರ್ಕಾರ ಕೆಡವಿದ ಶಾಸಕರು ಮುಂಬೈನಲ್ಲಿದ್ದಾಗ ಮೋಜು ಮಸ್ತಿಗಾಗಿ ಸ್ಯಾಂಟ್ರೋ ರವಿ ಹುಡುಗಿಯರನ್ನು ಸಪ್ಲೈ ಮಾಡಿದ್ದಾನೆಂಬ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ ಆರೋಪಕ್ಕೆ ಮೈಸೂರಿನ ಬಿಜೆಪಿ ಕಚೇರಿ ಬಳಿ ಶುಕ್ರವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಚುನಾವಣೆಯಲ್ಲಿ ಗೆಲ್ಲಲಾಗದ ಸಂದರ್ಭದಲ್ಲಿ 'ಕುಣಿಯಲಾಗದ ..... ನೆಲ ಡೊಂಕು ಎಂದಳಂತೆ' ಎನ್ನುವಂತೆ ಕುಮಾರಸ್ವಾಮಿ ಈ ರೀತಿ ಮಾತನಾಡುತ್ತಿದ್ದಾರೆ. ಕುಮಾರಸ್ವಾಮಿ ಅವರಿಂದ ಸರ್ಕಾರ ನಡೆಸಲು ಆಗಲಿಲ್ಲ. ಒಂದು ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಕುಳಿತು ಆಡಳಿತ ನಡೆಸುತ್ತಾರೆ ಎಂಬ ಒಂದೇ ಕಾರಣಕ್ಕೆ ನಾವು ಪಕ್ಷ ಬಿಡಬೇಕಾಯ್ತು. ಆಗಿನ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಬಾಯಿಸಿದ್ದರೆ 5 ವರ್ಷ ಅವರೇ ಮುಖ್ಯಮಂತ್ರಿ ಆಗಿರುತ್ತಿದ್ದರು ಎಂದರು.

ತನಿಖೆ ನಡೆಸಲಿ: ಜೆಡಿಎಸ್ ಶಾಸಕರು ಹಾಗೂ ಕಾರ್ಯಕರ್ತರೇ ಕುಮಾರಸ್ವಾಮಿ ಅವರನ್ನು ನಮ್ಮ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವ ಪರಿಸ್ಥಿತಿ ಇರಲಿಲ್ಲ. ಅದನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಚುನಾವಣೆ ಸಂದರ್ಭದಲ್ಲಿ ಈ ರೀತಿ ಮಾತನ್ನಾಡುತ್ತಿದ್ದಾರೆ. ಇದಕ್ಕೆ ನಮ್ಮ ಪಕ್ಷದ ಎಂಎಲ್‌ಸಿ ಹೆಚ್.ವಿಶ್ವನಾಥ್ ಅವರೂ ಪ್ರತಿಕ್ರಿಯೆ ನೀಡಿದ್ದಾರೆ. ಈ ಬಗ್ಗೆ ಪದೇ ಪದೆ ಮಾತನಾಡುವ ಅಗತ್ಯವಿಲ್ಲ. ಯಾರು ಏನೇ ಆರೋಪ ಮಾಡಲಿ, ಆ ಬಗ್ಗೆ ಲಿಖಿತ ದೂರು ನೀಡಲಿ. ಮುಖ್ಯಮಂತ್ರಿಗಳಿಗೆ ಪರಮಾಧಿಕಾರವಿದೆ. ಯಾವ ತನಿಖೆಯಾದರೂ ಆಗಲಿ ಎಂದು ಸವಾಲು ಹಾಕಿದರು.

ದಂಧೆ ಮಾಡೋರಿಗೇ ಗೊತ್ತು: ಸ್ಯಾಂಟ್ರೋ ರವಿಗೆ ಆಡಳಿತ ಪಕ್ಷದ ಸಚಿವರು ಹಾಗೂ ಶಾಸಕರೊಂದಿಗೆ ಒಡನಾಟವಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಸ್ಯಾಂಟ್ರೋ ರವಿ ಯಾರೆಂದು ನಮಗೆ ಮಾಹಿತಿ ಇಲ್ಲ. ಆ ರೀತಿಯ ದಂಧೆ ಮಾಡುವವರು ರಾಜಕಾರಣದಲ್ಲಿ ಯಾರೂ ಇಲ್ಲ. ಯಾರು ಆ ದಂಧೆಯಲ್ಲಿ ಇದ್ದಾರೋ ಅಥವಾ ದಂಧೆ ಮಾಡಿಸಿಕೊಳ್ಳುತ್ತಾರೋ ಅವರಿಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾವು ಅಪ್ಪ-ಅಮ್ಮನಿಗೆ ಹುಟ್ಟಿರೋರು. ಅದರಂತೆ ರಾಜಕೀಯ ಮಾಡಿಕೊಂಡು ಬಂದಿದ್ದೇವೆ. ನಮ್ಮಪ್ಪ ಮುಖ್ಯಮಂತ್ರಿ, ಪ್ರಧಾನಮಂತ್ರಿ ಅಲ್ಲ. ಒಬ್ಬ ಸಾಮಾನ್ಯ ವೆಟರ್ನರಿ ಸ್ಟಾಕ್ ಇನ್ಸ್‌ಪೆಕ್ಟರ್ ಮಗನಾದ ನಾನು ಇಂದು ರಾಜ್ಯದ ಸಹಕಾರ ಸಚಿವನಾಗಬೇಕಾದರೆ ತಂದೆ–ತಾಯಿ ಕಲಿಸಿರುವ ಸಂಸ್ಕಾರ ಕಾರಣ. ಹೀಗೆ ಕರ್ನಾಟಕದ ಜನರ ಸೇವೆ ಮಾಡುವ ಅವಕಾಶವನ್ನು ನಮ್ಮ ಪಕ್ಷ ನೀಡಿದೆ. ನಾವು ಅನ್ನ ತಿನ್ನುತ್ತೇವೆ. ಆಪಾದಿಸುವಾಗ ದ್ವೇಷದ ರಾಜಕಾರಣ ಮಾಡಬಾರದು, ಚುನಾವಣೆಯಲ್ಲಿ ಎದುರಿಸಬೇಕು ಎಂದು ಕಿಡಿಕಾರಿದರು.

ಪೂರ್ವಾಪರ ಕೇಳಲಾದೀತೆ: ಬಿಜೆಪಿ ನಾಯಕರೊಂದಿಗೆ ಸ್ಯಾಂಟ್ರೋ ರವಿ ಇರುವ ಫೋಟೋ ವೈರಲ್ ಬಗ್ಗೆ ಪ್ರತಿಕ್ರಿಯಿಸಿ, ನಮ್ಮನ್ನು ನಿತ್ಯ ಹಲವಾರು ಮಂದಿ ಭೇಟಿಯಾಗುತ್ತಾರೆ. ಒಬ್ಬ ಸಾಮಾನ್ಯ ಸಚಿವನಾದ ನನ್ನೊಂದಿಗೆ ಸೆಲ್ಫೀ ತೆಗೆದುಕೊಳ್ಳಲು 30–40 ಜನ ಬರುತ್ತಾರೆ. ಆಗಲ್ಲ ಎಂದರೆ ದುರಹಂಕಾರಿ ಮಂತ್ರಿ ಎನ್ನುತ್ತಾರೆ. ಸೆಲ್ಫಿ ತೆಗೆದುಕೊಂಡು ಅವರ ಮೊಬೈಲ್ ಸ್ಟೇಟಸ್‌ನಲ್ಲಿ ಹಾಕಿಕೊಳ್ಳುತ್ತಾರೆ. ಹೀಗೆ ಫೋಟೋ ತೆಗೆದುಕೊಳ್ಳುವಾಗ ನಿಮ್ಮ ಹೆಸರೇನು, ಏನು ಕೆಲಸ ಮಾಡ್ತೀರಿ, ಎಲ್ಲಿಯವರು ಎಂದೆಲ್ಲಾ ಪೂರ್ವಾಪರ ವಿಚಾರಿಸಲು ಸಾಧ್ಯವೇ ಹೇಳಿ. ಅಧಿಕಾರದಲ್ಲಿದ್ದಾಗ ಹತ್ತಿರ ಸಂಬಂಧಿ, ದೂರದ ಸಂಬಂಧಿ, ಹೆಂಡತಿ ಕಡೆಯನೆಂಟ ಎಂದೆಲ್ಲಾ ಹೇಳಿಕೊಳ್ಳುತ್ತಾರೆ. ಇದಕ್ಕೆಲ್ಲಾ ಏನು ಮಾಡಲಾಗದು ಎಂದರು.

ಅಮಿತ್ ಷಾ ಬಗ್ಗೆ ಭಯ: ಅಮಿತ್ ಷಾ ನಮ್ಮ ದೇಶದ ಚಾಣಕ್ಯ. ಕರ್ನಾಟಕದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕೆಂಬ ಆಶಯದಿಂದ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಉತ್ತಮ ಕೆಲಸ ಮಾಡಿದೆ. ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪನವರು ಹಾಗೂ ಬಸವರಾಜ ಬೊಮ್ಮಾಯಿ ಅವರು ಉತ್ತಮ ಆಡಳಿತ ನೀಡಿದ್ದಾರೆ. ಮುಂದಿನ ಚುನಾವಣೆಯಲ್ಲಿ 150 ಸ್ಥಾನದ ಗುರಿ ಇದೆ. ಬೂತ್ ಅಭಿಯಾನ, ಚುನಾವಣಾ ಪ್ರಚಾರದ ರೀತಿಯಲ್ಲಿ ಯಶಸ್ವಿಯಾಗುತ್ತಿದೆ. ಜಾತಿ, ಮತ ಬೇಧವಿಲ್ಲದೆ ಜನ ಬೆಂಬಲಿಸಿದ್ದಾರೆ. ಹಾಗಾಗಿ ಚಾಣಕ್ಯ ಅಮಿತ್ ಷಾ ಏನಾದರೂ ಮಾಡಿಬಿಡುತ್ತಾರೆಂದು ಹೀಗೆ ಏನೇನೋ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ಎಳಸು: ವಿಧಾನಸೌಧವನ್ನು ಶಾಪಿಂಗ್ ಮಾಲ್ ಎಂದಿರುವ ಪ್ರಿಯಾಂಕ್ ಖರ್ಗೆ ಎಳಸು, ಅವರಿಗೆ ಬುದ್ಧಿ ಕಮ್ಮಿ. ಕೆಂಗಲ್ ಹನುಮಂತಯ್ಯ ಅವರು ಕಟ್ಟಿದ ವಿಧಾನಸೌಧ ರಾಜ್ಯದ ಸುರಕ್ಷತೆಗಿರುವ ಶಕ್ತಿಕೇಂದ್ರ, ವಿಧಾನಸೌಧವನ್ನು ಶಾಪಿಂಗ್ ಮಾಲ್‌ಗೆ ಹೋಲಿಸುವುದು ಸರಿಯಲ್ಲ. ಯಾರೇ ಆಗಲಿ ಯೋಚನೆ ಮಾಡಿ ಮಾತನಾಡಬೇಕು. ಕಾಂಗ್ರೆಸ್ ಸರ್ಕಾರದ 5 ವರ್ಷದ ಆಡಳಿತವನ್ನೂ ನಾನು ಹತ್ತಿರದಿಂದ ನೋಡಿದ್ದೀನಿ. ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ ಕಚೇರಿಯಲ್ಲಿ 25 ಲಕ್ಷ ಸಿಕ್ಕಿತ್ತು. ತನಿಖೆಗೆ ಆದೇಶ ಮಾಡಿ ಪ್ರಕರಣ ಮುಚ್ಚಿ ಹಾಕಲಾಯಿತು. ವಿಧಾನಸೌಧಕ್ಕೆ ಯಾರೋ ಬರ್ತಾರೆ, ಯಾರೋ ಹೋಗ್ತಾರೆ. ಹಾಗಂತ ಈ ರೀತಿ ಹೋಲಿಕೆ ಮಾಡುವವರನ್ನು ಜನ ಶಾಸಕ ಎನ್ನುತ್ತಾರಾ. ನೀವು ಸಚಿವರಾಗಿದ್ದಾಗ ಅದು ಶಾಪಿಂಗ್ ಮಾಲ್ ಅನ್ನಿಸಲಿಲ್ಲವಾ. ಮಾತನಾಡುವ ಭರದಲ್ಲಿ ಏನೇನೋ ಹೇಳಬಾರದು ಎಂದರು.

ಕೋವಿಡ್ ಬಂದಾಗಿನಿಂದ ಸಿದ್ದರಾಮಯ್ಯ ಏನೇನೋ ಮಾತಾಡ್ತಾರೆ...

ಮೈಸೂರು: ಸಿದ್ದರಾಮಯ್ಯನವರಿಗೆ ಕೋವಿಡ್ ಬಂದಾಗಿನಿಂದ ಏನೇನೋ ಮಾತನಾಡುತ್ತಾರೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಿಮರಿ ಎಂದು ಟೀಕಿಸಿದ್ದಕ್ಕೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯನವರಿಗೆ ಯಾವಾಗ ಕೋವಿಡ್ ಬಂತೋ ಆಗಿನಿಂದ ಏನು ಮಾತಾಡುತ್ತಾರೋ ಅನ್ನೋದೇ ಗೊತ್ತಾಗುತ್ತಿಲ್ಲ. ಅವರೂ 5 ವರ್ಷ ಮುಖ್ಯಮಂತ್ರಿಯಾಗಿ ಆಡಳಿತ ಮಾಡಿದ್ದಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರ ಮುಂದೆ ನಿಂತು ಇದೇ ರೀತಿ ವೀರಾವೇಶದಿಂದ ಮಾತಾಡುತ್ತಾರಾ. ಮುಖ್ಯಮಂತ್ರಿ ಬೊಮ್ಮಾಯಿ ಅವರು ಹೆದರಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಪ್ರಧಾನಮಂತ್ರಿ ಅವರ ಬಳಿ ಹೋಗಿ ಕರ್ನಾಟಕಕ್ಕೆ ಏನೆಲ್ಲಾ ಆಗಬೇಕು ಅದೆಲ್ಲವನ್ನೂ ಕೂಡ ಮಾಡಿಸಿಕೊಂಡು ಬರುತ್ತಿದ್ದಾರೆ. ವಿಶ್ವ ಮೆಚ್ಚಿದ ಅಗ್ರಗಣ್ಯ ನಾಯಕರಾದ ಪ್ರಧಾನಿ ಮೋದಿ ಅವರಿಗೆ, ಅವರ ಸ್ಥಾನಕ್ಕೆ ನೀಡಬೇಕಾದ ಗೌರವ ನೀಡುವುದರಲ್ಲಿ ತಪ್ಪೇನಿದೆ. ಮೋದಿ ಅವರು ಸಾಮಾನ್ಯ ಕಾರ್ಯಕರ್ತನಿಗೂ ಸೆಲ್ಫೀ ನೀಡಿ, ಅವರ ಭಾವನೆಯನ್ನು ಗೌರವಿಸುತ್ತಾರೆ ಸಿದ್ದರಾಮಯ್ಯನವರು ಮಾಡುತ್ತಾರಾ. 5 ವರ್ಷ ಸಿಎಂ ಆಗಿದ್ದವರು ನಮ್ಮ ಮುಖ್ಯಮಂತ್ರಿಯನ್ನು ನಾಯಿಮರಿಗೆ ಹೋಲಿಸಿದ್ದು ಸರಿಯಲ್ಲ ಎಂದರು.

> ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಲು ಕ್ಯಾಬಿನೆಟ್‌ನಲ್ಲಿ ನಾನೇ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಅವರೂ ಸ್ಥಳ ಪರಿಶೀಲನೆ ಮಾಡಿದ್ದಾರೆ. ಮುಡಾ ಅಥವಾ ಸಮಾಜ ಕಲ್ಯಾಣ ಇಲಾಖೆ ಕಾಮಗಾರಿ ಮುಂದುವರೆಸಬೇಕೋ ಎನ್ನುವುದನ್ನು ಶೀಘ್ರದಲ್ಲೇ ನಿರ್ಧರಿಸಿ, ಕಾಮಗಾರಿ ಪೂರ್ಣಗೊಳಿಸಲಾಗುವುದು.
> -ಎಸ್.ಟಿ.ಸೋಮಶೇಖರ್

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ



ಮೈಸೂರು,ಜ.6(ಪಿಎಂ)– ವಿಧಾನಸಭಾ ಚುನಾವಣೆಗೆ ಮತಗಟ್ಟೆ ಹಂತದಲ್ಲಿ ಪಕ್ಷ ಸಜ್ಜುಗೊಳಿಸಲು ಬಿಜೆಪಿ ರಾಜ್ಯಾದ್ಯಂತ ಬೂತ್ ವಿಜಯ ಅಭಿಯಾನ ಹಮ್ಮಿಕೊಂಡಿದ್ದು, ಅದರಂತೆ ಚಾಮುಂಡೇಶ್ವರಿ ಕ್ಷೇತ್ರದ ಬೂತ್ ವಿಜಯ ಅಭಿಯಾನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರಿನ ಶಾರದಾ ಮಹಾಶಕ್ತಿ ಕೇಂದ್ರದ ಬೂತ್ ನಂಬರ್ 163ರ ಬೂತ್ ಅಧ್ಯಕ್ಷರ ಮನೆ ಆವರಣದಲ್ಲಿ ಬಿಜೆಪಿ ಧ್ವಜ ಹಾರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನಂತರ ಬೂತ್ ಕಮಿಟಿ ಪರಿಶೀಲನೆ ನಡೆಸಿ ಮಾತನಾಡಿದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಪ್ರತಿಯೊಬ್ಬ ಕಾರ್ಯಕರ್ತರು ತಮ್ಮ ಬೂತ್‌ಗಳಲ್ಲಿ ಹೆಚ್ಚು ಶ್ರದ್ಧೆಯಿಂದ ಸಂಘಟನೆ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಜನರಿಗೆ ತಮ್ಮ ಬೂತ್ ಮಟ್ಟದಲ್ಲಿ ಕಾರ್ಯಕರ್ತರು ತಲುಪಿಸಬೇಕು ಎಂದು ತಿಳಿಸಿದರು.

ಬೂತ್ ಮಟ್ಟದಲ್ಲಿ ನಾವು ಹೆಚ್ಚು ಶ್ರಮವಹಿಸಿ ಪಕ್ಷ ಸಂಘಟಿಸಿದರೆ ಯಾವುದೇ ಕ್ಷೇತ್ರವನ್ನು ಗೆಲ್ಲುವುದು ಕಷ್ಟಕರವಲ್ಲ. ಪ್ರತಿ ಬೂತ್‌ಗಳಲ್ಲಿ ವಾಟ್ಸಪ್ ಗ್ರೂಪ್ ರಚಿಸಿ ಎಲ್ಲಾ ಕಾರ್ಯಕ್ರಮಗಳನ್ನು ಬೂತ್ ಮಟ್ಟದಲ್ಲಿ ಆಯೋಜಿಸಬೇಕೆಂದು ಹೇಳಿದರು. ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಬಿ.ಎಂ.ರಘು, ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ರಾಜಮಣಿ, ಈರೇಗೌಡ, 163ರ ಬೂತ್ ಅಧ್ಯಕ್ಷೆ ವಿನುತಾ ಪ್ರಸನ್ನ, ಕಾರ್ಯದರ್ಶಿ ಕಾಂತರಾಜ್‌ಶೆಟ್ಟಿ, ಮುಖಂಡರಾದ ಗೀತಾ ಮಹೇಶ್, ರಾಮಬಾಯಿ, ಹಿರಿಯಣ್ಣ, ಭಾಗ್ಯಮ್ಮ, ಕಲಾವತಿ, ಅಭಿಷೇಕ್, ಸುಮಿತ್ರಾ ಮತ್ತಿತರರು ಹಾಜರಿದ್ದರು.

ನ್ಯಾಯ ಬೆಲೆ ಅಂಗಡಿಗಳಿಗೆ ಕೇಂದ್ರದ ಆಹಾರ ಇಲಾಖೆಯ ಅಧಿಕಾರಿಗಳ ಭೇಟಿ, ಪರಿಶೀಲನೆ



ಮೈಸೂರು ಜ.6–ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಆಹಾರ ಧಾನ್ಯಗಳ ವಿತರಣೆ ಕುರಿತು ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಹಿರಿಯ ಅಧಿಕಾರಿಗಳು ಶುಕ್ರವಾರ ಮೈಸೂರು ನಗರ ಮತ್ತು ಜಿಲ್ಲೆಯ ವಿವಿಧ ನ್ಯಾಯ ಬೆಲೆ ಅಂಗಡಿಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಅಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಸಾರ್ವಜನಿಕರಿಗೆ ನೀಡುತ್ತಿರುವ ಪಡಿತರ ಪದಾರ್ಥಗಳು ಪಡಿತರದಾರರಿಗೆ ಸರಿಯಾಗಿ ತಲುಪುತ್ತಿದೆಯೇ, ಏನಾದರೂ ಲೋಪ–ದೋಷಗಳಿವೆಯೇ, ಗುಣಮಟ್ಟ ಮತ್ತು ತೂಕದಲ್ಲಿ ವ್ಯತ್ಯಾಸಗಳಿವೆಯೇ ಎಂಬುದರ ಕುರಿತು ಕೇಂದ್ರದ ಅಧಿಕಾರಿಗಳು ನ್ಯಾಯ ಬೆಲೆ ಅಂಗಡಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಪಡಿತರದಾರರಿಂದಲೂ ಮಾಹಿತಿ ಸಂಗ್ರಹಿಸಿದರು.

ಇಂದು ನಡೆಸಿದ ಪರಿಶೀಲನೆಯಲ್ಲಿ ಎಲ್ಲಿಯೂ, ಯಾವುದೇ ಲೋಪ–ದೋಷಗಳು ಕಂಡುಬಂದಿಲ್ಲ. ಜೊತೆಗೆ ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದನ್ನು ಕಂಡು ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧಿಕಾರಿಗಳಾದ ಅವಿಕ್ ಭಟ್ಟಾಚಾರ್ಯ, ರಾಜೀವ್ ರಂಜನ್, ಮೈಸೂರು ನಗರ ಮತ್ತು ತಾಲೂಕಿನ ನ್ಯಾಯ ಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದೇ ರೀತಿ ತಿ.ನರಸೀಪುರ ಮತ್ತು ನಂಜನಗೂಡು ತಾಲೂಕಿನ ನ್ಯಾಯ ಬೆಲೆ ಅಂಗಡಿಗಳಿಗೂ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಸಹಾಯಕ ನಿರ್ದೇಶಕರು, ಆಹಾರ ಶಿರಸ್ತೇದಾರರು ಮತ್ತು ಆಹಾರ ನಿರೀಕ್ಷಕರು ಉಪಸ್ಥಿತರಿದ್ದು, ಕೇಂದ್ರದ ತಂಡಕ್ಕೆ ಅಗತ್ಯ ಮಾಹಿತಿಗಳನ್ನು ನೀಡಿದರು.

ಇಂದು ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ವಾರ್ಷಿಕೋತ್ಸವ

ಮೈಸೂರು,ಜ.6(ಪಿಎಂ)– ಕುವೆಂಪು ನಗರದಲ್ಲಿರುವ ನಾಗರಿಕ ವೇದಿಕೆ ಅಧೀನದ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ಶಾಲಾ ವಾರ್ಷಿಕೋತ್ಸವವು ಜನವರಿ 7ರಂದು ನಡೆಯಲಿದೆ.

ಮೈಸೂರಿನ ಕುವೆಂಪುನಗರದ ವೀಣೆ ಶೇಷಣ್ಣ ಭವನದ ಗಾನಭಾರತಿ ಬಯಲು ರಂಗ ಮಂದಿರದಲ್ಲಿ ಅಂದು ಸಂಜೆ 5ಕ್ಕೆ ವಾರ್ಷಿಕೋತ್ಸವ ನಡೆಯಲಿದೆ. ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಉದ್ಘಾಟಿಸಲಿದ್ದು, ನಾಗರಿಕ ವೇದಿಕೆ ಅಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಚಲನಚಿತ್ರ ನಟ ಪವನ್‌ತೇಜ್, ಅಂತಾರಾಷ್ಟ್ರೀಯ ಕ್ರೀಡಾಪಟು ಎಂ.ಡಿ.ನಾಗೇಂದ್ರ ಪಾಲ್ಗೊಳ್ಳಲಿದ್ದಾರೆ.

ಇದೇ ವೇಳೆ ನಾಗರಿಕ ವೇದಿಕೆ ವತಿಯಿಂದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರು (ಕೆಬಿಜಿ) ಒಳಗೊಂಡಂತೆ ವೇದಿಕೆಯ ಹಿರಿಯ ಸದಸ್ಯರಾದ ಕೆ.ಕೆ.ದೇವಮ್ಮ, ಸಿ.ನರಸೇಗೌಡ, ಸಿ.ರಾಮೇಗೌಡ, ಎಲ್.ವಿವೇಕಾನಂದ, ಹೆಚ್.ಎಂ.ಗೌಡೇಗೌಡ, ಬಿ.ಪಿ.ಸುರೇಶ್, ನರೇಂದ್ರಸಿಂಗ್, ಕೆ.ಆರ್.ಶ್ರೀರಂಗಯ್ಯ, ಲಕ್ಷ್ಮಮ್ಮ ಮತ್ತು ಬಿ.ಶಂಭು ಅವರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ಶಾಲೆಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿಗಳೇ, ಸಚಿವರುಗಳೇ ನಿಮಗೂ, ಸ್ಯಾಂಟ್ರೊ ರವಿಗೂ ಏನು ಸಂಬಂಧ...!

● ಕೆಪಿಸಿಸಿ ಸರಣಿ ಟ್ವೀಟ್‌ಗಳ ಮೂಲಕ ಮಾರ್ಮಿಕ ಪ್ರಶ್ನೆ ● ವಿಧಾನಸೌಧ, ಕುಮಾರಕೃಪಕ್ಕೆ ಸ್ಯಾಂಟ್ರೊ ರವಿ ಕೂಡಿದ್ದು ಯಾರು...!



ಕಂತೆ ಕಂತೆ ಹಣದೊಂದಿಗೆ ಸ್ಯಾಂಟ್ರೋ ರವಿ



ಗೃಹ ಸಚಿವರೊಂದಿಗೆ ಸ್ಯಾಂಟ್ರೋ ರವಿ






ಆರೋಗ್ಯ ಸಚಿವ ಡಾ. ಸುಧಾಕರ್ ಜೊತೆ ಸ್ಯಾಂಟ್ರೋ ರವಿ



ಶಿಕ್ಷಣ ಸಚಿವ ನಾಗೇಶ್‌ರೊಂದಿಗೆ ಸ್ಯಾಂಟ್ರೋ ರವಿ



ಐಷರಾಮಿ ಸ್ಥಳದಲ್ಲಿ ಭಾರೀ ಹಣದೊಂದಿಗೆ ಸ್ಯಾಂಟ್ರೋ ರವಿ

ಮೈಸೂರು, ಜ. 6– ವೇಶ್ಯಾವಾಟಿಕೆ ಹಾಗೂ ವರ್ಗಾವಣೆ ದಂಧೆಯ ಕಿಂಗ್‌ಪಿನ್ ಸ್ಯಾಂಟ್ರೊ ರವಿಯೊಂದಿಗೆ ಸಚಿವರು ಇರುವ ಕೆಲವು ಫೋಟೋಗಳನ್ನು ಟ್ವಿಟರ್‌ನಲ್ಲಿ ಅಪ್‌ಲೋಡ್ ಮಾಡಿರುವ ಕೆಪಿಸಿಸಿ, ರಾಜ್ಯದಲ್ಲಿ ಯಾರು ಸರ್ಕಾರವನ್ನು ನಡೆಸುತ್ತಿದ್ದಾರೆ ಎಂಬ ಗೊಂದಲ ಜನರಲ್ಲಿ ಉಂಟಾಗಿದೆ ಎಂದು ಹೇಳುವುದರೊಂದಿಗೆ ಕರ್ನಾಟಕ ಬಿಜೆಪಿ ಸರ್ಕಾರವನ್ನು ಪಿಂಪ್‌ಗಳು ನಿಯಂತ್ರಿಸುತ್ತಿದ್ದಾರೆಯೇ? ಎಂದು ಪ್ರಶ್ನಿಸಿದೆ.

ಗೃಹ ಸಚಿವ ಆರಗ ಜ್ಞಾನೇಂದ್ರ, ಆರೋಗ್ಯ ಸಚಿವ ಡಾ. ಕೆ ಸುಧಾಕರ್, ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ರನ ಜೊತೆ ಸ್ಯಾಂಟ್ರೊ ರವಿ ಇರುವ ಫೋಟೋಗಳೊಂದಿಗೆ ಕೆಪಿಸಿಸಿ ಸರಣಿ ಟ್ವೀಟ್ ಮಾಡಿದೆ.

ವಿಧಾನಸೌಧ ಕುಮಾರ ಕೃಪವೇ ಸ್ಯಾಂಟ್ರೊ ರವಿ ಕರ್ಮಭೂಮಿ. ಆಡಳಿತ ಪಕ್ಷದ ಮಂತ್ರಿಗಳು, ಅಧಿಕಾರಿಗಳೆಲ್ಲ ಇವನ ಜೇಬಿನಲ್ಲಿದ್ದಾರೆ. ಸಚಿವರೊಂದಿಗೆ ಸಹಕರಿಸಲು ಸ್ಯಾಂಟ್ರೊ ರವಿ ಪತ್ನಿಗೆ ಕಿರುಕುಳ ಕೊಟ್ಟಿದ್ದನಂತೆ. ಯಾರು ಆ ಸಚಿವರು ಬೊಮ್ಮಾಯಿಯವರೇ? ಹಾದಿ ಬೀದಿಯಲ್ಲಿರುವ ಅಕ್ರಮ ದಂಧೆಕೋರರು ಕರ್ನಾಟಕ ಬಿಜೆಪಿ ಸರ್ಕಾರವನ್ನು ಅಲ್ಲಾಡಿಸುತ್ತಿದ್ದಾರೆಯೇ ಎಂದು ಕೆಪಿಸಿಸಿ ಪ್ರಶ್ನಿಸಿದೆ.

ಪೊಲೀಸ್ ಅಧಿಕಾರಿಗಳೆಲ್ಲಾ ನನ್ನ ಕೈಯೊಳಗಿದ್ದಾರೆ ಅನ್ನುತ್ತಾನೆ ಸ್ಯಾಂಟ್ರೊ ರವಿ. ವರ್ಗಾವಣೆ ಮಾಡಿಸುವುದು ನನಗೆ ಲೀಲಾಜಾಲ ಎನ್ನುತ್ತಾನೆ. ಗೃಹಸಚಿವರೇ ಅವನ ಆತ್ಮವಿಶ್ವಾಸದ ಹಿಂದಿನ ಶಕ್ತಿಯಾಗಿದ್ದೀರಾ, ವೇಶ್ಯಾವಾಟಿಕೆಯ ಪಿಂಪ್ ನೊಂದಿಗೆ ಆರಗ ಜ್ಞಾನೇಂದ್ರ ಅವರದ್ದೇನು ನೆಂಟಸ್ತಿಕೆ ಎಂದು ಟ್ವೀಟ್ ಮಾಡಲಾಗಿದೆ.

ಕೋಟ್ಯಾಂತರ ರೂ. ಕಂತೆ ಕಂತೆ ನೋಟ್‌ಗಳೊಂದಿಗೆ ಪೋಸ್ ಕೊಡುತ್ತಿರುವ ಸ್ಯಾಂಟ್ರೊ ರವಿ ಮಾಹಿತಿ ಇನ್ನೂ ಐಟಿ ಮತ್ತು ಇಡಿ ಕಚೇರಿಗಳಿಗೆ ತಲುಪಿಲ್ಲವೇ ಅಥವಾ ಈ ಅಕ್ರಮ ಹಣದ ಮೂಲ ಹುಡುಕುವುದು ಇಡಿಗೆ ಇಷ್ಟವಿಲ್ಲವೇ ಅಥವಾ ಕರ್ನಾಟಕ ಬಿಜೆಪಿ ಸರ್ಕಾರದ ಬುಡಕ್ಕೆ ಬರುವ ಸಂಗತಿಯನ್ನು ಮುಟ್ಟದಂತೆ ಯಜಮಾನರ ಆಜ್ಞೆ ಆಗಿದೆಯೇ? ಇಡಿ ದಾಳಿ ಯಾವಾಗ ಎಂದು ಪ್ರಶ್ನಿಸಲಾಗಿದೆ.

ಬಿಜೆಪಿಯ ಎಲ್ಲಾ ಸಚಿವರೂ ವೇಶ್ಯಾವಾಟಿಕೆ ದಂಧೆ, ವರ್ಗಾವಣೆ ದಂಧೆಯ ಸ್ಯಾಂಟ್ರೊ ರವಿಯೊಂದಿಗೆ ಅತ್ಯಾಪ್ತ ಸಂಬಂಧ ಹೊಂದಿದ್ದಾರೆ. ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರೂ ಸ್ಯಾಂಟ್ರೊ ರವಿಯ ಫಲಾನುಭವಿಯೇ? ಕರ್ನಾಟಕ ಬಿಜೆಪಿ ಸರ್ಕಾರವನ್ನು ಪಿಂಪ್‌ಗಳು ನಿಯಂತ್ರಿಸುತ್ತಿದ್ದಾರೆಯೇ. ಕಮಿಷನ್ ಸರ್ಕಾರಕ್ಕೆ ಇನ್ನೆಷ್ಟು ಬ್ರೋಕರ್‌ಗಳಿದ್ದಾರೆ ಎಂದು ಟ್ವೀಟ್ ಮಾಡಲಾಗಿದೆ.

"ಸ್ಯಾಂಟ್ರೊ ರವಿ ನನಗೆ ಪರಿಚಯವೇ ಇಲ್ಲ ಎನ್ನುವ ಬೊಮ್ಮಾಯಿಯವರೇ ನನಗೆ ಸಿಎಂ ನೇರ ಪರಿಚಯ ಎಂದು ರವಿ ಹೇಳಿದ್ದು ಹೇಗೆ, ನಿಮ್ಮ ಪುತ್ರ ಸ್ಯಾಂಟ್ರೊ ರವಿಗೆ ಸ್ವೀಟ್ ಬ್ರದರ್ ಆಗಿರುವುದು ಹೇಗೆ, ನಿಮ್ಮ ಸರ್ಕಾರದ ಬಹುತೇಕ ಸಚಿವರಿಗೆ ಆಪ್ತನಾಗಿರುವ ಸ್ಯಾಂಟ್ರೊ ರವಿ ನಿಮಗೂ ಆಪ್ತನಲ್ಲವೇ, ತಾವು ಆತನನ್ನು ಸಾರ್ ಎಂದು ಸಂಭೋದಿಸುವುದಿಲ್ಲವೇ?" ಎಂದು ಪ್ರಶ್ನಿಸಿದೆ.

ಸರ್ಕಾರಿ ಅತಿಥಿ ಗೃಹವಾದ ಕುಮಾರಕೃಪ ಸ್ಯಾಂಟ್ರೊ ರವಿಯ ಹೆಡ್ ಆಫೀಸ್ ಆಗಿದ್ದು ಹೇಗೆ ಯಾರ ಕೃಪೆಯಿಂದ ಆತನಿಗೆ ಕುಮಾರ ಕೃಪ ಸಿಕ್ಕಿದ್ದು, ಬೊಮ್ಮಾಯಿ ಕೃಪೆಯೇ ಅಥವಾ ಜ್ಞಾನೇಂದ್ರ ಕೃಪೆಯೇ ಎಂದು ಪ್ರಶ್ನಿಸಿರುವ ಕೆಪಿಸಿಸಿ, ವೇಶ್ಯಾವಾಟಿಕೆ ದಂಧೆಯ ಸ್ಯಾಂಟ್ರೊ ರವಿ ಜೊತೆ ಸಾಲು ಸಾಲು ಕರ್ನಾಟಕ ಬಿಜೆಪಿ ಸರ್ಕಾರದ ಸಚಿವರು ಆಪ್ತರಾಗಿರುವುದು ಹೇಗೆ, ಸಚಿವರು ಸಿಡಿಗೆ ತಡೆಯಾಜ್ಞೆ ತಂದಿರುವುದಕ್ಕೂ ಈತನಿಗೆ ಸಚಿವರೊಂದಿಗಿನ ಆಪ್ತತೆಗೂ, ಈತನ ದಂಧೆಗೂ ಸಂಬಂಧವಿದೆಯೇ, ಡಾ. ಸುಧಾಕರ್‌ರವರೇ ತಮ್ಮ ಸಿಡಿ ತಡೆಯಾಜ್ಞೆಯ ಹಿಂದಿನ ರಹಸ್ಯ ಸ್ಯಾಂಟ್ರೊ ರವಿ ಬಳಿ ಇದೆಯೇ ಎಂದು ಕೆಪಿಸಿಸಿ ಸರಣಿ ಟ್ವೀಟ್‌ನಲ್ಲಿ ಪ್ರಶ್ನಿಸಿದೆ.

ತಿ.ನರಸೀಪುರ ಪುರಸಭೆ ಸರ್ವ ಸದಸ್ಯರ ವಿಶೇಷ ಸಭೆ

ಪರ–ವಿರೋಧದ ನಡುವೆ ಅಭಿವೃದ್ಧಿ ಕಾಮಗಾರಿಗೆ ಅನುಮೋದನೆ

ತಿ.ನರಸೀಪುರ, ಜ.6– ಪಟ್ಟಣದ ಪುರಸಭೆಯಲ್ಲಿ ಶುಕ್ರವಾರ ನಡೆದ ಸರ್ವ ಸದಸ್ಯರ ವಿಶೇಷ ಸಭೆಯಲ್ಲಿ ಪರ ವಿರೋಧದ ನಡುವೆಯೂ ಕೆಲ ಅಭಿವೃದ್ಧಿ ಕಾಮಗಾರಿಗಳಿಗೆ ಸದಸ್ಯರು ಒಪ್ಪಿಗೆ ಸೂಚಿಸಿದರು.

ಟಿ.ಎಂ.ನಂಜುಂಡಸ್ವಾಮಿ ಅಧ್ಯಕ್ಷರಾದ ಬಳಿಕ ನಡೆದ ಚೊಚ್ಚಲ ಸಭೆಯಲ್ಲಿ ಕೆಟ್ಟು ಹೋಗಿರುವ ಬೀದಿ ದೀಪಗಳ ದುರಸ್ತಿ, ರಾಷ್ಟ್ರೀಯ ಹೆದ್ದಾರಿ ಬೀದಿ ದೀಪಗಳಿಗೆ ವಿದ್ಯುತ್ ಸಂಪರ್ಕ ಮರು ಸ್ಥಾಪಿಸಲು ಯು.ಜಿ.ಕೇಬಲ್ ಅಳವಡಿಸುವ ಕಾಮಗಾರಿ, 23 ವಾರ್ಡ್‌ಗಳಿಗೂ ಹೊಸದಾಗಿ ಎಲ್‌ಇಡಿ ದೀಪ ಅಳವಡಿಸುವ ಹಾಗೂ ತರಕಾರಿ ಮಾರುಕಟ್ಟೆಗಾಗಿ ನಿರ್ಮಿಸಲಾಗಿರುವ ಕಟ್ಟಡವನ್ನು ಮಾಂಸ ಮಾರಾಟಗಾರರಿಗೆ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ ವಿಷಯ ಮಂಡನೆಯಾಗಿ, ಸದಸ್ಯರ ಪರ–ವಿರೋಧದ ನಡುವೆಯೂ ಸರ್ವ ಸದಸ್ಯರು ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಿದರು.

ಲಿಂಕ್ ರಸ್ತೆಯ ಮಸೀದಿ ಹಾಗೂ ಪಶು ಆಸ್ಪತ್ರೆ ಮುಂಭಾಗ ವಾಣಿಜ್ಯ ಮಳಿಗೆ ನಿರ್ಮಿಸುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇದಕ್ಕೆ ಮಾಜಿ ಅಧ್ಯಕ್ಷ ಎಸ್.ಮದನ್‌ರಾಜ್ ಹಾಗೂ ಸದಸ್ಯ ಎಲ್.ಮಂಜುನಾಥ್ ವಿರೋಧ ವ್ಯಕ್ತಪಡಿಸಿದರು. ಈಗಾಗಲೇ ನಿರ್ಮಿಸಲಾಗಿರುವ ಮಳಿಗೆಯಿಂದ ಬಾಡಿಗೆ ವಸೂಲಾಗುತ್ತಿಲ್ಲ. ಈಗ ಮತ್ತೆ ವಾಣಿಜ್ಯ ಮಳಿಗೆ ನಿರ್ಮಾಣ ಬೇಡ. ಬದಲಿಗೆ ಉದ್ದೇಶಿತ ಸ್ಥಳದಲ್ಲಿ ಮಾಲ್ ನಿರ್ಮಿಸಿದರೇ ಹೆಚ್ಚಿನ ಬಾಡಿಗೆ ಪಡೆಯಬಹುದು ಎಂದು ಸಲಹೆ ನೀಡಿದರು. ಮತ್ತೆ ಕೆಲ ಸದಸ್ಯರು ವಾಣಿಜ್ಯ ಮಳಿಗೆ ನಿರ್ಮಾಣ ಮಾಡುವುದೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ವಿಷಯಕ್ಕೆ ಸಂಬಂಧಿಸಿದಂತೆ ಕೆಲ ಸಮಯ ಚರ್ಚೆ ನಡೆಯಿತು. ಅಧ್ಯಕ್ಷ ನಂಜುಂಡಸ್ವಾಮಿ ಸದಸ್ಯರೆಲ್ಲರೂ ಒಪ್ಪಿಗೆ ಕೊಟ್ಟಲ್ಲಿ ಸರ್ಕಾರದ ಗಮನಕ್ಕೆ ತರೋಣ, ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದೀರಿ, ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿ ಬೇಡ ಎಂದಾಗ ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು.



ಸದಸ್ಯ ಅರ್ಜುನ್ ರಮೇಶ್ ಮಾತನಾಡಿ, ನೂತನ ಅಧ್ಯಕ್ಷರು ಪಟ್ಟಣದ ಅಭಿವೃದ್ಧಿಗಾಗಿ ನೂತನ ಯೋಜನೆ ಹಾಕಿಕೊಂಡಿದ್ದಾರೆ. ಅವರಿಗೆ ಎಲ್ಲರೂ ಸಹಕರಿಸಬೇಕು. ವಿರೋಧ ಮಾಡುವವರು ಮಾಡುತ್ತಲೇ ಇರುತ್ತಾರೆ. ಅಧ್ಯಕ್ಷರು ಅಭಿವೃದ್ಧಿ ಕಾರ್ಯಕ್ಕೆ ಕೋರಂ ಪರಿಗಣಿಸಿ ಅನುಮೋದನೆ ಪಡೆಯಬೇಕು. ಈ ಹಿಂದೆ ಅಧ್ಯಕ್ಷರಾಗಲೂ ನಿಮ್ಮ ಮೇಲೆ ನಡೆದ ಷಡ್ಯಂತ್ರ ಗಮನದಲ್ಲಿಟ್ಟು ಕೊಂಡು ಕೆಲಸ ಮಾಡಬೇಕು. ನಿಮ್ಮ ಮೇಲೆ ಬಂದಿರುವ ಆರೋಪಗಳಿಗೆ ಉತ್ತರ ನೀಡುವಂತೆ ಅಭಿವೃದ್ಧಿ ಕೆಲಸ ಮಾಡಿ ತೋರಿಸುವುದು ಪ್ರಸ್ತುತ ಸೂಕ್ತವಾಗಿದೆ. ಅಭಿವೃದ್ಧಿ ಕೆಲಸಕ್ಕೆ ನಮ್ಮ ವಿರೋಧವಿಲ್ಲ. ಪಕ್ಷಾತೀತವಾಗಿ ಬೆಂಬಲ ನೀಡುತ್ತೇವೆ. ಒಟ್ಟಾರೆ ಪಟ್ಟಣದ ಅಭಿವೃದ್ಧಿಯಾಗಬೇಕು ಎಂದರು.

2020–21ನೇ ಸಾಲಿನ 15ನೇ ಹಣಕಾಸು ಯೋಜನೆ ಉಳಿಕೆ ಅನುದಾನದಲ್ಲಿ ಪುರಸಭಾ ವ್ಯಾಪ್ತಿಯ ನಂಜನಗೂಡು ಕಾವೇರಿ–ಕಪಿಲಾ ರಸ್ತೆ, ಲಿಂಕ್ ರಸ್ತೆ, ಹೊಸ ಸೇತುವೆ ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬೀದಿ ದೀಪಗಳಿಗಾಗಿ ವಿದ್ಯುತ್ ಮರುಸ್ಥಾಪಿಸಲು 30 ಲಕ್ಷ ರೂ. ವೆಚ್ಚದಲ್ಲಿ ಯು.ಜಿ.ಕೇಬಲ್ ಅಳವಡಿಸುವ ಕಾಮಗಾರಿ, ಆರೋಗ್ಯ ಶಾಖೆಗೆ ಅವಶ್ಯವಿರುವ ಲೋಡರ್ಸ್, ಕ್ಲೀನರ್ಸ್, ಸೂಪರ್‌ವೈಸರ್ ಮತ್ತು ವಾಚ್‌ಮನ್ ಸೇರಿ 14 ಮಂದಿ ಮಾನವ ಸಂಪನ್ಮೂಲ ಪಡೆಯಲು ಕರೆಯಲಾಗಿರುವ ಟೆಂಡರ್‌ಗೆ ಅನುಮೋದನೆ ಮತ್ತು ವಾಹನ ಚಾಲಕರ ಹೊರಗುತ್ತಿಗೆಗೆ ಹೊಸ ಟೆಂಡರ್ ಕರೆಯಲು ಮತ್ತು ಟೆಂಡರ್ ಪ್ರಕ್ರಿಯೆ ಮುಗಿಯುವರೆಗೂ ಹಿಂದಿನ ದರದಂತೆ ಹಾಲಿ ಟೆಂಡರ್ ದಾರರನ್ನು ಮುಂದುವರೆಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು ಹೊಸ ಟೆಂಡರ್ ಕರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು.

2022–23ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಸಕ್ಕಿಂಗ್ ಕಮ್ ಜಕ್ಕಿಂಗ್ ಯಂತ್ರ ಖರೀದಿಸಲು ಜೆಮ್ ಪೋರ್ಟಲ್ ಮೂಲಕ ಕರೆಯಲಾಗಿರುವ ಟೆಂಡರ್‌ಗೆ ಸದಸ್ಯರು ಅನುಮೋದನೆ ನೀಡಿದರು. ಉಳಿಕೆಯಾಗಿರುವ 5.6 ಲಕ್ಷ ಮೊತ್ತದ ಕ್ರಿಯಾ ಯೋಜನೆಗೂ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸಭೆಯಲ್ಲಿ ಮಾಜಿ ಉಪಾಧ್ಯಕ್ಷೆ ಪ್ರೇಮಾ ಮರಯ್ಯ, ಬಾದಾಮಿ ಮಂಜು, ತುಂಬಲ ಪ್ರಕಾಶ್, ಬೇಬಿ ಹೇಮಂತ್, ಎಸ್.ಕೆ.ಕಿರಣ್, ಮೆಡಿಕಲ್ ನಾಗರಾಜು, ಮಹದೇವಮ್ಮ, ರೂಪ ಪರಮೇಶ್, ಮಾದೇವಿ, ಸಿಸ್ಟಮ್ ಸಿದ್ದು, ತೇಜಸ್ವಿನಿ, ರೂಪಾ ಕರಿಯಪ್ಪ, ಶೋಭಾರಾಣಿ ಮಲ್ಲೇಶ್, ರಾಜೇಶ್ವರಿ, ವಸಂತ, ನಾಮನಿರ್ದೇಶಿತ ಸದಸ್ಯರಾದ ಲೋಕೇಶ್, ಚಿಕ್ಕ ಮಹದೇವ, ಮುಖ್ಯಾಧಿಕಾರಿ ಎಚ್.ಆರ್.ಬಸವರಾಜು, ಆರೋಗ್ಯಾಧಿಕಾರಿ ಲೋಕೇಶ್ವರಿ, ಕಾರ್ಯನಿರ್ವಾಹಕ ಅಭಿಯಂತರ ನಿಂಗಯ್ಯ, ಜೆಇ ಸಿದ್ದಯ್ಯ, ಸಮನ್ವಯಾಧಿಕಾರಿ ಮಹದೇವ ಇತರರಿದ್ದರು.

ಯಾರು ವಿರೋಧ ಮಾಡಿಲ್ಲ

ನಂಜುಂಡಸ್ವಾಮಿ ಅಧ್ಯಕ್ಷರಾಗಲೂ ಯಾರೂ ವಿರೋಧ ಮಾಡಿಲ್ಲ. ಕಾಂಗ್ರೆಸ್‌ನ ಎಲ್ಲಾ ಸದಸ್ಯರು ಒಗ್ಗೂಡಿ ಮಾಜಿ ಸಿಎಂ ಸಿದ್ದರಾಮಯ್ಯನವರ ಆದೇಶದಂತೆ ಅವರನ್ನು ಬೆಂಬಲಿಸಿದ್ದೇವೆ. ವಿರೋಧ ವ್ಯಕ್ತಪಡಿಸುವ ಮಾತೇ ಇಲ್ಲ. ನಂಜುಂಡಸ್ವಾಮಿ ಅವರು ಅಧ್ಯಕ್ಷರಾಗಲೂ ಕಾಂಗ್ರೆಸ್ ಸದಸ್ಯರು ತೊಂದರೆ ಕೊಟ್ಟಿಲ್ಲ. ಈ ಹಿಂದೆ ಅಧ್ಯಕ್ಷರಾಗಿದ್ದ ಸೋಮು ಅವರನ್ನು ನಂಬಿಸಿ ಬೆನ್ನಿಗೆ ಚೂರಿ ಹಾಕಿದ್ಯಾರೂ ಎಂಬುದು ನಮಗೂ ಗೊತ್ತಿದೆ. ಹಾಗಾಗಿ ನೂತನ ಅಧ್ಯಕ್ಷರಿಗೆ ಎಲ್ಲರ ಬೆಂಬಲ ಇದೆ. ಪಕ್ಷಾತೀತರ ಬೆಂಬಲ ಬೇಕಿಲ್ಲ.

–ಮದನ್‌ರಾಜ್, ಮಾಜಿ ಪುರಸಭಾಧ್ಯಕ್ಷ.

ರೈತರ ಏಳಿಗೆಗೆ ಸಂಘಟನೆ ಮುಖ್ಯ

ರಾಜ್ಯ ರೈತ ಪರ್ವ ಸಂಘದ ರಾಜ್ಯಾಧ್ಯಕ್ಷ ಅರುಣ್‌ಗೌಡ



ಮಲ್ಕುಂಡಿ, ಜ.6– ರೈತರ ಏಳಿಗೆಗೆ ಸಂಘಟನೆ ಮುಖ್ಯ ಎಂದು ರಾಜ್ಯ ರೈತ ಪರ್ವ ಸಂಘದ ರಾಜ್ಯಾಧ್ಯಕ್ಷ ಅರುಣ್‌ಗೌಡ ತಿಳಿಸಿದರು.

ಇಲ್ಲಿಗೆ ಸಮೀಪದ ಕಪ್ಪಸೋಗೆಯಲ್ಲಿ ರಾಜ್ಯ ರೈತಪರ್ವ ಸಂಘದ ಗ್ರಾಮ ಘಟಕದ ನಾಮಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿ ಮಾಡದೇ ರೈತರ ಬದುಕಿನ ಜೊತೆ ಚೆಲ್ಲಾಟವಾಡುತ್ತಿವೆ. ರೈತರು ಸಾಲ ಮಾಡಿ ಬೆಳೆದ ಫಸಲುಗಳು ಕಾಡು ಪ್ರಾಣಿಗಳ ಹಾವಳಿಯಿಂದ ರೈತರ ಕೈಗೆ ಸೇರುತ್ತಿಲ್ಲ. ಇದ್ದರಿಂದ ರೈತರು ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ದೇಶಕ್ಕೆ ಅನ್ನ ನೀಡುವ ಅನ್ನದಾತ ಆತ್ಮಹತ್ಯೆ ಮಾಡಿಕೊಂಡರೇ ದೇಶಕ್ಕೆ ಅನ್ನ ನೀಡುವವರು ಯಾರು ಎಂಬುದನ್ನು ಸರ್ಕಾರಗಳು ಅರ್ಥ ಮಾಡಿಕೊಳ್ಳಬೇಕಿದೆ. ರೈತರು ಒಗ್ಗಟ್ಟಿನಿಂದ ಸಂಘಟನೆ ಮೂಲಕ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕು ಎಂದರು.

ಈ ವೇಳೆ ರಾಜ್ಯ ರೈತಪರ್ವ ಸಂಘದ ಕಾರ್ಯಾಧ್ಯಕ್ಷ ನಳೀನ್ ಕುಮಾರ್, ಕಾನೂನು ಸಲಹೆಗಾರ ರವೀಂದ್ರ, ತಾಲೂಕು ಅಧ್ಯಕ್ಷ ಕೃಷ್ಣನಾಯಕ, ಉಪಾಧ್ಯಕ್ಷ ಸಕಲೇಶ, ಮಂಜುನಾಥ್, ಮಹೇಶ್, ಗ್ರಾಪಂ ಸದಸ್ಯೆ ಜಯಲಕ್ಷ್ಮಿ, ಗ್ರಾಪಂ ಮಾಜಿ ಅಧ್ಯಕ್ಷೆ ಭಾಗ್ಯ, ಗ್ರಾಮ ಘಟಕದ ಅಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ಮಹೇಶ್ ಸೇರಿದಂತೆ ರೈತರು ಹಾಜರಿದ್ದರು.

ಕುಂದೂರಲ್ಲಿ ಚಿಕ್ಕದೇವಮ್ಮನವರ ಅದ್ದೂರಿ ಜಾತ್ರಾ ಮಹೋತ್ಸವ

ಸರಗೂರು, ಜ.6– ತಾಲೂಕಿನ ಕುಂದೂರು ಗ್ರಾಮದಲ್ಲಿ ಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಿತು.



ಜಾತ್ರಾ ಮಹೋತ್ಸವದ ಅಂಗವಾಗಿ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯದ ಮೂಲೆ ಮೂಲೆಯಿಂದ ಭಕ್ತರು ಆಗಮಿಸಿ ಮುಡಿಸೇವೆ, ಹಣ್ಣು ಕಾಯಿ ಸೇವೆ ಸಲ್ಲಿಸಿದರು. ಅಲ್ಲದೇ ಹರಕೆ ಹೊತ್ತ ಭಕ್ತರು ತಾಯಿಗೆ ಸೀರೆ ಅರ್ಪಿಸುವ ಮೂಲಕ ಹರಕೆ ತೀರಿಸಿ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಜಾತ್ರಾ ಮಹೋತ್ಸವ ಜ.5ರಿಂದ ಜ.8ರವರೆಗೆ ನಡೆಯಲಿದ್ದು, ಗುರುವಾರ ಬೆಟ್ಟದಿಂದ ಚಿಕ್ಕದೇವಮ್ಮನವರ ಉತ್ಸವ ಮೂರ್ತಿಯನ್ನು ಕುಂದೂರು ಗ್ರಾಮದ ಮೂಲಕ ಮೆರವಣಿಗೆಯಲ್ಲಿ ಜಾತ್ರೆ ಸೇರುವ ಮಾಳಕ್ಕೆ ತಂದು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಶುಕ್ರವಾರ ಸಂಜೆ ಕುಂದೂರು ಗ್ರಾಮಕ್ಕೆ ತೆರಳುವ ಉತ್ಸವಮೂರ್ತಿ ಶನಿವಾರ ದಡದಹಳ್ಳಿಗೆ ತೆರಳಲಿದ್ದು, ಗ್ರಾಮದಲ್ಲಿ ಮೆರವಣಿಗೆ ಬಳಿಕ ತಂಗಲಾಗುವುದು. ಭಾನುವಾರ ಮತ್ತೆ ದಡದಹಳ್ಳಿಯಿಂದ ಕುಂದೂರು ಗ್ರಾಮಕ್ಕೆ ಆಗಮಿಸುವ ಉತ್ಸವಮೂರ್ತಿ ಬೆಟ್ಟಕ್ಕೆ ತಲುಪಲಿದೆ.

ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸರಗೂರು ಸಿಪಿಐ ಲಕ್ಷ್ಮಿಕಾಂತ ಹಾಗೂ ಎಸ್‌ಐ ಶ್ರವಣದಾಸರೆಡ್ಡಿ ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು. ಅಲ್ಲದೇ ಜಾತ್ರೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್ ನೇತೃತ್ವದಲ್ಲಿ ಭಕ್ತರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಯಿತು. ಅನ್ನದಾಸೋಹ ಆಯೋಜಿಸಲಾಗಿತ್ತು.

ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ, ತಾಪಂ ಇಓ ರಘು, ತಾಪಂ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಪಾರುಪತ್ತೇದಾರ್ ಮಹದೇವಸ್ವಾಮಿ, ಸಂಚಾಲಕ ಮಹದೇವ್, ಶಿವಾರ್ಚಕರಾದ ದೇವಣ್ಣ, ಚಿಕ್ಕದೇವಣ್ಣ, ನಾಗಣ್ಣ, ನಿಂಗರಾಜು, ಶಿವಕುಮಾರ್, ಸಂತೋಷ್, ನೀಲಕಂಠ, ಪ್ರಸನ್ನ, ವೀರಣ್ಣ, ಗ್ರಾಪಂ ಸದಸ್ಯ ಚಿನ್ನಸ್ವಾಮಿ, ಶಿವಕುಮಾರ್, ಕುಂದೂರು ಅಕ್ಕಪಕ್ಕದ ಗ್ರಾಮದ ಯಜಮಾನರು, ಮುಖಂಡರು, ಯುವಕ ಸಂಘದವರು, ಜಾತ್ರಾ ಕಮಿಟಿ ಸರ್ವ ಸದಸ್ಯರು ಭಾಗಿಯಾಗಿದ್ದರು.

ಘಟ್ಟವಾಡಿ ಗ್ರಾಮದಲ್ಲಿ ಸತ್ಯನಾರಾಯಣ ಪೂಜೆ



ದೊಡ್ಡಕವಲಂದೆ, ಜ.6– ನಂಜನಗೂಡು ತಾಲೂಕಿನ ಘಟ್ಟವಾಡಿ ಗ್ರಾಮದಲ್ಲಿ ದೊಡ್ಡಕವಲಂದೆ ವಲಯ ಮಟ್ಟದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ವತಿಯಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಿತು.

ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೌಲಂದೆ ಎಸ್‌ಐ ಮಹೇಂದ್ರ ಆಡು ಮುಟ್ಟದ ಸೊಪ್ಪಿಲ್ಲ ಧರ್ಮಸ್ಥಳ ಸಂಘ ಮಾಡದ ಕಾರ್ಯಗಳಿಲ್ಲ ಎಂದು ಬಣ್ಣಿಸಿದರಲ್ಲದೆ, ಶ್ರೀಕ್ಷೇತ್ರ ಸಂಘ ನಮ್ಮ ಭಾಗದಲ್ಲಿ ಅನೇಕ ಪ್ರಗತಿಪರ ಕಾರ್ಯ ಕೈಗೊಂಡಿದೆ. ಮಹಿಳೆಯರಿಗೆ ಪ್ರಗತಿನಿಧಿ, ಮನೆಗಳಿಗೆ ಸೋಲಾರ್, ಕೃಷಿಕರಿಗೆ ಕೃಷಿ ಅನುದಾನ, ವಯಸ್ಸಾದವರಿಗೆ, ನಿರ್ಗತಿಕರಿಗೆ ಮಾಸಾಶನ ಮಕ್ಕಳ ವಿಕಾಸಕ್ಕಾಗಿ ಜ್ಞಾನ ವಿಕಾಸ ಕಾರ್ಯಕ್ರಮ, ಸಾಮಾನ್ಯ ಸೇವಾ ಕೇಂದ್ರ, ಜೀವವಿಮೆ ಹೀಗೆ ಹಲವು ಕಾರ್ಯಕ್ರಮಗಳನ್ನು ಗ್ರಾಮೀಣ ಭಾಗದಲ್ಲಿ ಮಾಡುತ್ತಾ ಬಂದಿರುವ ಶ್ರೀಕ್ಷೇತ್ರವು ಮಹಿಳಾ ಸಬಲೀಕರಣ, ರೈತರ ಹಿತಕ್ಕಾಗಿ ಶ್ರಮಿಸುತ್ತಿರುವ ಸಂಸ್ಥೆ ಎಂದರು

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಶಂಕರ ನಾಯ್ಕ, ಪ್ರಕಾಶ್, ಚಿಕ್ಕನಾಗಣ್ಣ, ಮಾದಶೆಟ್ಟಿ, ಸಿದ್ದಲಿಂಗಯ್ಯ, ಹರವೇ ಶ್ರೀಕ್ಷೇತ್ರದ ಸ್ವಾಮೀಜಿ, ಗ್ರಾಮೀಣಾಭಿವೃದ್ಧಿ ವಲಯಾಧಿಕಾರಿ ಆನಂದಗೌಡ, ಧನಲಕ್ಷ್ಮಿ, ರೇಣುಕಮ್ಮ, ರಾಜಮ್ಮ ಇತರರಿದ್ದರು.

ಕಬಿನಿಯಲ್ಲಿ ಜಿಂಕೆ ಬೇಟೆಯಾಡಿದ ಹುಲಿರಾಯ!





ಹೆಚ್.ಡಿ.ಕೋಟೆ, ಜ.6– ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕಬಿನಿ ಹಿನ್ನೀರಿನ ಬಳಿ ಹುಲಿ ತನ್ನ 4 ಮರಿಗಳ ಆಹಾರಕ್ಕಾಗಿ ಗರ್ಭಿಣಿ ಜಿಂಕೆ ಬೇಟೆಯಾಡಿದ ದೃಶ್ಯ ಸಫಾರಿಗೆ ತೆರಳಿದ್ದ ಪ್ರವಾಸಿಗರ ಕ್ಯಾಮರಾಗೆ ಸೆರೆ ಸಿಕ್ಕಿದೆ.

ತಾಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರಕ್ಕೆ ವನ್ಯಜೀವಿ ಛಾಯಾಗ್ರಾಹಕ ಮಣಿಕಂಠ ಕಬಿನಿ ಅವರು ಸಫಾರಿಗೆ ತೆರಳಿದ್ದ ಸಂದರ್ಭ ಕಬಿನಿ ಹಿನ್ನೀರಿನ ಬಳಿಯ ಮಾಸ್ತಿಗುಡಿ ಸಮೀಪ ವನ್ಯಜೀವಿ ಛಾಯಾಗ್ರಾಹಕರಿಗೆ ಹಾಗೂ ಪ್ರವಾಸಿಗರಿಗೆ ಹಲವು ಬಾರಿ ದರ್ಶನ ನೀಡಿರುವ ಕಬಿನಿ ಬ್ಯಾಕ್ ವಾಟರ್ ಫ್ರೀಮ್ಯಾನ್ ಎಂದೇ ಕರೆಯಲ್ಪಡುವ ಹೆಣ್ಣು ಹುಲಿ ತನ್ನ ಒಂದು ವರ್ಷದ ನಾಲ್ಕು ಮರಿಗಳಿಗೆ ಆಹಾರಕ್ಕಾಗಿ ಗರ್ಭಿಣಿ ಜಿಂಕೆಯನ್ನು ಬೇಟೆಯಾಡಿದ ಚಿತ್ರವನ್ನು ಸೆರೆ ಹಿಡಿದಿದ್ದಾರೆ.

ವನ್ಯಜೀವಿ ಛಾಯಾಗ್ರಹಕ ಮಣಿಕಂಠ ಕಬಿನಿ ಮಾತನಾಡಿ, ಶುಕ್ರವಾರ ಮಧ್ಯಾಹ್ನ ಸಫಾರಿಗೆ ತೆರಳಿದ್ದ ವೇಳೆ ಕಬಿನಿ ಹಿನ್ನೀರಿನ ಬಳಿಯ ಹಳೇ ಮಾಸ್ತಿಗುಡಿ ರಸ್ತೆ ಬಳಿ ಹುಲಿ ಜಿಂಕೆ ಬೇಟೆಯಾಡುವ ದೃಶ್ಯವನ್ನು ಸೆರೆ ಹಿಡಿಯಲಾಯಿತು ಎಂದು ತಿಳಿಸಿದ್ದಾರೆ.

ಮೂಗೂರಲ್ಲಿ ವಿಜೃಂಭಣೆಯ ಬಂಡೀ ಜಾತ್ರೆ

ಮೂಗೂರು, ಜ.6– ಹಳೇ ಮೈಸೂರು ಭಾಗದಲ್ಲಿ ಮೂಗೂರು ಬಂಡಿ ಎಂದೇ ಖ್ಯಾತಿ ಪಡೆದಿರುವ ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಸರಳವಾಗಿ ಜಾತ್ರೆ ನಡೆಸಲಾಗಿತ್ತು. ಆದರೆ ಈ ಬಾರಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ಕಟ್ಟುನಿಟ್ಟಿನ ಸೂಚನೆ ಮೇರೆಗೆ ಅದ್ದೂರಿಯಾಗಿ ಆಚರಿಸಲಾಯಿತು.

ಮೂಗೂರು ಬಂಡಿ ಅಂಗವಾಗಿ ಬೆಳಗ್ಗೆಯಿಂದಲೇ ಅಮ್ಮನವರ ದೇವಾಲಯದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆಯಿತು. 11.45ಕ್ಕೆ ಅಮ್ಮನವರ ಉತ್ಸವ ಮೂರ್ತಿಯನ್ನು ದೇಗುಲ ಪ್ರದಕ್ಷಿಣೆ ಹಾಕಿ ರುದ್ರಾಕ್ಷಿ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು. ಹರಕೆ ಹೊತ್ತ ಭಕ್ತರು ಬಂಡಿಗೆ ಈಡುಗಾಯಿ ಒಡೆದ ಬಳಿಕ ರುದ್ರಾಕ್ಷಿ ಮಂಟಪೋತ್ಸವ ಬಂಡಿ ಮಂಟಪಕ್ಕೆ ತಲುಪುತ್ತಿದ್ದಂತೆ ಅಮ್ಮನವರಿಗೆ ಪೂಜೆ ಸಲ್ಲಿಸಿ, ಭಕ್ತರ ಶಿಳ್ಳೆ ಚಪ್ಪಾಳೆ ಝೇಂಕಾರದೊಂದಿಗೆ



ಮೊದಲ ಬಂಡಿ ಓಟಕ್ಕೆ ಚಾಲನೆ ನೀಡಲಾಯಿತು. ಬಂಡಿ ಓಟ ವೀಕ್ಷಣೆಗಾಗಿ ಬಂಡಿ ಬೀದಿಯಲ್ಲಿ ಭಾರೀ ಜನಸ್ತೋಮ ನೆರೆದಿದ್ದು, ಓಟದ ರೋಚಕ ಕ್ಷಣ ಕಣ್ತುಂಬಿಕೊಳ್ಳಲು ಸಂಜೆವರೆಗೂ ಜನ ಕಾದು ಕುಳಿತ್ತಿದ್ದರು.



ಸಂಕ್ರಾಂತಿ ಹಬ್ಬದ ಅಂಗವಾಗಿ ಸಾಲಿಗ್ರಾಮದಲ್ಲಿ ಜಿಪಂ ಮಾಜಿ ಅಧ್ಯಕ್ಷ ಸಾ.ರಾ. ನಂದೀಶ್ 5 ಸಾವಿರ ಮಹಿಳೆಯರಿಗೆ ಅರಿಶಿಣ, ಕುಂಕುಮ, ಬಳೆ, ರವಿಕೆ ಕಣ, ಸೀರೆ, ಎಳ್ಳು ಬೆಲ್ಲ, ತೆಂಗಿನಕಾಯಿ, 2023ರ ನೂತನ ಕ್ಯಾಲೆಂಡರ್ ಒಳಗೊಂಡ ಸಂಕ್ರಾಂತಿ ಉಡುಗೊರೆ ನೀಡುವ ಕಾರ್ಯಕ್ಕೆ ಚಾಲನೆ ನೀಡಿದರು. ಈ ವೇಳೆ ಶಾಸಕ ಸಾ.ರಾ.ಮಹೇಶ್ ಪತ್ನಿ ಅನಿತಾ ಮಹೇಶ್, ಸಾ.ರಾ.ನಂದೀಶ್ ಅವರ ಪತ್ನಿ ಸುನಿತಾ ನಂದೀಶ್, ತಾಲೂಕು ಕಸಾಪ ಅಧ್ಯಕ್ಷ ಮಧುಚಂದ್ರ, ಜೆಡಿಎಸ್ ಅಧ್ಯಕ್ಷ ರಾಜಣ್ಣ ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಸೇವಾ ಕಾರ್ಯಗಳೊಂದಿಗೆ ಶಾಸಕ ಬಿ.ಹರ್ಷವರ್ಧನ್ ಹುಟ್ಟುಹಬ್ಬ ಆಚರಣೆ





ನಂಜನಗೂಡು, ಜ.6– ನಗರದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ, ತಾಲೂಕಿನ ಹರತಲೆ ಗ್ರಾಮದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಅಭಿಮಾನಿ ಬಳಗದಿಂದ ಅಂಗವಿಕಲರು ಮತ್ತು ಬಡವರಿಗೆ ಹೊದಿಕೆ, ಶಾಲಾ ಮಕ್ಕಳಿಗೆ ಸಿಹಿ ವಿತರಣೆ, ಗಿಡ ನೆಡುವ ಕಾರ್ಯಕ್ರಮ ಸೇರಿದಂತೆ ಸೇವಾ ಕಾರ್ಯಗಳೊಂದಿಗೆ ಶುಕ್ರವಾರ ಶಾಸಕ ಬಿ.ಹರ್ಷವರ್ಧನ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹಣ್ಣುಹಂಪಲು ವಿತರಣೆ: ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ ಮಾತನಾಡಿದ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕ ಬಿ.ಹರ್ಷವರ್ಧನ್ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಲಾಗುತ್ತಿದೆ ಎಂದರು.

ಈ ಭಾಗದ ರೈತರ ದಶಕಗಳ ಬೇಡಿಕೆಯಾಗಿದ್ದ ನುಗು ಏತ ನಿರಾವರಿ ಯೋಜನೆ ಜಾರಿಗೊಳಿಸಲು ಶಾಸಕ ಹರ್ಷವರ್ಧನ್ ಕಾರಣರಾಗಿದ್ದಾರೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ 700 ಕೋಟಿಗೂ ಹೆಚ್ಚು ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಜೊತೆಗೆ ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸಿದ್ದಾರೆ. ದೀನ ದಲಿತರ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಅವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. ಅಂತಹ ಸರಳ ಸಜ್ಜನಿಕೆ ಶಾಸಕರ ಹುಟ್ಟುಹಬ್ಬವನ್ನು ರೋಗಿಗಳಿಗೆ ಬ್ರೆಡ್, ಹಾಲು, ಹಣ್ಣು ಹಂಪಲು ವಿತರಣೆ, ಎಲ್ಲಾ ಬೂತ್ ಮಟ್ಟದಲ್ಲಿ ಸಿಹಿ ವಿತರಣೆ, ಶಾಲಾ ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನಿ ವಿತರಣೆ, ಬಡವರಿಗೆ ಹೊದಿಕೆ ವಿತರಣೆ, ಗಿಡ ನೆಡುವಂತಹ ಸಾಮಾಜಿಕ ಚಟುವಟಿಕೆಗಳ ಮೂಲಕ ಆಚರಣೆ ನಡೆಸಲಾಗುತ್ತಿದ್ದು, ದೇವರು ಅವರಿಗೆ ಆರೋಗ್ಯ ಐಶ್ವರ್ಯ ಕೊಟ್ಟು ಕಾಪಾಡಲಿ, ಮುಂದಿನ ಚುನಾವಣೆಯಲ್ಲಿ ಗೆದ್ದು ಮಂತ್ರಿಯಾಗಲಿ ಎಂದು ಶುಭ ಹಾರೈಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಮಾಜಿ ಸದಸ್ಯರಾದ ಶಿವಣ್ಣ, ಬಿ.ಎಸ್.ರಾಮು, ಶಿವಣ್ಣ, ಮುಖಂಡರಾದ ಮಹೇಶ್‌ಬಾಬು, ಸೋಮಶೇಖರ್, ಅಬ್ದುಲ್ ರಜಾಕ್, ಪ್ರಜ್ವಲ್ ಶಶಿ, ಸಿದ್ದರಾಜು, ಮಹದೇವಸ್ವಾಮಿ, ಬಿಜೆಪಿ ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ ಇತರರಿದ್ದರು.

ಹೊದಿಕೆ ವಿತರಣೆ: ತಾಲೂಕಿನ ಹರತಲೆ ಗ್ರಾಮದಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಅಭಿಮಾನಿ ಬಳಗದಿಂದ ಅಂಗವಿಕಲರು ಮತ್ತು ಬಡವರಿಗೆ ಹೊದಿಕೆ ವಿತರಣೆ, ಸಿಹಿ ವಿತರಣೆ, ಗಿಡ ನೆಡುವ ಕಾರ್ಯಕ್ರಮಗಳ ಮೂಲಕ ಶಾಸಕ ಬಿ. ಹರ್ಷವರ್ಧನ್ ಹುಟ್ಟುಹಬ್ಬವನ್ನು ವಿನೂತನವಾಗಿ ಆಚರಿಸಲಾಯಿತು.

ಸಿ.ಚಿಕ್ಕರಂಗನಾಯಕ ಮಾತನಾಡಿ, ನಂಜನಗೂಡನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸುವ ಮೂಲಕ ಸ್ಯಾಟಲೈಟ್ ಟೌನ್ ಆಗಿ ರೂಪಿಸುವ ಸಲುವಾಗಿ ಕ್ಷೇತ್ರಕ್ಕೆ ಅನೇಕ ಯೋಜನೆ ತಂದು ಕಾರ್ಯಗತಗೊಳಿಸಿದ್ದಾರೆ. ಶ್ರೀಕಂಠೇಶ್ವರ ದೇವಾಲಯವನ್ನು ತಿರುಪತಿ ಮಾದರಿ ಅಭಿವೃದ್ಧಿ ಪಡಿಸುವ ಸಲುವಾಗಿ 3 ಕೋಟಿ ವೆಚ್ಚದಲ್ಲಿ ಬೆಳ್ಳಿ ರಥ ನಿರ್ಮಾಣ, 75 ಕೊಠಡಿಗಳ ಅತಿಥಿ ಗೃಹ ನಿರ್ಮಾಣ ಮತ್ತು ನುಗು ಏತ ನಿರಾವರಿ ಯೋಜನೆ, ಹೆಡಿಯಾಲ ಭಾಗದ ಕೆರೆಗಳ ಪುನಶ್ಚೇತನಕ್ಕೆ ಅನುದಾನ ತಂದು ಶ್ರಮಿಸಿದ್ದಾರೆ. ಅವರಿಗೆ ದೇವರು ಇನ್ನಷ್ಟು ರಾಜಕೀಯ ಶಕ್ತಿಕೊಟ್ಟು ಕಾಪಾಡಲಿ ಎಂದರು.

ಈ ವೇಳೆ ಗ್ರಾಪಂ ಸದಸ್ಯರಾದ ನಾಗರಾಜು, ಗೋವಿಂದರಾಜು, ಕಾಂತರಾಜು, ಮಹಾಲಕ್ಷ್ಮಿ, ಶಿವನಾಯಕ, ಮರಿಗಂಡನಾಯಕ, ಇದ್ದರು.



ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಈಶ ಯೋಗ ಕೇಂದ್ರದಲ್ಲಿ ಹೆಚ್.ಡಿ. ಕೋಟೆ–ಸರಗೂರು ತಾಲೂಕು ಪತ್ರಕರ್ತರ ಸಂಘದ 2023ನೇ ಸಾಲಿನ ನೂತನ ದಿನದರ್ಶಿಕೆಯನ್ನು ಈಶ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಬಿಡುಗಡೆಗೊಳಿಸಿದರು. ಈ ವೇಳೆ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಸತೀಶ್ ಆರಾಧ್ಯ, ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮು, ಉಪಾಧ್ಯಕ್ಷ ಮಂಜು ಕೋಟೆ, ಕಾರ್ಯದರ್ಶಿ ಮಂಜು ಬೀಚನಹಳ್ಳಿ, ಖಜಾಂಚಿ ದೊಡ್ಡಸಿದ್ದು, ನಿರ್ದೇಶಕರಾದ ಮಹೇಶ್, ನಾಗೇಶ್, ಸದಸ್ಯರಾದ ವಾಸುಕಿ ನಾಗೇಶ್ ಇದ್ದರು.

ಜಿ.ಎನ್.ದೊರೆಸ್ವಾಮಿ ನಿಧನ



ತಿ.ನರಸೀಪುರ, ಜ.6– ತಾಲೂಕಿನ ವರುಣಾ ಕ್ಷೇತ್ರದ ಗೆಜ್ಜಗನಹಳ್ಳಿ ಗ್ರಾಮದ ವೀರಶೈವ ಹಿರಿಯ ಮುಖಂಡ ಜಿ.ಎನ್. ದೊರೆಸ್ವಾಮಿ(78) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರ ತಾಯೂರು ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

12 ಲಕ್ಷ ಸಾಲಕ್ಕೆ ಚಕ್ರಬಡ್ಡಿ ಸೇರಿ 40 ಲಕ್ಷ ಕಟ್ಟುವಂತೆ ಒತ್ತಾಯ: ಸಾಲಬಾಧೆ ತಾಳಲಾರದೆ ಸಾಮೂಹಿಕ ಆತ್ಮಹತ್ಯೆ

ತಿರುವನಂತಪುರಂ, ಜ.6– ಕುರಿಂಕುಳಂನಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ನಡೆದಿದೆ. ಮೂವರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ರಮೇಶನ್ ಅವರು ವಿವಿಧ ಉದ್ದೇಶಗಳಿಗಾಗಿ ಖಾಸಗಿ ವ್ಯಕ್ತಿಗಳಿಂದ 12 ಲಕ್ಷ ರೂ. ಸಾಲ ಮಾಡಿದ್ದು, ಬಡ್ಡಿ ಸೇರಿ 40 ಲಕ್ಷ ರೂಪಾಯಿಗೆ ಕಟ್ಟುವಂತೆ ಒತ್ತಾಯಿಸಲಾಯಿತು. ಆಸ್ತಿ, ಮನೆ ಮಾರಿ ಸಾಲ ತೀರಿಸಲು ಯತ್ನಿಸಿದರೂ ಫಲಕಾರಿಯಾಗದೆ ಕುಟುಂಬ ಆತ್ಮಹತ್ಯೆ ಮಾಡಿಕೊಂಡಿದೆ.

ಕರಿಂಕುಳಂ ಪಶ್ಚಿಮ ಮೂಲೆಯಲ್ಲಿರುವ ಚಿರಕ್ಕಲ್ ಕಾರ್ತಿಕ ಎಂಬವರ ಮನೆಯಲ್ಲಿ ಮಲಗುವ ಕೋಣೆಯಲ್ಲಿ ಬೆಂಕಿ ಹಚ್ಚಿಕೊಂಡು ರಮೇಶ (48), ಅವರ ಪತ್ನಿ ಸುಲಜಾ ಕುಮಾರಿ (46) ಮತ್ತು ಪುತ್ರಿ ರೇಷ್ಮಾ (23) ಮೃತಪಟ್ಟಿದ್ದಾರೆ.

ಸುಲಜಾ ಕುಮಾರಿ ಅವರ ತಂದೆ ವಿದೇಶಕ್ಕೆ ಹೋಗಲು ವರ್ಷಗಳ ಹಿಂದೆ ಸಾಲ ಮಾಡಿದ್ದರು. ನಂತರ, ವಿವಿಧ ಉದ್ದೇಶಗಳಿಗಾಗಿ ಮತ್ತು ಸಾಲದ ಹಣವನ್ನು ಮರುಪಾವತಿಸಲು ಬಡ್ಡಿಗೆ ಹಣವನ್ನು ತೆಗೆದುಕೊಳ್ಳಲಾಗಿದೆ. ಸಾಲ ಹೆಚ್ಚಾಗುತ್ತಿದ್ದಂತೆ ರಮೇಶನೂ ಸಾಲ ತೀರಿಸಲು ಗಲ್ಫ್‌ಗೆ ಹೋಗಿ ಸಾಲ ಮಾಡಿಕೊಂಡಿದ್ದ. ಅಂದಿನಿಂದ ಮರುಪಾವತಿ ಮಾಡಲಾಗಿತ್ತು. ಆದರೆ ದೊಡ್ಡ ಮೊತ್ತದ ಬಡ್ಡಿ ಮರುಪಾವತಿಸುವಂತೆ ಲೇವಾದೇವಿಗಾರರು ಮನೆಗೆ ಬಂದು ಗಲಾಟೆ ಮಾಡಿದ್ದರು. 22 ಜನರಿಗೆ ಹಣ ಪಾವತಿಸಬೇಕಾಗಿತ್ತು.

ಹಣವನ್ನು ಮರುಪಾವತಿಸಲು ರಮೇಶ ಗಲ್ಫ್‌ಗೆ ತೆರಳಿದ್ದರೂ ಇಷ್ಟು ದೊಡ್ಡ ಮೊತ್ತದ ಬಡ್ಡಿಯನ್ನು ಸಂಬಳದಿಂದ ಮರುಪಾವತಿಸಲು ಸಾಧ್ಯವಾಗಲಿಲ್ಲ. ಸಾಲ ಕೊಟ್ಟ ಕೆಲವರು ಆಸ್ತಿ, ಮನೆ ಮಾರಿ ಹಣ ವಾಪಸ್ ನೀಡುವುದಕ್ಕೆ ಒಪ್ಪಲಿಲ್ಲ. ಹಣ ಬದಲು ಜಮೀನು ಬಿಟ್ಟು ಕೊಡುವಂತೆ ಕೆಲವರು ಪ್ರಕರಣ ದಾಖಲಿಸಿದ್ದರಿಂದ ಮನೆ, ಜಮೀನು ಖರೀದಿಸಲು ಬಂದವರು ಮನೆ, ಜಮೀನು ಖರೀದಿಯಿಂದ ಹಿಂದೆ ಸರಿದರು. ಸಾಲ ಮಾಡಿ ಸಾಲ ತೀರಿಸಲು ಯತ್ನಿಸಿದರೂ ಫಲಕಾರಿಯಾಗಲಿಲ್ಲ.



ಜಿಲ್ಲಾ ಪಂಚಾಯತ್ ಮೈಸೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಮೈಸೂರು–570005
ದೂರವಾಣಿ: 0821–2526301.

ಸಂಖ್ಯೆ:ಡಿ.ಆರ್.ಡಿ.ಎ(1)/ಉಖಾಯೋ/2022–23/27862 ದಿನಾಂಕ: 05.01.2023

ಪತ್ರಿಕಾ ಪ್ರಕಟಣೆ

ಮೈಸೂರು ಜಿಲ್ಲೆಯ 2023–24ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಜಲ ಸಂಜೀವಿನಿ ಕಾರ್ಯಕ್ಷಮತೆ, ಜಲಾನಯನ ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕುರಿತು ನಿವೃತ್ತಿ ಹೊಂದಿರುವ ಅಧಿಕಾರಿಗಳು ಅಥವಾ ಸರ್ಕಾರೇತರ/ಇತರೆ ಸಂಸ್ಥೆಗಳಲ್ಲಿ 10 ವರ್ಷ ಅನುಭವ ಹೊಂದಿರುವ ಜಲ ಸಂಜೀವಿನಿ ಜಿಲ್ಲಾ ಸಂಯೋಜಕರನ್ನು (JSDC) ಜಿಲ್ಲಾ ಮಟ್ಟದ ಹೊರಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ Bsc (Agriculture) ಅಥವಾ B.Tech (Agriculture engineering) ಪದವೀಧರರನ್ನು ಒಂದು ವರ್ಷಕ್ಕೆ (ಅವಶ್ಯಕತೆಗೆ ಅನುಗುಣವಾಗಿ ಇವರ ಸೇವಾ ಅವಧಿಯನ್ನು ವಿಸ್ತರಿಸಲಾಗುವುದು) ಸೇವೆಯನ್ನು ಪಡೆಯಲು ಅರ್ಹ ಅಭ್ಯರ್ಥಿಗಳನ್ನು ನಿಯಮಾನುಸಾರ ಆಯ್ಕೆ ಮಾಡಬೇಕಾಗಿರುತ್ತದೆ. ಅದರಂತೆ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಮಾರ್ಗ ಸೂಚಿಗಳಂತೆ ಅರ್ಜಿಗಳನ್ನು ಆಹ್ವಾನಿಸಿದೆ. ಮಹಾತ್ಮ ಗಾಂಧಿ–ನರೇಗಾ ಶಾಖೆ(DRDA) ಜಿ.ಪಂ. ಮೈಸೂರು ಕಛೇರಿಯಿಂದ ಕೆಲಸದ ಅವಧಿಯಲ್ಲಿ ಅರ್ಜಿಯನ್ನು ಪಡೆದುಕೊಳ್ಳುವುದು. **ದಿನಾಂಕ 06.01.2023 ರಿಂದ ದಿನಾಂಕ 13.01.2023**ರ ವರೆಗೆ ಅರ್ಜಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದ್ದು ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ: 13.01.2023ರ ಸಂಜೆ 5.00 ಗಂಟೆಯೊಳಗೆ** ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಶಾಖೆಯನ್ನು ಸಂಪರ್ಕಿಸುವುದು.

ಅರ್ಹತೆಗಳು: 1. Bsc(Agriculture) ಅಥವಾ Btech. (Agriculture Engineering) ಪದವೀಧರರಾಗಿರಬೇಕು. 2. ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದ ನಿವೃತ್ತ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಕನಿಷ್ಠ 10 ವರ್ಷ ಅನುಭವ ಹೊಂದಿರಬೇಕು. 3. ಕನಿಷ್ಠ ಸಹಾಯಕ ಕೃಷಿ ನಿರ್ದೇಶಕ ಹುದ್ದೆಯಲ್ಲಿ ನಿವೃತ್ತಿ ಹೊಂದಿರುವ ಅಧಿಕಾರಿಗಳು. 4. ಜಿಲ್ಲಾಪಂಚಾಯಿತಿ ಹಾಗೂ ಇತರೇ ಅನುಷ್ಠಾನ ಇಲಾಖೆಗಳೊಡನೆ ಸಮನ್ವಯ ಸಾಧಿಸುವ ಸಾಮರ್ಥ್ಯ ಹೊಂದಿರಬೇಕು. 5. ಸತತವಾಗಿ ಕ್ಷೇತ್ರ ಭೇಟಿ ಮಾಡುವ ಹಾಗೂ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯ ಹೊಂದಿರಬೇಕು. 6. ಗರಿಷ್ಠ 65 ವರ್ಷ ವಯೋಮಿತಿ.
ದೂರವಾಣಿ ಸಂಖ್ಯೆ (ಮೊ): 9980001309.

ಸಹಿ/– ಮೆ:ಮೇಘಾ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್
ಪ್ಲಾಟ್ ನಂ.659, ಕೀರ್ತಿನಗರ, ವಿಜಯಪುರ–586101.

DIPR/MYS/KAVITA/853/2022-23

43 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

IN THE COURT OF THE CIVIL JUDGE AND M.A.C.T KODAGU AT KHUSHALNAGAR
F.D.P No: 2/1988

Petitioner: Sri. Thimmappa VS
Respondents: Shivamma and others

Notice to the proposed Respondent No-2

K.T Thulasamma, D/o late Thimmappa, Aged 61 years, house wife, R/o Maddur, Maddur Taluk, Mandya Dist.

Take notice that, the above named petitioner registered case against you and others for the relief of partition and the above case stands posted to 07.02.2023 at 11A.M for your appearance. It is hereby notified that. you have to put you are appearance either in person or through an advocate on the said date and time. Failing which the matter will be heard and decided ex-partee.

Given under my hand and the seal of the Court, This 4th day of jan 2023.

By order of the court
Sd/- Chief Ministerial officer,
Civil Judge and JMFC Court at Khushalnagar, Kodagu District
Sd/- R.K.Nagendra, Advocate for the petitioner.

ಮೈಸೂರು ವೆಲ್ಲಾಳ ಅಸೋಸಿಯೇಷನ್ (ರಿ.)
76 ಎಂಪಿಎ ಬಿಲ್ಡಿಂಗ್, ಮಾನಸರ ರಸ್ತೆ, ಇಂದಿರಾನಗರ, ಮೈಸೂರು.

ಇದರ ಮುಂದಿನ 1 (ಒಂದು)ವರ್ಷದ ಅವಧಿಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ದಿನಾಂಕ : 08–12–2022ರ ಆಡಳಿತ ಮಂಡಳಿ ತೀರ್ಮಾನದ ರೀತ್ಯಾ, ನನ್ನನ್ನು ಚುನಾವಣಾಧಿಕಾರಿಯನ್ನಾಗಿ ನೇಮಕಾತಿ ಮಾಡಿಕೊಂಡಿದ್ದು, ಈ ಸಂಬಂಧ 29.01.2023ರ ಭಾನುವಾರ ಬೆಳಿಗ್ಗೆ 9.00 ಘಂಟೆಯಿಂದ ಮಧ್ಯಾಹ್ನ 3.00 ಘಂಟೆಯವರೆಗೆ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಈ ಕೆಳ ಕಂಡಂತೆ ಪ್ರಕಟಿಸಿರುತ್ತೇನೆ. 1) ನಾಮಿನೇಷನ್ ಪತ್ರಗಳನ್ನು ಸ್ವೀಕರಿಸಲಾಗುವ ಪ್ರಾರಂಭದ ದಿನಾಂಕ: ದಿ.12.01.2023ನೇ ಗುರುವಾರ ಬೆಳಿಗ್ಗೆ 11.00 ಗಂಟೆಯಿಂದ ಅಪರಾಹ್ನ 2.00 ಗಂಟೆಯವರೆಗೆ ಸಂಘದ ಕಛೇರಿ ಆವರಣದಲ್ಲಿ ಮತ್ತು ಕೊನೆಯ ದಿನಾಂಕ19.01.2023. 2) ನಾಮಿನೇಷನ್ ಅರ್ಜಿಗಳನ್ನು ಪರಿಶೀಲಿಸುವುದು ಮತ್ತು ಉಮೇದುದಾರರ ಪಟ್ಟಿ ಪ್ರಕಟಿಸುವುದು : ದಿ.20.01.2023ನೇ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಗಳಿಂದ. 3) ನಾಮಿನೇಷನ್ ಅರ್ಜಿಗಳನ್ನು ವಾಪಸ್ ಪಡೆಯಲು ಕೊನೆಯ ದಿನಾಂಕ : ದಿ.21.01.2023ನೇ ಶನಿವಾರ ಮಧ್ಯಾಹ್ನ 03.00 ಗಂಟೆಯ ಒಳಗೆ ಚುನಾವಣಾಧಿಕಾರಿಗಳಿಗೆ ಸಂಘದ ಕಛೇರಿಯಲ್ಲಿ. 4) ಅರ್ಹತೆ ಪಡೆದ ಉಮೇದುವಾರರ ಅಂತಿಮ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು: ದಿ.21.01.2023ನೇ ಶನಿವಾರ ಮಧ್ಯಾಹ್ನ 03.00 ಗಂಟೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ಚುನಾವಣಾಧಿಕಾರಿಗಳಿಂದ ಮತ್ತು ಚುನಾವಣೆ ದಿ:29.01.2023. 5) ಚುನಾವಣೆ ನಡೆಯುವ ದಿನಾಂಕ, ವೇಳೆ ಮತ್ತು ಸ್ಥಳ: ದಿ:29.01.2023ನೇ ಭಾನುವಾರ ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಸಂಘದ ಕಛೇರಿಯ ಆವರಣದಲ್ಲಿ. 6) ಮತಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ: ದಿ: 29.01.2023ನೇ ಭಾನುವಾರ ಮತದಾನ ಮುಕ್ತಾಯವಾದ ನಂತರ ಫಲಿತಾಂಶ ಪ್ರಕಟಣೆ ಚುನಾವಣಾಧಿಕಾರಿಗಳಿಂದ.

ಸಹಿ/–